ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

Swabhimani Sahakari

Pages : 42 / 20₹


# ಸ್ವಾಭಿಮಾನಿ ಸಹಕಾರಿ


ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 20
Issue - 09
September - 2023





## 22ನೇ ವಾರ್ಷಿಕ ಸಾಮಾನ್ಯ ಸಭೆ





ಜಿ. ನಂಜನಗೌಡ

ಎಲ್ಲರಿಗೂ ಶ್ರೀ ಕೃಷ್ಣಜನ್ಮಾಷ್ಟಮಿ, ಸೇಂಟ್ ಮೇರಿ ಹಬ್ಬ, ವಿಶ್ವಕರ್ಮ ಜಯಂತಿ, ಸ್ವರ್ಣಗೌರಿ, ಶ್ರೀ ಗಣೇಶ ಚತುರ್ಥಿ ಹಾಗೂ ಈದ್‌ಮಿಲಾದ ಹಬ್ಬಗಳ ಶುಭಾಶಯಗಳು. ಸಂಯುಕ್ತ ಸಹಕಾರಿಯ 22ನೇ ವಾರ್ಷಿಕ ಸಾಮಾನ್ಯ ಸಭೆ ಅತ್ಯಂತ ವೈಭವದಿಂದ ವಿಜ್ರಂಭಣೆಯಿಂದ ಮತ್ತು ಅರ್ಥಪೂರ್ಣವಾಗಿ ತಮ್ಮೆಲ್ಲರ ಸಂಪೂರ್ಣ ಸಹಕಾರದಿಂದ ಜರುಗಿದೆ ಎಂದು ತಿಳಿಸಲು ಸಂತೋಷವೆನಿಸುತ್ತದೆ. 22ನೇ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದ ಎಲ್ಲ ಸಹಕಾರಿ ಬಂಧುಗಳಿಗೆ ಆಡಳಿತ ಮಂಡಳಿಯ ಪರವಾಗಿ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

# ಸಂಯುಕ್ತ ಸಹಕಾರಿಯ 22ನೇ ಸಾಮಾನ್ಯ ಸಭೆ ಅರ್ಥಪೂರ್ಣ. ಸಹಕಾರಕ್ಕಾಗಿ ಧನ್ಯವಾದಗಳು.

**ಆತ್ಮೀಯ ಸಹಕಾರಿ ಬಂಧುಗಳೆ,**

ಎಲ್ಲರಿಗೂ ಶ್ರೀ ಕೃಷ್ಣಜನ್ಮಾಷ್ಟಮಿ, ಸೇಂಟ್ ಮೇರಿ ಹಬ್ಬ, ವಿಶ್ವಕರ್ಮ ಜಯಂತಿ, ಸ್ವರ್ಣಗೌರಿ, ಶ್ರೀ ಗಣೇಶ ಚತುರ್ಥಿ ಹಾಗೂ ಈದ್‌ಮಿಲಾದ ಹಬ್ಬಗಳ ಶುಭಾಶಯಗಳು. ಸಂಯುಕ್ತ ಸಹಕಾರಿಯ 22ನೇ ವಾರ್ಷಿಕ ಸಾಮಾನ್ಯ ಸಭೆ ಅತ್ಯಂತ ವೈಭವದಿಂದ ವಿಜ್ರಂಭಣೆಯಿಂದ ಮತ್ತು ಅರ್ಥಪೂರ್ಣವಾಗಿ ತಮ್ಮೆಲ್ಲರ ಸಂಪೂರ್ಣ ಸಹಕಾರದಿಂದ ಜರುಗಿದೆ ಎಂದು ತಿಳಿಸಲು ಸಂತೋಷವೆನಿಸುತ್ತದೆ. 22ನೇ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದ ಎಲ್ಲ ಸಹಕಾರಿ ಬಂಧುಗಳಿಗೆ ಆಡಳಿತ ಮಂಡಳಿಯ ಪರವಾಗಿ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ವಾರ್ಷಿಕ ಸಮಾನ್ಯ ಸಭೆಯಲ್ಲಿ ಭಾಗವಹಿಸಿದ ಪ್ರತಿನಿಧಿಗಳ ಚರ್ಚೆ ಪ್ರಶ್ನೆಗಳು ನಡೆದುಕೊಂಡ ರೀತಿ ಅರ್ಥಪೂರ್ಣವಾಗಿತ್ತು. **"ಸೌಹಾರ್ದ ಸಹಕಾರಿಗಳ ಈ ನಡೆ ಗುಣಮಟ್ಟದ ಕಡೆ"** ಎಂಬ ಸಂಯುಕ್ತ ಸಹಕಾರಿಯ ಘೋಷವಾಕ್ಯವನ್ನು ಸಮರ್ಥಿಸಿದೆ ಎಂದು ಆಡಳಿತ ಮಂಡಳಿ ಹೆಮ್ಮೆ ಪಡುವಂತಾಗಿದೆ.

ಸಂಯುಕ್ತ ಸಹಕಾರಿಯ 22ನೇ ಸಾಮಾನ್ಯ ಸಭೆಯ ಸಂದರ್ಭದಲ್ಲಿ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನೆ, ಶ್ರೇಷ್ಠ ಸಹಕಾರಿಗಳಿಗೆ ಸನ್ಮಾನ, ಉತ್ತಮ ಸಹಕಾರ ಸಂಸ್ಥೆಗಳ ಸನ್ಮಾನ, ಶಾಸಕ ಶ್ರೀ ನಿಖಿಲ್ ಕತ್ತಿ , ಪ್ರಧಾನ ಕಾರ್ಯದರ್ಶಿ ಶ್ರೀ ಮಂಜುನಾಥ ಪ್ರಸಾದ, ಸಂಯುಕ್ತ ಸಹಕಾರಿಯ ದಾವಾ ನ್ಯಾಯ ಪಂಚಾಯಿತಿ ಪೀಠಾಧಿಕಾರಿ ಶ್ರೀ ಪ್ರಸಾದರೆಡ್ಡಿಯವರುಗಳ ಹಾಗೂ ಸದಸ್ಯರ ಸಕ್ರೀಯ ಭಾಗವಹಿಸುವಿಕೆ ಸೌಹಾರ್ದ ಸಹಕಾರಿಗಳು ಅಭಿವೃದ್ಧಿ ಕಡೆಗೆ ಗಮನಹರಿಸುವಂತೆ ಕಿವಿಮಾತುಗಳು ಎಲ್ಲವೂ ಅತ್ಯಂತ ಪರಿಣಾಮಕಾರಿಯಾಗಿತ್ತು. ಈ ಯಶಸ್ಸಿಗೆ ಸಹಕರಿಸಿದ್ದಕ್ಕೆ ಎಲ್ಲ ಸಹಕಾರಿ ಬಂಧುಗಳಿಗೆ ಸಂಯುಕ್ತ ಸಹಕಾರಿಯ ಸಿಬ್ಬಂದಿಯವರಿಗೆ ಧನ್ಯವಾದಗಳು.

ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀ ಮಂಜುನಾಥ ಪ್ರಸಾದ ರವರು ಸಹಕಾರ ಇಲಾಖೆಯ ಪ್ರತಿನಿಧಿಯಾಗಿ ನಾನು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೇನೆ. ಸೌಹಾರ್ದ ಸಹಕಾರ ಕ್ಷೇತ್ರದ ಆಶಯ, ಕಾರ್ಯಚಟುಟಿಕೆಗಳು ವಿಭಿನ್ನವಾಗಿರವುದು ಗಮನಾರ್ಹ ವಿಷಯ. ಸರಕಾರ ಈ ಕ್ಷೇತ್ರದ ಅಭಿವೃದ್ಧಿಗೆ ಸಂಪೂರ್ಣ ಸಹಕಾರವನ್ನು ನೀಡುತ್ತದೆ ಈ ಕ್ಷೇತ್ರ ಇನ್ನೂ ಬೆಳೆಯಬೇಕು ಎಂದು ತಿಳಿಸಿರುವುದು ನಮೆಲ್ಲ ಸೌಹಾರ್ದ ಸಹಕಾರಿಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಿದೆ. ರಾಜ್ಯದ ಸೌಹಾರ್ದ ಸಹಕಾರಿಗಳು ಈ ಸಂದರ್ಭದಲ್ಲಿ ನಮ್ಮ ಈ ಸೌಹಾರ್ದ ಸಹಕಾರಿ ಕ್ಷೇತ್ರದ ಆರೋಗ್ಯಕರ ಬೆಳವಣಿಗೆ ಬಗ್ಗೆ ಹೆಚ್ಚು ಗಮನ ಹರಿಸಬೇಕಾಗಿದೆ ಎಂಬುದನ್ನು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ತಮ್ಮೆಲ್ಲರಲ್ಲಿ ಕಳಕಳಿಯಿಂದ ಪ್ರಾರ್ಥಿಸುತ್ತದೆ. ಮತ್ತು ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳಿಗೆ ಸಂಪೂರ್ಣ ಸಹಕಾರವನ್ನು ಅಪೇಕ್ಷಿಸುತ್ತದೆ.

**ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ**

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು

ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ಮಹಾಂತಪ್ಪ ಎಸ್. ಎಮ್
ಸದಸ್ಯರು

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
“ಸೌಹಾರ್ದ ಸಹಕಾರಿ ಸೌಧ” ನಂ.68, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

**ಒಳಪುಟಗಳಲ್ಲಿ. . .**

ಅಧ್ಯಕ್ಷರ ನುಡಿ........................................ 2
ಸಂಪಾದಕೀಯ........................................ 3
ಜ್ಞಾನ ಜ್ಯೋತಿ........................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ........................................ 05–25
**ಲೇಖನಗಳು :**
ಸೌಹಾರ್ದ ಸಹಕಾರಿ ಕಾಯ್ದೆ ಆಶಯ ಮತ್ತು ಚಟುವಟಿಕೆಗಳ ಬಗ್ಗೆ ವಿಸ್ತೃತ ಅರಿವು ಹಾಗೂ ಪ್ರಚಾರ ಅಗತ್ಯ (ಭಾಗ –2) ........................................ 35–37
ಗುರು ಗುರಿ ಇದ್ದರೆ ಯಶಸ್ಸು ಖಚಿತ : ಶಿಕ್ಷಕರ ದಿನಾಚರಣೆಯ ಇತಿಹಾಸ, ಮಹತ್ವ, ಆಚರಣೆ ........................................ 38
ಸ್ವಾತಂತ್ರ ದೇಶದಲ್ಲಿ 13 ತಿಂಗಳ ನಂತರ ಸ್ವಾತಂತ್ರ ಪಡೆದ ಈಗಿನ ಕಲ್ಯಾಣ ಕರ್ನಾಟಕ (ಹೈದ್ರಬಾದ್ ಪ್ರಾಂತ) ..................... 40–42

# ಸಂಪಾದಕೀಯ

## ಸೌಹಾರ್ದ ಸಹಕಾರಿ ಚಳುವಳ/ಕಾಯ್ದೆ ಆಶಯ, ಬೆಳವಣಿಗೆಯ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿ ಜೊತೆಗೆ ಜವಾಬ್ದಾರಿ ಹೆಚ್ಚಿಸಿದ ಮಾನ್ಯ ಪ್ರಧಾನ ಕಾರ್ಯದರ್ಶಿಗಳಿಗೆ ಸಹಕಾರಿಗಳ ಕೃತಜ್ಞತೆ.

ಸಂಯುಕ್ತ ಸಹಕಾರಿಯ 22ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀ ಮಂಜುನಾಥ ಪ್ರಸಾದರವರು ಸರಕಾರದ ಪ್ರತಿನಿಧಿಯಾಗಿ ನಾನು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೇನೆ ನನಗೆ ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಂತೋಷವಾಗಿದೆ. ಕರ್ನಾಟಕ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ 6000ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸುತ್ತಿರುವುದು ಸಂತೋಷಕರ. ಇದು ಇನ್ನೂ ಬೆಳೆಯಬೇಕು ಎಂದು ತಿಳಿಸಿರುವುದು ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಹೆಚ್ಚಿನ ಸಂತೋಷ ಉಂಟುಮಾಡಿರುವುದು ಸ್ವಾಗತಾರ್ಹ ಬೆಳವಣಿಗೆ. ರಾಜ್ಯದ ಸೌಹಾರ್ದ ಸಹಕಾರಿಗಳ ಈ ವಾರ್ಷಿಕ ಮಹಾಸಭೆ ಸಹಕಾರಿಗಳಿಗೆ ಹೆಚ್ಚಿನ ಮಾಹಿತಿಗಳನ್ನು ನೀಡುವ ಉತ್ಸಾಹವನ್ನು ನೀಡುವ ಸಂಘಟನಾ ಶಕ್ತಿಯನ್ನು ಹೆಚ್ಚಿಸುವ ವಿವಿಧ ಕ್ಷೇತ್ರದ ಹಾಗೂ ವಿವಿಧ ಸಹಕಾರಿ ಸಂಸ್ಥೆಗಳ ಪ್ರಗತಿಗಳನ್ನು ಅಧ್ಯಯನ ಮಾಡುವ ಅವಕಾಶವಾಗಿರುತ್ತದೆ.

ಇದೇ ಸಂದರ್ಭದಲ್ಲಿ ರಾಜ್ಯದ ಉತ್ತಮ ಸೌಹಾರ್ದ ಸಹಕಾರಗಳಿಗೆ ಶ್ರೇಷ್ಠ ಸಹಕಾರಿಗಳಿಗೆ ಸನ್ಮಾನಿಸುವ ಕಾರ್ಯಕ್ರಮ ರಾಜ್ಯದ ಬೇರೆ ಸೌಹಾರ್ದ ಸಹಕಾರಿಗಳಿಗೆ ತಾವು ತಮ್ಮ ಸಹಕಾರಿಯನ್ನು ಉತ್ತಮವಾಗಿ ನಡೆಸಿಕೊಂಡು ಹೋಗಲು ಪ್ರೇರೇಪಣೆಯಾದಂತಾಗುತ್ತದೆ. ಮತ್ತು ತಾವುಗಳು ಸಹ ಉತ್ತಮ ಸಹಕಾರಿ ನಾಯಕರಾಗಿ ಶ್ರೇಷ್ಠ ಸಹಕಾರಿ ಎನಿಸಿಕೊಳ್ಳುವ ಹಾಗೂ ಪ್ರಶಸ್ತಿಗೆ ಪಾತ್ರರಾಗುವ ಅವಕಾಶಗಳು ಸಾಧ್ಯವಾಗುತ್ತದೆ. ಇದುವರೆಗೆ ರಾಜ್ಯದ 45 ಉತ್ತಮ ಸೌಹಾರ್ದ ಸಹಕಾರಿಗಳಿಗೆ ಹಾಗೂ 45 ಶ್ರೇಷ್ಠ ಸಹಕಾರಿಗಳಿಗೆ ಮತ್ತು 42 ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಿಗೆ ಸಂಯುಕ್ತ ಸಹಕಾ–ರಿಯ ವಾರ್ಷಿಕ ಸಾಮಾನ್ಯ ಸಭೆ ಜರುಗಿದ ಸಂದರ್ಭದಲ್ಲಿ ಅಭಿನಂದಿಸಲಾಗಿದೆ. ಈ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ಹಾಗೂ ಸಾಧನೆಗಳಿಗೆ ಇದು ಪೂರಕ. ಈ ಸಂದರ್ಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀ ಮಂಜುನಾಥ ಪ್ರಸಾದರವರು ಈ ಕ್ಷೇತ್ರ ಇನ್ನೂ ಬೆಳೆಯಬೇಕು ಎಂಬುದಾಗಿ ತಿಳಿಸಿರುವುದು ಸಂಯುಕ್ತ ಸಹಕಾರಿಗೆ ಹಾಗೂ ಸೌಹಾರ್ದ ಸಹಕಾರಿಗಳಿಗೆ ಹೆಚ್ಚಿನ ಜವಾಬ್ದಾರಿಯನ್ನು ಹೆಚ್ಚಿಸಿದಂತಾಗಿದೆ. ಈ ಜವಾಬ್ದಾರಿಯನ್ನು ಸೌಹಾರ್ದ ಸಹಕಾರಿಗಳು ಈ ಕ್ಷೇತ್ರ ಇನ್ನೂ ಹೆಚ್ಚು ಬೆಳೆಯುವಂತಾಲು ತಮ್ಮ ವ್ಯಾಪ್ತಿಯಲ್ಲಿ ಇನ್ನೂ ಹೆಚ್ಚು ಸೌಹಾರ್ದ ಸಹಕಾರಿಗಳನ್ನು ಪ್ರಾರಂಭಿಸುವುದಕ್ಕೆ ಇರುವ ಅವಕಾಶಗಳನ್ನು ಗುರುತಿಸುವ ಕಾರ್ಯವಾಗಬೇಕು. ಸೌಹಾರ್ದ ಸಹಕಾರಿಗಳ್ನು ಪ್ರಾರಂಭಿಸುವ ಕಾರ್ಯವಾಗಬೇಕು. ಈ ಕಾರ್ಯವನ್ನು ಎಲ್ಲ ಸಹಕಾರಿಗಳು ಹೆಚ್ಚಿನ ಆಸಕ್ತಿ ವಹಿಸಿ ನಿರ್ವಹಿಸುವ ಅಗತ್ಯ ಇದೆ.



# ಜ್ಞಾನ ಜ್ಯೋತಿ

– ಶ್ರೀ ಸಿದ್ಧೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

## "ಪ್ರಾಮಾಣಿಕತೆ"

ಕ್ಷಣ ಕ್ಷಣವೂ ನಾವು ಉಸಿರಾಡುತ್ತೇವೆ. ಮಲಗುವಾಗ, ಏಳುವಾಗ, ಕೂಡುವಾಗ, ನಡೆಯುವಾಗ, ಯಾವಾಗಲೂ ಉಸಿರಾಟದ ಕ್ರಿಯೆ ನಿರಂತರ ನಡದೇ ಇರುತ್ತದೆ. ಆದರೆ ನಾವು ಉಸಿರಾಡುತ್ತೇವೆ ಎಂಬುದೇ ನಮ್ಮ ಗಮನಕ್ಕೆ ಬರುವುದಿಲ್ಲ. ಅಷ್ಟು ಸಹಜವಾಗಿ, ನರಾಯಾಸವಾಗಿ ಉಸಿರಾಟದ ಕ್ರಿಯೆ ನಡೆದಿರುತ್ತದೆ. ಹಾಗೆಯೇ ನಮ್ಮ ದೈನಂದಿನ ಕ್ರಿಯೆಗಳು ಸಹಜವಾಗಿ, ನಿರಾಯಸವಾಗಿ ನಡೆಯಬೇಕು. ನಾನು ದುಡಿಯುತ್ತಿದ್ದೇನೆ. ಮಾಡುತ್ತಿದ್ದೇನೆ ಎಂಬ ಕಲ್ಪನೆಯೂ ಬರದಂತೆ ನಾವು ದುಡಿದರೆ ಅದೇ ಯೋಗ ಜೀವನ ಸಹಜ ಉಸಿರಾಟದ ಮೇಲೆ ಜೀವನ ನಿಂತಿದೆ. ಸಹಜ ಕ್ರಿಯೆಗಳ ಮೆಲೆ ಯೋಗಜೀವನ ಅವಲಂಬಿಸಿದೆ.

ಮಾಡುವ ಕಾರ್ಯಗಳಲ್ಲಿ ಸಣ್ಣದು ದೊಡ್ಡದು ಎಂಬ ಭೇದ – ಭಾವ ಇರಬಾರದು. ಕಾರ್ಯಗಳ ಹಿಂದಿರುವ ಉದ್ದೇಶ ಒಳ್ಳೆಯದಾಗಿರಬೇಕು. ಆ ಕಾರ್ಯಗಳನ್ನು ಅಷ್ಟೇ ಪ್ರೀತಿಯಿಂದ ಮಾಡಬೇಕು. ಯಾರನ್ನಾದರೂ ಬೈಯುವಾಗ, ಪ್ರೀತಿಯಿಂದ ಬೈದರೆ ಅದು ಬೈಗುಳವಾಗುವುದಿಲ್ಲ. ಬದಲಾಗಿ ಅದೊಂದು ಮೆಚ್ಚುಗೆಯ ಮಾತಾಗುತ್ತದೆ. ಸಂತಸವನ್ನೇ ತರುತ್ತದೆ ವಾದ ವಿವಾದದಲ್ಲಿ ಪ್ರೀತಿಯಿದ್ದರೆ ಅದು ವಾದ–ವಿವಾದ ಆಗುವುದಿಲ್ಲ ಸಂವಾದ ವಾಗುತ್ತದೆ. ಒಟ್ಟಿನಲ್ಲಿ ಪ್ರೀತಿಯಿಂದ ಜಗಳಾಡಿದರೆ ಅದು ಜಗಳ ವಾಗುವುದಿಲ್ಲ, ಮೋಜು ಆಗುತ್ತದೆ ಹೀಗೆ ಪೂರ್ಣಯೋಗವು ನಮ್ಮ ಬದುಕನ್ನೇ ಭವ್ಯವಾಗಿ, ದಿವ್ಯವಾಗಿ ಪರಿವರ್ತಿಸುತ್ತದೆ.

ನಾವು ಮಾಡುವ ಕಾರ್ಯಗಳಲ್ಲಿ ಪ್ರಾಮಾಣಿಕತೆ ಇರಬೇಕು. ಪ್ರಾಮಾಣಿಕತೆ ಇಲ್ಲದೆ ಮಾಡಿದ ಯಾವುದೇ ಕಾರ್ಯ ಯೋಗ ವಾಗುವುದಿಲ್ಲ. ಸತ್ಯದ ತಳಹದಿಯ ಮೇಲೆ ನಡೆದ ಕಾರ್ಯವೇ ಕಾಯಕ ವಾಗುತ್ತದೆ. ತರುಗಾಯಿ ರಾಮಣ್ಣ ಹನ್ನೆರಡನೆ ಶತಮಾನದ ಶಿವರಣ, ದನ ಕಾಯುವುದು, ಅವನ ಕಾಯಕ, ಅದರಲ್ಲೇ ಅವನು ಸತ್ಯಶಿವ ದರ್ಶನ ಮಾಡಿಕೊಂಡವ. ಅವನು ತನ್ನ ಕಾಯಕದಲ್ಲಿ ಎಷ್ಟು ಪ್ರಾಮಾಣೀಕನಾಗಿದ್ದ ಎನ್ನವುದು ಅವನ ಒಂದು ವಚನದಲ್ಲಿ ವ್ಯಕ್ತವಾಗಿದೆ.

**ಹಸುವಿಗೆ ಹಾಗ, ಎತ್ತಿಗೆ ಹಣವಡ್ಡ**
**ಕರುವಿಗೆ ಮೂರು ಹಣ;**
**ಎಮ್ಮೆ ಕೋಣ ಕಲವ ನಾ ಕಾಯಲಿಲ್ಲ.**
**ಅವು ಎನ್ನ ತರುವಿಗೆ ಹೊರಗು**
**ತೊಂಡು ಹೋಗದಂತೆ ಕಾದೊಪ್ಪಿಸುವೆ**
**ಗೋಪಿನಾಥ ವಿಶ್ವೇಶ್ವರ ಲಿಂಗಕ್ಕೆ**

ಹಸುವಿಗೆ ಒಂದು ಹಾಗ, ಎತ್ತಿಗೆ ಹಣವಡ್ಡ, ಕರುವಿಗೆ ಮೂರು ಹಣ ಆತ ಪಡೆಯುತ್ತಿದ್ದ, ಎಮ್ಮೆ ಕೋಣಗಳನ್ನು ರಾಮಣ್ಣ ಕಾಯಲಿಲ್ಲ. ಏಕೆಂದರೆ ಅವು ತಾಮಸ ಪ್ರವೃತ್ತಿಯವಾಗಿವೆ.

ತರುಗಾಯಿ ರಾಮಣ್ಣನು 'ತೊಂಡ ಹಾಯದಂತೆ' ದನಗಳನ್ನು ಮೇಯಿಸಿದ ಧೀಮಂತ ಅವನು ಮೇಯಿಸಿದ ನಂತರ ಎಂಥ ಹಸಿರು ಕಂಡರೂ ದನಗಳು ತಿರುಗಿ ನೋಡುತ್ತಿರಲಿಲ್ಲ. ಹಾಗೆ ದನಗಳನ್ನು ಹೊಟ್ಟೆ ತುಂಬ ಮೇಯಿಸುತ್ತಿದ್ದ, ನಾವು ಮೇಯಿಸಿದ ದನಗಳು ದಾರಿಯಲ್ಲಿ ಹಸಿರು ಕಾಣುವುದೇ ತಡ ಆ ಕಡೆಗೆ ಓಡಿ ಹೋಗುತ್ತವೆ. ಏಕೆಂದರೆ ನಮ್ಮ ಕೆಲಸದಲ್ಲಿ ಪ್ರಮಾಣಿಕತೆ ಇಲ್ಲ.

ನಾವು ದೊಡ್ಡ ದೊಡ್ಡ ಹುದ್ದೆಯಲ್ಲಿ ಇರುತ್ತೇವೆ. ಮಾನ ಮಾರ್ಯದೆ ಘನತೆ–ಗೌರವ ಎಲ್ಲವೂ ಇರುತ್ತದೆ. ಸಿರಿ ಸಂಪದಕ್ಕೂ ಕೊರತೆ ಇರುವುದಿಲ್ಲ. ಆದರೆ ನಮ್ಮ ಜೀವನದಲ್ಲಿ ಒಂದೇ ಒಂದು ಕೊರತೆ ಎದ್ದು ಕಾಣುತ್ತಿರುತ್ತದೆ. ಅದೇ, ಜೀವನದಲ್ಲಿ ಶಾಂತಿ–ಸಮಾಧಾನ ಇರುವುದಿಲ್ಲ. ಏನಿರ್ದಡೆ ಏನು ಕಾನನದ ಬೆಳದಿಂಗಳದಂತೆ ಎಲ್ಲವೂ ವ್ಯರ್ಥ ಅಥವಾ ನಿರರ್ಥಕ ಎನಿಸುತ್ತಿರುತ್ತದೆ. ಅದಕ್ಕೆ ಕಾರಣ ಬೇರೆ ಏನೂ ಅಲ್ಲ ನಮ್ಮ ಬದುಕಿನಲ್ಲಿ ಪ್ರಮಾಣಿಕತೆ ಮಾಯವಾಗಿರುತ್ತದೆ. ಏಕೆಂದರೆ ಜೀವನದಲ್ಲಿ ಪ್ರಾಮಾಣಿಕತೆ ಬರುವುದು ಅಷ್ಟು ಸುಲಭಸಾಧ್ಯವಲ್ಲ.

ಅಂತರಂಗದ ಕತ್ತಲೆ ಕಳೆದಾಗ ಅಲ್ಲಿ ಸತ್ಯದ ಜ್ಯೋತಿ ಬೆಳಗುತ್ತದೆ! ಬದುಕಿನಲ್ಲಿ ಶಾಂತಿ ಸಮಾಧಾನ ನಲೆಸುತ್ತದೆ. ಅದು ಸತ್ಯ ಶುದ್ಧ ಕಾಯಕದ ಪ್ರತಿಫಲ, ಅದು ಪ್ರಾಮಾಣಿಕತೆ, ಅದೇ ಪೂರ್ಣಯೋಗ!!

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 29,549 ಆಗಿರುತ್ತದೆ. ಇವುಗಳ ಪೈಕಿ 20,611 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 9,499.

**ಆಗಸ್ಟ್ ತಿಂಗಳ ಪ್ರಕರಣಗಳು :** ದಾವಾ ಪ್ರಕರಣ – 345 ಇತ್ಯರ್ಥಗೊಂಡ ಪ್ರಕರಣಗಳು 268

**ಅಮಲ್ಜಾರಿ ಪ್ರಕರಣಗಳು :** ಒಟ್ಟು 7,470 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 1,498 ಪ್ರಕರಣಗಳು ಇತ್ಯರ್ಥಗೊಂಡಿದ್ದು, 5,972 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಆಗಸ್ಟ್ ತಿಂಗಳಿನಲ್ಲಿ 107 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ.

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ 22ನೇ ವಾರ್ಷಿಕ ಸಾಮಾನ್ಯ ಸಭೆ – ಸಂಭ್ರಮ ಸಡಗರ ಹಾಗೂ ಅರ್ಥಪೂರ್ಣ ಸಭೆ.

## ಧ್ವಜಾರೋಹಣ :

ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ಇವರು ಸಹಕಾರ ಧ್ವಜಾರೋಹಣ ಕಾರ್ಯಕ್ರಮವನ್ನು 9:45 ಕ್ಕೆ ನೆರವೇರಿಸಿ ರಾಷ್ಟ್ರ ಗೀತೆ ನಂತರ ಎಲ್ಲ ಸಹಕಾರಿಗಳಿಗೆ ರಾಷ್ಟ್ರೀಯ ಐಕ್ಯತಾ ಪ್ರತಿಜ್ಞೆಯನ್ನು ಭೋದಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎ ಆರ್ ಪ್ರಸನ್ನಕುಮಾರ್ ಹಾಗೂ ಎಲ್ಲಾ ನಿರ್ದೇಶಕರು ಹಾಗೂ ವ್ಯವಸ್ಥಾಪಕ ನಿರ್ದೇಶಕರು ಮತ್ತು ರಾಜ್ಯದ ಜಿಲ್ಲೆಗಳ ಸೌಹಾರ್ದ ಸಹಕಾರಿಯ ಪ್ರತಿನಿಧಿಗಳು ಉಪಸ್ಥಿತರಿದ್ದರು.





## ತಂತ್ರಜ್ಞಾನ ಮೇಳ ಹಾಗೂ ವಸ್ತು ಪ್ರದರ್ಶಿನಿ ಉದ್ಘಾಟನೆ :

ತಂತ್ರಜ್ಞಾನ ಮೇಳವನ್ನು ಬೆಳಿಗ್ಗೆ 9:50ಕ್ಕೆ ಹಿರಿಯ ಸಹಕಾರಿ ಹಾಗೂ ಸಂಯುಕ್ತ ಸಹಕಾರಿಯ ಮಾಜಿ ಉಪಾಧ್ಯಕ್ಷರಾದ ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠರವರು ಮತ್ತು ಹಿರಿಯ ಸಹಕಾರಿ ಶ್ರೀ ಮಂಜಪ್ಪ ಹೊಸಬಾಳೆಯವರುಗಳು ಉದ್ಘಾಟಿಸಿದರು.


## ಸಾಮಾನ್ಯ ಸಭೆ :

ಸಂಯುಕ್ತ ಸಹಕಾರಿಯ 22ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 29ನೇ ಅಗಸ್ಟ 2023ರಂದು "ಪ್ರಿನ್ಸೆಸ್ ಗಾಲ್ಫ್ ಅರಮನೆ ಮೈದಾನ, ಬಳ್ಳಾರಿ ರಸ್ತೆ, ಬೆಂಗಳೂರು" ಇಲ್ಲಿ ಬೆಳಿಗ್ಗೆ 10.00ಕ್ಕೆ ಸರಿಯಾಗಿ ಅಮ್ಮರಾಮಚಂದ್ರ ಹಾಗೂ ತಂಡದವರಿಂದ ಪ್ರಾರ್ಥನೆ ಹಾಗೂ ಸಹಕಾರ ರೈತಗೀತೆ ಆಗೂ ನಾಡಗೀತೆ ಗೀತೆಯೊಂದಿಗೆ ಪ್ರಾರಂಭಿಸಲಾಯಿತು.





ಭಾಗವಹಿಸಿದ ಸಹಕಾರಿಗಳು



## ಸ್ವಾಗತ ಹಾಗೂ ಪರಿಚಯ :

ಸಭಾ ಕಾರ್ಯಕ್ರಮವನ್ನು ಅಮ್ಮರಾಮಚಂದ್ರ ಹಾಗೂ ತಂಡದವರಿಂದ ಪ್ರಾರ್ಥನೆ ಹಾಗೂ ಸಹಕಾರಗೀತೆಯೊಂದಿಗೆ ಪ್ರಾರಂಭಿಸಲಾಯಿತು. ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎ ಆರ್ ಪ್ರಸನ್ನಕುಮಾರ್ ಇವರು ಅತಿಥಿ ಗಣ್ಯರಿಗೆ, ಪ್ರತಿನಿಧಿಗಳಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರು ಎಲ್ಲಾ ನಿರ್ದೇಶಕರುಗಳಿಗೆ ಹಾಗೂ ಎಲ್ಲಾ ಸಹಕಾರಿಗಳಿಗೆ ಸ್ವಾಗತ ಮಾಡಿದರು.

**ಉದ್ಘಾಟನೆ** : 22ನೇ ವಾರ್ಷಿಕ ಸಾಮಾನ್ಯ ಸಭೆಯ ಉದ್ಘಾಟನಾ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ನೆರವೇರಿಸಿದರು.



## ಸಂತಾಪ ಕಾರ್ಯಕ್ರಮ :

ಪ್ರಸಕ್ತ ಸಾಲಿನಲ್ಲಿ ನಿಧನರಾಗಿರುವ ಗಣ್ಯರಿಗೆ ಹಾಗೂ ಸಹಕಾರಿಗಳಿಗೆ ಸಂತಾಪಸೂಚಿಸುವ ಕಾರ್ಯಕ್ರಮವನ್ನು ಎರಡು ನಿಮಿಷ ಮೌನ ಆಚರಿಸುವುದರೊಂದಿಗೆ ನಡೆಸಲಾಯಿತು. ನಿಧನರಾದ ಸೌಹಾರ್ದ ಸಹಕಾರಿಗಳ ಹೆಸರುಗಳನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್‌ರವರು ಓದಿದರು.



## ಅಧ್ಯಕ್ಷರ ಪ್ರಾಸ್ತಾವಿಕ ಭಾಷಣ :

ಸಂಯುಕ್ತ ಸಹಕಾರಿಯ ಮಾನ ್ಯಅಧ್ಯಕ್ಷರಾದ ಶ್ರೀ ಜಿ ನಂಜನಗೌಡರವರು ಭಾಷಣ ಮಾಡಿ ರಾಜ್ಯದ ಸೌಹಾರ್ದ ಸಹಕಾರಿಕ್ಷೇತ್ರ ಪ್ರಗತಿ 2022–23ನೇ ಸಾಲಿನ ಶಾಸನ ಬದ್ಧ ಹಾಗೂ ಶಿಕ್ಷಣ ಹಾಗೂ ತರಬೇತಿ ಕಾರ್ಯಕ್ರಮಗಳು, ಸಂಪರ್ಕ ಸಭೆಗಳು, ಪತ್ರಿಕಾಗೋಷ್ಠಿಗಳು, ವಾರ್ಷಿಕ ಸಾಮಾನ್ಯ ಸಭೆಯ ವೈಶಿಷ್ಠತೆ, ಟಾಸ್ಕ್‌ಫೋರ್ಸ್ ಕಾರ್ಯಚಟುವಟಿಕೆಗಳು ಹಾಗೂ ಸಂಯುಕ್ತ ಸಹಕಾರಿಯ ನೂತನ ಕಟ್ಟಡಗಳ ಉದ್ಘಾಟನೆ, ನೂತನ ಶಿಕ್ಷಣ ಚಟುವಟಿಕೆಗಳ ಪ್ರಾರಂಭ, ಸದಸ್ಯ ಶಿಕ್ಷಣಕ್ಕೆ ಆದ್ಯತೆ ಹೀಗೆ ಎಲ್ಲ ವಿಷಯಗಳನ್ನು ಸಾಮಾನ್ಯ ಸಭೆಯ ಗಮನಕ್ಕೆ ತಂದು ಎಲ್ಲ ಕಾರ್ಯಗಳಿಗೆ ಪ್ರೋತ್ಸಾಹ ನೀಡುತ್ತಿರುವ ರಾಜ್ಯದ ಎಲ್ಲ ಸೌಹಾರ್ದ ಸಹಕಾ–ರಿಗಳಿಗೆ ಕೃತಜ್ಞತೆ ಸಲ್ಲಿಸಿದರು.

## ಸಾಮಾನ್ಯ ಸಭೆಯ ಕಾರ್ಯಕಲಾಪಗಳು :



ಸಂಯುಕ್ತ ಸಹಕಾರಿಯ 22ನೇ ವಾರ್ಷಿಕ ಸಾಮಾನ್ಯ ಸಭೆಯ ಕಾರ್ಯಕಲಾಪಗಳನ್ನು ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ಇವರ ಅಧ್ಯಕ್ಷತೆಯಲ್ಲಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ವಾರ್ಷಿಕ ಸಾಮಾನ್ಯ ಸಭೆಯ ವಿಷಯ ಪಟ್ಟಿಯಂತೆ ವಿಷಯಗಳ ಪ್ರಸ್ತಾವನೆ ಮಾಡಿದರು. ಸಭೆಯು ಅರ್ಥಪೂರ್ಣ ಚರ್ಚೆ ನಡೆಸಿ ಸರ್ವಾನುಮತದಿಂದ ಎಲ್ಲಾ ವಿಷಯಗಳಿಗೆ ಅನುಮೋದನೆ ನೀಡಿತು.

22ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ 151 ಪ್ರತಿನಿಧಿಗಳು ಹಾಗು 1500ಕ್ಕೂ ಹೆಚ್ಚೂ ಸಹಕಾರಿಗಳು ಭಾಗವಹಿಸಿದ್ದರು. ಸಾಮಾನ್ಯ ಸಭೆಯ ಅಂಗವಾಗಿ ಸದಸ್ಯ ಸಹಕಾರಿಗಳಿಗೆ ಹೆಚ್ಚಿನ ತಾಂತ್ರಿಕತೆಯನ್ನು ಪರಿಚಯಿಸುವುದಕ್ಕಾಗಿ ತಾಂತ್ರಿಕ ಮೇಳದ ವ್ಯವಸ್ಥೆ ಮಾಡಲಾಗಿತ್ತು. ಹಲವಾರು ಸೌಹಾರ್ದ ಸಹಕಾರಿಗಳು ತಮ್ಮ ಸಂಸ್ಥೆಯ ಸದಸ್ಯರಿಂದ ಉತ್ಪಾದನೆವಾಗಿರುವ ವಸ್ತುಗಳ ಮಾರಾಟ ಮಳಿಗೆಯನ್ನೂ ಕೂಡ ವ್ಯವಸ್ಥೆ ಮಾಡಲಾಗಿತ್ತು.

## - : ಅಭಿನಂದನಾ ಕಾರ್ಯಕ್ರಮ : -

### 22ನೇ ಸಾಲಿನ ಸಹಕಾರರತ್ನ ಪುರಸ್ಕೃತರಿಗೆ ಅಭಿನಂದನೆ - ಶ್ರೇಷ್ಠ ಸಹಕಾರಿಗಳಿಗೆ ಸನ್ಮಾನ- ಉತ್ತಮ ಸೌಹಾರ್ದ ಸಹಕಾರಿ ಪ್ರಶಸ್ತಿ

**ಸ್ವಾಗತ :** ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ಇವರು ಸ್ವಾಗತಯ ಮಾಡಿದರು. **ಅಧ್ಯಕ್ಷತೆ :** ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯಧ್ಯಕ್ಷರಾದ ಶ್ರೀ ಜಿ.ನಂಜನಗೌಡರವರು ವಹಿಸಿದ್ದರು.

### ಸೌಹಾರ್ದ ಸಹಕಾರಿ ಕ್ಷೇತ್ರ ಉತ್ತಮವಾಗಿ ಬೆಳೆದಿದೆ. ಇನ್ನೂ ಹೆಚ್ಚು ಉತ್ತಮವಾಗಿ ಬೆಳೆಯಬೇಕು. - ಶ್ರೀ ಮಂಜುನಾಥ ಪ್ರಸಾದ್, ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ 22ನೇ ವಾರ್ಷಿಕ ಸಾಮಾನ್ಯ ಸಭೆಯ ನಂತರದಲ್ಲಿ ಆಯೋಜಿಸಿದ್ದ ಅಭಿನಂದನಾ ಕಾರ್ಯಕ್ರಮದ ಮುಖ್ಯ ಅತಿಥಿಗಾಗಿ ಭಾಗವಹಿಸಿದ್ದ ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶ ಶ್ರೀ ಮಂಜುನಾಥ ಪ್ರಸಾದರವರು ಸಂಯುಕ್ತ ಸಹಕಾರಿಯ ಗೌರವವನ್ನು ಸ್ವೀಕರಿಸಿ ರಾಜ್ಯ 5 ಉತ್ತಮ ಸಹಕಾರಿ ಸಂಸ್ಥೆಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಗಳನ್ನು, 5 ಶ್ರೇಷ್ಠ ಸಹಕಾರಿ ವ್ಯಕ್ತಿಗಳನ್ನು, ಹಾಗೂ ಕರ್ನಾಟಕ ಸರಕಾರದ 2022ನೇ ಸಾಲಿನ 19 ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ಸೌಹಾರ್ದ ಸಹಕಾರಿಗಳನ್ನು ಅಭಿನಂದಿಸಿದರು.

ನಂತರದಲ್ಲಿ ಮಾತನಾಡಿದ ಶ್ರೀಯುತರು ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ಒಂದು ಉತ್ತಮ ಆಶಯದೊಂದಿಗೆ ಪ್ರಾರಂಭವಾಗಿದೆ. ಪ್ರಸ್ತುತ 6000 ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಇನ್ನೂ ಹೆಚ್ಚು ಬೆಳೆಯಬೇಕು. ಉತ್ತಮವಾಗಿ ಕಾರ್ಯನಿರ್ವಹಿಸಬೇಕು. ರಾಜ್ಯದ ಕೆಲವೇ ಕೆಲವು ಸೌಹಾರ್ದ ಸಹಕಾರಿಗಳು ಠೇವಣಿದಾರರಿಗೆ ಮೋಸಮಾಡಿರುವುದು, ಹಣ ದುರುಪಯೋಗಮಾಡಿರುವುದು ಕಂಡು ಬಂದಿದೆ. ಇದು ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಹಿನ್ನಡೆಯಾಗುವಂತಾಗಬಾರದು. ಸೌಹಾರ್ದ ಸಹಕಾರಿಗಳು ತಮ್ಮ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳಬೇಕು. ಜನರ ವಿಶ್ವಾಸಾರ್ಹತೆಯನ್ನು ಹೆಚ್ಚಿಸಿ ಉತ್ತಮ ಆರ್ಥಿಕ ಸಂಘಟನೆಗಳಾಗಿ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.

### ಸನ್ಮಾನ ಕಾರ್ಯಕ್ರಮ : ಶ್ರೇಷ್ಠ ಸಹಕಾರಿ ಹಾಗೂ ಉತ್ತಮ ಸೌಹಾರ್ದ ಸಹಕಾರಿ ಸಂಸ್ಥೆಗಳಿಗೆ ಸನ್ಮಾನ ಕಾರ್ಯಕ್ರಮ

ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಸಾಧನೆ ಮಾಡಿದ ಶ್ರೇಷ್ಠ ಸಹಕಾರಿ ಹಾಗೂ ಉತ್ತಮ ಸೌಹಾರ್ದ ಸಹಕಾರಿ ಸಂಸ್ಥೆಗಳಿಗೆ ಸನ್ಮಾನಿಸಲಾಯಿತು.

#### ಸನ್ಮಾನಿತರಾದ ಶ್ರೇಷ್ಠ ಸಹಕಾರಿಗಳು

1. ಶ್ರೀ ಹೆಚ್.ಎಸ್.ಶಿವಕುಮಾರ, ಮಾನ್ಯ ನಿರ್ದೇಶಕರು, ಚನ್ನಗಿರಿ ಅಡಿಕೆ ಬೆಳೆಗಾರರ ಮಾರಾಟ ಸೌಹಾರ್ದ ಸಹಕಾರಿ ಮಂಡಳಿ ನಿ., ಚನ್ನಗಿರಿ, ದಾವಣಗೆರೆ.
2. ಶ್ರೀ ಸುಭಾಷ ಶಂಕರ ಕವಲಾಪುರೆ, ಮಾನ್ಯ ಅಧ್ಯಕ್ಷರು, ಶ್ರೀ ಪ್ರಭುದೇವ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ಚಿಕ್ಕೋಡಿ, ಬೆಳಗಾವಿ.
3. ಶ್ರೀ ಲಿಂಗಣ್ಣ ಪಡಶೆಟ್ಟಿ, ಮಾನ್ಯ ನಿರ್ದೇಶಕರು, ಶಹಾಪೂರ ಸಮೃದ್ಧಿ ಸೌಹಾರ್ದ ಸಹಕಾರಿ ನಿ., ಶಹಾಪೂರ, ಯಾದಗಿರಿ
4. ಶ್ರೀ ಅಶೋಕ ಪ್ರಭು, ಮಾನ್ಯ ಅಧ್ಯಕ್ಷರು, ಜೈ ಗಣೇಶ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬ್ರಹ್ಮಾವರ, ಉಡುಪಿ
5. ಶ್ರೀ ರಾಘವೇಂದ್ರ ದಯಾನಂದ ನಾಯಕ ಮಾನ್ಯ ಅಧ್ಯಕ್ಷರು, ಗೋದಾವರಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಕುಮಟಾ, ಉತ್ತರ ಕನ್ನಡ.

#### ಸನ್ಮಾನಿತರಾದ ಸೌಹಾರ್ದ ಸಹಕಾರಿಗಳು

1. ಹೊಯ್ಸಳ ಪತ್ತಿನ ಸೌಹಾರ್ದ ಸಹಕಾರಿ ನಿ., ಹೊಯ್ಸಳ ಹೈಟ್ಸ್, ಚಿತ್ರದುರ್ಗ ರೋಡ್, ಚಳ್ಳಕೆರೆ, ಚಳ್ಳಕೆರೆ, ಚಿತ್ರದುರ್ಗ–577522
2. ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಲ್ಲದ ಬಾಗೇವಾಡಿ, ಹುಕ್ಕೇರಿ, ಬೆಳಗಾವಿ–591305
3. ಶ್ರೀ ಶರಣ ಸಕ್ಕರೆ ಕರಡೀಶ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಡೋರ್ ನಂ.17, ವಾರ್ಡ್ ನಂ.19, ಕೋಲಾಚಲಂ ಕಾಂಪೌಂಡ್, ಹಳೇ ಕೆ.ಎಸ್.ಆರ್.ಟಿ.ಸಿ. ಬಸ್‌ಸ್ಟ್ಯಾಂಡ್ ಎದುರುಗಡೆ, ಬಳ್ಳಾರಿ–583101
4. ಗಾಯತ್ರಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಟಿ.ಎಂ.ರಸ್ತೆ, ಕೆಳಪೇಟೆ, ಕೊಪ್ಪ, ಚಿಕ್ಕಮಗಳೂರು–577126
5. ಸೌಭಾಗ್ಯ ಮಹಿಳಾ ಸೌಹಾರ್ದ ಸಹಕಾರಿ ಬ್ಯಾಂಕ್ ಲಿ. ಎಪಿಎಂಸಿ ರಸ್ತೆ, ಗದಗ–582101



ಶ್ರೇಷ್ಠ ಸಹಕಾರಿ ಪ್ರಶಸ್ತಿ ಪುರಸ್ಕೃತರು



ಉತ್ತಮ ಸಹಕಾರಿ ಪ್ರಶಸ್ತಿ ಪುರಸ್ಕೃತರು

## ಸಹಕಾರ ರತ್ನ ಪುರಸ್ಕೃತರಿಗೆ ಸನ್ಮಾನ :

**ಸಹಕಾರ ರತ್ನ ಪುರಸ್ಕೃತರು :**

1. ಶ್ರೀ ಬಿ ಎಸ್ ಗಂಡೂರಾವ್, ಬೆಂಗಳೂರು, 2. ಶ್ರೀ ಮಲ್ಲಿಕಾರ್ಜುನ ಅಜ್ಜಪ್ಪ ಹೊರಕೇರಿ, ಧಾರವಾಡ, 3. ಶ್ರೀ ಸೂರ್ಯಕಾಂತ ಮಠಪತಿ, ಬೀದರ್, 4. ಶ್ರೀ ರಾಮರೆಡ್ಡಿ, ಚಿತ್ರದುರ್ಗ 5. ಶ್ರೀ ಮಲ್ಲಿಕಾರ್ಜುನಯ್ಯ, ತುಮಕೂರು. 6. ಶ್ರೀ ಸಿ ವೀರಭದ್ರಬಾಬು, ಚಿತ್ರದುರ್ಗ 7. ಶ್ರೀ ಬೆಳ್ಳೂಡಿ ರಾಮಚಂದ್ರಪ್ಪ, ದಾವಣಗೆರೆ 8. ಶ್ರೀ ಅರವಿಂದ ಬ ಮಂಗಳೂರು, ಬಾಗಲಕೋಟೆ. 9. ಶ್ರೀ ಪ್ರತಾಪ್ ಅರ್ಜುನರಾವ್ ಚವ್ಹಾಣ, ಧಾರವಾಡ 10. ಶ್ರೀ ಅನಿಲ ಪಾಟೀಲ, ಬೆಳಗಾವಿ 11. ಶ್ರೀ ಟಿ ಹೆಚ್ ಕರಿಯಪ್ಪ, ಬೆಂಗಳೂರು 12. ಡಾ. ಶಿವಶರಣಪ್ಪ ಇತ್ಲಿ, ರಾಯಚೂರು 13. ಶ್ರೀ ಶರಣಪ್ಪ ಬಸಪ್ಪ ಹ್ಯಾಟಿ, ಕೊಪ್ಪಳ 14. ಶ್ರೀ ರಾಜೇಂದ್ರ ಕುಮಾರ, ಕೊಪ್ಪಳ. 15. ಶ್ರೀ ಬಿ ವಿ ದ್ವಾರಕನಾಥ, ಬೆಂಗಳೂರು. 16. ಶ್ರೀ ಎಂ ಪಿ ಮುತ್ತಪ್ಪ, ಕೊಡಗು. 17. ಶ್ರೀ ವಿ ಜೆ ಕಾರಕೂನ, ಬೆಂಗಳೂರು. 18. ಶ್ರೀ ಎಸ್ ಎನ್ ರಾಮಸ್ವಾಮಿ, ಚಿಕ್ಕಮಗಳೂರು. 19. ಶ್ರೀ ಶ್ರೀಮಂತ ಜೆ ಇಂಡಿ, ವಿಜಯಪುರ.







ಮಾನ್ಯ ಶಾಸಕರಾದ ನಿಖಿಲ್ ಕತ್ತಿ ಇವರಿಗೆ ಸನ್ಮಾನ



ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀ ಮಂಜುನಾಥ ಪ್ರಸಾದ್ ಇವರಿಗೆ ಸನ್ಮಾನ



ಸಹಕಾರ ಇಲಾಖೆಯ ಜಂಟಿ ನಿಬಂಧಕರಾದ ಶ್ರೀ ಪ್ರಸಾದ್ ರೆಡ್ಡಿ ಇವರಿಗೆ ಸನ್ಮಾನ



ಇಫ್ಕೊ- ಟೋಕಿಯೋ ಮಳಿಗೆ ಉದ್ಘಾಟನೆ

## ಪ್ರೋ. ಯಶವಂತ ಡೋಂಗ್ರೆ ಇವರಿಂದ ಉಪನ್ಯಾಸ ಕಾರ್ಯಕ್ರಮ :



ಮಧ್ಯಾಹ್ನ 02–30 ರಿಂದ 4–00 ಗಂಟೆಯ ವರೆಗೆ ಚಾಣಕ್ಯ ವಿಶ್ವವಿದ್ಯಾಲಯದ ಉಪಕುಲಪತಿ ಸಹಕಾರಿ ಮಾರ್ಗದರ್ಶಿ ಶ್ರೀಯುತ ಯಶವಂತ ಡೋಂಗ್ರೆ ಯಿವರು ರಾಷ್ಟ್ರೀಯ ಸಹಕಾರಿ ನೀತಿ ಕರಡು ಪತ್ರದ ಮುಖ್ಯಾಂಶಗಳು, ಸುಸ್ಥಿರ ಅಭಿವೃದ್ಧಿಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ವಿಷಯದ ಬಗ್ಗೆ ಉಪನ್ಯಾಸ ನೀಡಿ ನಂತರ ಸಭೆಯಲ್ಲಿ ಉಪಸ್ಥಿತರಿದ್ದ ಪ್ರತಿನಿಧಿಗಳ ಅನೇಕ ಪ್ರಶ್ನೆಗಳಿಗೆ ಉತ್ತರ ನೀಡಿದರು ಮತ್ತು ಸಹಕಾರ ಚಳುವಳಿಯ ಅಭಿವೃದ್ಧಿಯ ಬಗ್ಗೆ ಅನೇಕ ಸಲಹೆಗಳ್ನು ನೀಡಿದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಹಿರಿಯ ಸಹಕಾರಿ ಶ್ರೀ ಎಸ್.ಆರ್ ಸತೀಶಚಂದ್ರರವರು ಮಾತನಾಡಿ ಸಹಕಾರ ಈ ದೇಶದ ಅರ್ಥ ವ್ಯವಸ್ಥೆಯ ಪ್ರಮುಖ ಅಂಗವಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಮನಗಂಡ ಈ ದೇಶದ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ಸಹಕಾರ ಕ್ಷೇತ್ರದ ಅಭಿವೃದ್ಧಿಗಾಗಿಯೇ ಕೇಂದ್ರದಲ್ಲಿ ಒಂದು ಪ್ರತ್ಯೇಕ ಸಹಕಾರ ಸಚಿವಾಲಯ ಪ್ರಾರಂಭಿಸಿದ್ದಾರೆ. ಕೇಂದ್ರ ಸಹಕಾರ ಸಚಿವಾಲಯ ರಾಷ್ಟ್ರೀಯ ಸಹಕಾರ ನೀತಿ, ಸಹಕಾರ ವಿಶ್ವವಿದ್ಯಾಲಯ, ಮಾಹಿತಿ ತಂತ್ರಜ್ಞಾನ ಅಳವಡಿಸುವಿಕೆ, ಕಾಮನ್ ಸಾಫ್ಟವೇರ್ ಮುಂತಾದ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು ಸಹಕಾರ ಕ್ಷೇತ್ರದ ಅಭಿವೃದ್ಧಿಯ ಶುಭ ಸೂಚಕ ಎಂದು ಹೇಳಿದರು.



## ಚಂದ್ರಯಾನ ವಿಜ್ಞಾನಿಗಳಿಗೆ ಸಹಕಾರಿಗಳ ಅಭಿನಂದನೆ.

ಶ್ರೀ ಎಸ್.ಆರ್.ಸತೀಶ್ಚಂದ್ರರವರು ಮಾತನಾಡುತ್ತ ನಮ್ಮ ದೇಶ ವೈಜ್ಞಾನಿಕ ಸಾಧನೆಯಲ್ಲಿ ಮುಂಚೋಣಿಯಲ್ಲಿ ಸಾಗುತ್ತಿರವುದು ಸಂತೋಷಕರ ಹಾಗೂ ಶ್ಲಾಘನೀಯ. ಚಂದ್ರಗ್ರಹದ ದಕ್ಷಿಣಭಾಗದಲ್ಲಿ ಬೇರೆಯಾವುದೇ ದೇಶಗಳು ತಲುವುದಕ್ಕೆ ಮೊದಲು ನಮ್ಮ ದೇಶದ ವಿಜ್ಞಾನಿಗಳು ಚಂದ್ರಯಾನವನ್ನ ಸಫಲಗೊಳಿಸಿದ್ದಾರೆ ಇದಕ್ಕಾಗಿ ಅವರಿಗೆ ನಮ್ಮ ದೇಶದ ಎಲ್ಲ ಸಹಕಾರಿಗಳ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸೋಣ ಎಂದು ಎರಡು ಕೈ ಮೇಲೆತ್ತಿ ಬೋಲೋ ಭಾರತ ಮಾತಾಕಿ ಜೈ, ಜೈ ವಿಜ್ಞಾನ, ಜೈ ವಿಜ್ಞಾನಿಗಳು, ಜೈ ಸಹಕಾರ ಎಂಬ ಘೋಷಣೆಗಳನ್ನು ಹಾಕಲಾಯಿತು. ಶ್ರೀ ಶರಣಗೌಡ ಜಿ. ಪಾಟೀಲರವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

## - : ಕೃತಜ್ಞತಾ ಸಭೆ : -

ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯ ಎಲ್ಲ ಅಧಿಕೃತ ಕಾರ್ಯಕ್ರಮಗಳು ಮುಗಿದ ನಂತರ ಸಿಬ್ಬಂದಿ ಸಭೆ ನಡೆಸಿದ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡರವರು ಸಿಬ್ಬಂದಿಯವರುಗಳಿಗೆ ವಹಿಸಿದ ಎಲ್ಲ ವಿಭಾಗಗಳ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಸಾಮಾನ್ಯ ಸಭೆಯನ್ನು ಅಚ್ಚುಕಟ್ಟಾಗಿ ನಡೆಸಲು ಸಹಕರಿಸಿರುವುದಕ್ಕೆ ಸಿಬ್ಬಂದಿಯವರಿಗೆ ಕೃತಜ್ಞತೆ ಸಲ್ಲಿಸಿದರು. ಅಧ್ಯಕ್ಷರು ಮಾತನಾಡುತ್ತ ಈ ಬಾರಿ ಪ್ರತಿನಿಧಿಗಳ ಸಂಖ್ಯೆ ಅನಿರೀಕ್ಷತವಾಗಿ ಹೆಚ್ಚಿದೆ. ಅವರುಗಳ ಜೊತೆಗೆ ಬಂದ ಸಹಕಾರಿಗಳ ಸಂಖ್ಯೆಯೂ ಹೆಚ್ಚಿದೆ. ಹೀಗಾಗಿ ಕೆಲವು ಅನಾನುಕೂಲಗಳಾಗಿವೆ ಕೆಲವು ಲೋಪಗಳನ್ನ ಗಮನಿಸಿದ್ದೇವೆ. ಮುಂಬರುವ ದಿನಗಳಲ್ಲಿ ಈ ಲೋಪಗಳು ಆಗದಂತೆ ಎಚ್ಚರವಹಿಸುತ್ತೇವೆ ಎಂದು ತಿಳಿಸಿದರು.

ಅಧಿಕಾರಿಗಳು ಹಾಗೂ ಸಿಬ್ಬಂದಿಯವರು ಮಾತನಾಡಿ ತಮಗೆ ವಹಿಸಿರುವ ಕೆಲಸ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದೇವೆ. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ ಹೆಚ್‌ಕೃಷ್ಣಾರೆಡ್ಡಿಯವರು ಮಾತನಾಡಿ ಸಿಬ್ಬಂದಿಯವರು ತಮ್ಮ ಕೆಲಸಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದೀರಿ ಅದಕ್ಕೆ ಅಭಿನಂದನೆಗಳು. ಕೆಲವು ಲೋಪದೋಷಗಳನ್ನು ಆಕಸ್ಮಿಕವಾಗಿ ಆಗಿವೆ. ಅವುಗಳನ್ನು ಈ ಸಭೆಯಲ್ಲಿ ಪ್ರಸ್ತಾಪಿಸಿ ಮುಂದಿನ ದಿನಗಳಲ್ಲಿ ಅವುಗಳನ್ನು ಸರಿಪಡಿಸಿಕೊಳ್ಳಲು ಕ್ರಮವಿಡುವುದಾಗಿ ತಿಳಿಸಿರುವುದು ಸಂತೋಷ ಹಾಗೂ ಸ್ವಾಗತಾರ್ಹ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ, ಉಪಾಧ್ಯಕ್ಷರಾದ ಶ್ರೀ ಎ ಆರ್ ಪ್ರಸನ್ನಕುಮಾರ್, ನಿರ್ದೇಶಕರುಗಳಾದ ಶ್ರೀ ಬಿ ಹೆಚ್‌ಕೃಷ್ಣಾರೆಡ್ಡಿ, ಶ್ರೀ ಬಿ.ಎಸ್. ಗುಂಡೂರಾವ್, ಶ್ರೀಮತಿ ಶೈಲಜಾ ತಪಲಿ, ಶ್ರೀ ಸಿ.ಪಿ. ವಿಜಯ, ಶ್ರೀ ಶ್ರೀಧರ ಹಾಗು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ.ಪಾಟೀಲ ಇವರು ಉಪಸ್ಥಿತರಿದ್ದರು.



ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರೊಂದಿಗೆ ಸಿಬ್ಬಂದಿಗಳು.

## ತುಮಕೂರು ಜಿಲ್ಲಾ ಸಂಪರ್ಕ ಕಛೇರಿಯ ಉದ್ಘಾಟನೆ



ದಿನಾಂಕ 07.08.2023ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ತುಮಕೂರು ಜಿಲ್ಲಾ ಸಂಪರ್ಕ ಕಚೇರಿಯ ಉದ್ಘಾಟನಾ ಕಾರ್ಯಕ್ರಮವನ್ನು ಶೃತಿ ಮ್ಯಾನ್‌ಷನ್, ಶ್ರೀ ಕಿರಣ್ ಟೆಕ್ಸ್‌ಟೈಲ್ ಮುಂಭಾಗ, 1ನೇ ಮಹಡಿ, 3ನೇ ಅಡ್ಡರಸ್ತೆ, ಫೀಲ್ಡ್ ಮಾರ್ಷಲ್ ಕಾರಿಯಪ್ಪ ರಸ್ತೆ, ತುಮಕೂರು ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಚೇರಿಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ನೆರವೇರಿಸಿದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಶ್ರೀ ಸಿ.ಪಿ. ವಿಜಯ್, ಶ್ರೀ ರಘುರಾಮ ರೆಡ್ಡಿ, ನಿಕಟಪೂರ್ವ ನಿರ್ದೇಶಕರಾದ ಶ್ರೀ ಬಿ. ಗಂಗಾಧರಯ್ಯ, ಜಿಲ್ಲಾ ಒಕ್ಕೂಟದ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು, ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಧರ್ ಎಸ್. ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್ ರವರು ಉಪಸ್ಥಿತರಿದ್ದರು.

## ಉತ್ತರ ಕನ್ನಡ ಜಿಲ್ಲಾ ಸಂಪರ್ಕ ಕಛೇರಿಯ ಉದ್ಘಾಟನೆ



ದಿನಾಂಕ 11.08.2023ರಂದು ಶಿರಸಿಯಲ್ಲಿ ನೂತನ ಜಿಲ್ಲಾ ಸಂಪರ್ಕ ಕಛೇರಿಯ ಉದ್ಘಾಟನೆಯನ್ನು ಮಾನ್ಯ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮೋಹನದಾಸ ನಾಯಕ ಮಾನ್ಯ ಮಾಜಿ ನಿರ್ದೇಶಕರುಗಳಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಶ್ರೀಮತಿ ಸರಸ್ವತಿ ಎನ್ ರವಿ ಸಹಕಾರ ರತ್ನ ಪುರಸ್ಕೃತ ಶ್ರೀ ಶಮಭುಲಿಂಗ ಹೆಗಡೆ ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ, ಟಾಸ್ಕಫೋರ್ಸ್ ವ್ಯವಸ್ಥಾಪಕರಾದ ಶ್ರೀ ಗಂಗಾರಾಮ ಕೊಳಾಪ್ಟೆ ಇವರುಗಳು ಮತ್ತು ಜಿಲ್ಲೆಯ ಹಲವು ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಸದಸ್ಯರು, ಪದಾಧಿಕಾರಿಗಳು ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿ ಕಾರ್ಯಕ್ರಮಗಳು

**ಬೆಂಗಳೂರು :** ದಿನಾಂಕ 07.08.2023ರಂದು ಬೆಂಗಳೂರು ನಗರದ (2&3ನೇ ವಲಯ) ಹಾಗೂ ರಾಮನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿಯನ್ನು ಉದಯ ಸೌಹಾರ್ದ ಸಹಕಾರಿ ನಿ, ಹನುಮಂತ ನಗರ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಎಸ್. ಗುಂಡುರಾವ್ ಇವರು ವಹಿಸಿದ್ದರು. ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ನೆರವೇ–ರಿಸಿದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಶ್ರೀ ರಘುರಾಮ ರೆಡ್ಡಿ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಸ್ವಾಗತವನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಧರ್ ರವರು ನೆರವೇರಿಸಿದರು. ಜಿಲ್ಲಾ ಸಂಂ–ಯೋಜಕರಾದ ಶ್ರೀ ವಿಕ್ರಾಂತ್ ಪಾಟೀಲ್ ಹಾಗೂ ಅನಿಲ್ ಕುಮಾರ್ ಎಮ್. ಇವರು ನಿರೂಪಿಸಿ ವಂದಿಸಿದರು

**ತುಮಕೂರು :** ದಿನಾಂಕ 07.08.2023ರಂದು ತುಮಕೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಸಂಪರ್ಕ ಸಭೆ ಮತ್ತು ವಿಷಯಾಧಾ–ರಿತ ತರಬೇತಿಯನ್ನು ಸ್ನೇಹ ಸಂಗಮ ಸೌಹಾರ್ದ ಪತ್ತಿನ ಸಹಕಾರಿ ಸಿರಾ ರಸ್ತೆ, ತುಮಕೂರು ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಸಿ.ಪಿ. ವಿಜಯ್ ಇವರು ವಹಿಸಿದ್ದರು. ಉದ್ಘಾಟನೆಯನ್ನು ಸಂಯುಕ್ತ ಸಹಕಾ–ರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಸ್ವಾಗತವನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಧರ್ ರವರು ನೆರವೇ–ರಿಸಿದರು. ಜಿಲ್ಲಾ ಸಂಯೋಜಕರಾದ ಉಮೇಶ್ ಎ.ಎಸ್. ಇವರು ನಿರೂಪಿಸಿ ವಂದಿಸಿದರು.

**ಚಿಕ್ಕಬಳ್ಳಾಪುರ :** ದಿನಾಂಕ 08.08.2023ರಂದು ಬೆಂಗಳೂರು ಪ್ರಾಂತದ ಚಿಕ್ಕಬಳ್ಳಾಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು,ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಸಂಪರ್ಕ ಸಭೆ ಹಾಗೂ ವಿಷಯಾಧಾರಿತ ತರಬೇತಿಯನ್ನು ಚಿಕ್ಕಬಳ್ಳಾಪುರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನ, ಚಿಕ್ಕಬಳ್ಳಾಪುರ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ನೆರವೇ–ರಿಸಿದರು. ಅಧ್ಯಕ್ಷತೆಯನ್ನು ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ವಹಿಸಿದ್ದರು. ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಅಮರ್ ಆರ್. ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಧರ್ ಎಸ್. ಇವರು ಉಪಸ್ಥಿತರಿದ್ದರು. ಜಿಲ್ಲಾ ಸಮಯೋಜಕರಾದ ಶ್ರೀ ಉಮೇಶ್ ಎ.ಎಸ್. ಇವರು ನಿರೂಪಿಸಿ ವಂದಿಸಿದರು. 52 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

**ಕೋಲಾರ :** ದಿನಾಂಕ 08.08.2023ರಂದು ಬೆಂಗಳೂರು ಪ್ರಾಂತದ ಕೋಲಾರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಸಂಪರ್ಕ ಸಭೆ ಹಾಗೂ ವಿಷಯಾಧಾರಿತ ತರಬೇತಿಯನ್ನು ಕೋಲಾರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನ, ಕೋಲಾರ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ವಹಿಸಿದ್ದರು. ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಹರ್ಷಜಿತ್ ಎಸ್. ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಧರ್ ಎಸ್. ಇವರು ಉಪಸ್ಥಿತರಿದ್ದರು. ಬೆಂಗಳೂರು ನಗರ ಜಿಲ್ಲಾ ಸಂಯೋಜಕರಾದ ಶ್ರೀ ಅನಿಲ್ ಕುಮಾರ್ ಎಮ್. ಇವರು ನಿರೂಪಿಸಿ ವಂದಿಸಿದರು. 38 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

**ಚಿತ್ರದುರ್ಗ :** ದಿನಾಂಕ 09.08.2023 ರಂದು ಚಿತ್ರದುರ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಸಂಪರ್ಕ ಸಭೆ ಹಾಗೂ ವಿಷಯಾಧಾರಿತ ತರಬೇತಿಯನ್ನು ಹೋಟೆಲ್ ಐಶ್ವರ್ಯ ಪೋರ್ಟ್, ಚಿತ್ರದುರ್ಗ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ನಿರ್ದೇಶಕರಾದ ಶ್ರೀ ರಘುರಾಮ ರೆಡ್ಡಿ ರವರು ವಹಿಸಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡ ಇವರು ನೆರವೇರಿಸಿದರು. ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಶ್ರೀ ಎಂ.ಆರ್.ಪ್ರಭುದೇವ್ ಇವರು ಉಪಸ್ಥಿತರಿದ್ದರು. ಚಿತ್ರದುರ್ಗ ಜಿಲ್ಲಾ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಡಿ.ಆರ್. ತಿಪ್ಪೇಸ್ವಾಮಿ, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಧರ್ ಎಸ್. ಇವರು ಭಾಗವಹಿಸಿದ್ದರು. ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ಎಸ್. ಇವರು ನಿರೂಪಿಸಿ ವಂದಿಸಿದರು. 35 ಸಹಕಾರಿಗಳಿಂದ 82 ಜನ ಭಾಗವಹಿಸಿದ್ದರು.

**ರಾಯಚೂರು :** ದಿನಾಂಕ 14.08.2023 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ರಾಯಚೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗೆ ಗೋಸ್ವಾಮಿ ಕಲ್ಯಾಣ ಮಂಟಪ. ಗಂಗಾವತಿ ರಸ್ತೆ, ಸಿಂಧನೂರು ನಲ್ಲಿ

ಸಂಪರ್ಕ ಸಭೆಯನ್ನು ಆಯೋಜಿಸಲಾಗಿತ್ತು. ಸಂಪರ್ಕ ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ರವರು ಉದ್ಘಾಟಿಸಿ, ಮಾತಾನಾಡಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಆರ್ ತಿಮ್ಮಯ್ಯಶೆಟ್ಟಿಯವರು ವಹಿಸಿದ್ದರು. ಮುಖ್ಯಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮನ್ಯ ನಿರ್ದೇಶಕರುಗಳಾದ ಶ್ರೀ ಜಿ. ಶ್ರೀಧರ, ಶ್ರೀ ಹನುಮಂತಯ್ಯ ಶೆಟ್ಟಿ ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಬಿ ರಾಜಶೇಖರರವರು ಉಪಸ್ಥಿತರಿದ್ದರು. ಸ್ವಾಗತ ಮತ್ತು ಪ್ರಾಸ್ತವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ನೆರವೇರಿಸಿದರು. ನಿರೂಪಣೆಯನ್ನು ಶ್ರೀ ನಟರಾಜರವರು ನಿರ್ವಹಿಸಿದರು. ರಾಯಚೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ 300 ಪ್ರತಿನಿಧಿಗಳು ಭಾಗವಹಿಸಿದ್ದರು.

**ಕೊಪ್ಪಳ :** ದಿನಾಂಕ 14.08.2023 ರಂದು ಕೊಪ್ಪಳ ಜಿಲ್ಲೆಯ ಸೌಹಾರ್ದ ಸಹಕಾರಿಯ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರುಗಳು ವಿಷಯಾಧಾರಿತ ತರಬೇತಿ ಮತ್ತು ಸಂಪರ್ಕ ಸಭೆಯನ್ನು ಸಿ.ಬಿ.ಎಸ್ ಕಲ್ಯಾಣ ಮಂಟಪ ಸಿ.ಬಿ.ಎಸ್ ಕಾಂಪ್ಲೆಕ್ಸ್ ಗಂಗಾವತಿ ಯಲ್ಲಿ ಆಯೋಜಿಸಲಾಗಿತ್ತು. ಸಂಪರ್ಕ ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ರವರು ಉದ್ಘಾಟಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ ಶ್ರೀಧರರವರು ವಹಿಸಿದರು. ಮುಖ್ಯಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಆರ್ ತಿಮ್ಮಯ್ಯಶೆಟ್ಟಿಯವರು ಹಾಗೂ ಶ್ರೀ ಹೆಚ್ ಹನುಮಂತಯ್ಯಶೆಟ್ಟಿಯವರು ಹಾಗೂ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಪತ್ತಾರ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಮುಖ್ಯಅತಿಥಿಗಳಾಗಿ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಶಂಕರಗೌಡ, ನಿರ್ದೇಶಕರಾದ ಶ್ರೀ ಪ್ರಾಣೇಶ ದೇಸಾಯಿ, ಶ್ರೀ ಮಹಾಲಿಂಗಪ್ಪ ಧೋತಿಹಾಳ, ಶ್ರೀ ಕುಮಾರೆಪ್ಪ, ಶ್ರೀ ಚನ್ನಬಸಪ್ಪ ಕಡ್ಡಿಮುಡಿ, ಶ್ರೀ ಗಿರೀಶ ಹಾಗೂ ಆರ್.ಡಿ.ಸಿ.ಸಿ ಬ್ಯಾಂಕ್ ನಿರ್ದೇಶಕರಾದ ಶ್ರೀ ಶಿವಶರಣಪ್ಪ ಹ್ಯಾಟಿಯವರು ಉಪಸ್ಥಿತರಿದ್ದರು. ಸ್ವಾಗತವನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರರವರು ಸ್ವಾಗತಿಸಿದರು. ಪ್ರಾಸ್ತಿವಿಕ ನುಡಿಯನ್ನು ಸಂಯುಕ್ತ ಸಹಕಾ–ರಿಯ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ನುಡಿದರು. ನಿರೂಪಣೆ ಮತ್ತು ವಂದನಾರ್ಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ಓಂಕಾರ ರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ 271 ಸಹಕಾರಿಯ ಪ್ರತಿನಿಧೀಗಳು ಭಾಗವಹಿಸಿದ್ದರು.

**ಬೀದರ :** ದಿನಾಂಕ 23.08.2023 ರಂದು ಬೀದರ ಜಿಲ್ಲೆಯ ಸೌಹರ್ದ ಸಹಕಾರಿಗಳ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗೆ ಸಂಪರ್ಕ ಸಭೆಯನ್ನು ಶಾರದರೂಟಶೆಟ್ ತರಬೇತಿ ಸಂಸ್ಥೆ, ನೌಬಾದ ಬೀದರನಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ಉದ್ಘಾಟಿಸಿ, ಉದ್ಘಾಟಕರ ನುಡಿಯಲ್ಲಿ ಸಹಕಾರ ಸಂಘಗಳ ಆಡಳಿತದಲ್ಲಿ ಸರ್ಕಾರದ ಅತಿಯಾದ ಹಸ್ತಕ್ಷೇಪ ಸಲ್ಲದು, ಸಂಘಗಳು ಸ್ವಯಂ ಆಡಳಿತ, ಸ್ವಯಂ ನಿಯಂತ್ರಣ, ಸ್ವಾಯತ್ತತೆ, ಸಂಘಗಳಾಗಿ ಸದಸ್ಯರ ಹಿತವನ್ನು ಕಾಯುವಂತೆ ಸಹಕಾರ ಕಾಯ್ದೆ ರೂಪಗೊಳ್ಳಬೇಕು ಸರ್ಕಾರದ ಅತಿಯಾದ ಹಸ್ತಕ್ಷೇಪವೆ ಸಂಘದ ಬೆಳವಣಿಗೆ ಕುಂಠಿತಕ್ಕೆ ಕಾರಣವಾಗಿದೆ. ಸಹಕಾರ ಸಂಸ್ಥೆಗಳು ಸ್ವತಂತ್ರವಾಗಿ ಸದೃಡವಾಗಿ ಬೆಳೆಯಬೇಕು ಸಂಘಗಳು ಕಾಯ್ದೆ ಮತ್ತು ನಿಯಮಗಳಂತೆ ಕಾರ್ಯನಿರ್ವಹಿಸಬೇಕು ಎಂದು ಸಹಕಾರಿಗಳಿಗೆ ಕರೆ ನೀಡಿದರು. ಸೌಹಾರ್ದ ಸಹಕಾರಿಗಳ ಕುಂದುಕೊರತೆಗಳನ್ನು ಆಲಿಸಿ ಅವುಗಳಿಗೆ ಪರಿಹಾರಗಳನ್ನು ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರವರು ಮಾತನಾಡಿ ಸಹಕಾರ ಸಂಘಗಳ ಆಡಳಿತ ಮಂಡಳಿಯವರು ಸಾಲ ನೀಡುವಾಗ ಜಾಗೃತರಾಗಿ ಎಲ್ಲಾ ದಾಖಲೆಗಳನ್ನು ಪಡೆದುಕೊಂಡು ಭದ್ರತೆಯ ಸಾಲಗಳನ್ನು ನೀಡಬೇಕು. ಸುಸ್ತಿ ಸಾಲಗಳ ವಸೂಲಾತಿಗೆ ಕಾಯ್ದೆಯಲ್ಲಿನ ಕಾನೂನ ಕ್ರಮಗಳನ್ನು ತಿಳಿಸಿದುಕೊಂಡು ದಾವೆಗಳನ್ನು ಹೂಡಿ ವಸೂಲಾತಿ ಕೈಗೊಳ್ಳುವಂತೆ ಸಲಹೆ ನೀಡಿದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ಜಿ ಶ್ರೀಧರ, ಶ್ರೀಮತಿ ಶೈಲಜಾ ತಪ್ಪಲಿಯವರುಭಾಗವಹಿಸಿದರು. ಪ್ರಾಂತೀಯ ವ್ಯವಸ್ಥಾಪಕ ಸೂರ್ಯಕಾಂತ ರ್‍ಯಾಕಲೇ ಪ್ರಸ್ತಾವಿಕ ಮತ್ತು ಸ್ವಾಗತ ನುಡಿಗಳನ್ನು ನುಡಿದರು. ಜಿಲ್ಲಾ ಸಂಯೋಜಕ ವೀರಶಟ್ಟಿ ಕಾಮಣ್ಣಾ ನಿರೂಪಿಸಿದರು. ಸಂಪರ್ಕ ಸಭೆಯಲ್ಲಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಉಪಾಧ್ಯಕ್ಷರು ನಿರ್ದೇಶಕರು ಮುಖ್ಯ ಕಾರ್ಯನಿರ್ವಾಹಕರು 120 ಹೆಚ್ಚು ಸಿಬ್ಬಂದಿಗಳು ಭಾಗವಹಿಸಿ ಮಾಹಿತಿ ಪಡೆದುಕೊಂಡರು.

**ಕಲಬುರಗಿ :** ದಿನಾಂಕ 24.08.2023 ರಂದು ಸಂಯುಕ್ತ ಸಹಕಾರಿಯ ಪ್ರಾಂತೀಯ ಕಛೇರಿ ವತಿಯಿಂದ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ಸೌಹಾರ್ದ ಸಹಕರಿಗಳ ಅಧ್ಯಕ್ಷರು /ಉಪಾಧ್ಯಕ್ಷರುಗಳಿಗೆ ಸಂಪರ್ಕ ಸಭೆಯನ್ನು ಸಂಯುಕ್ತ ಸಹಕಾರಿಯ ಪ್ರಾಂತೀಯ ಕಛೇರಿ ಕಲಬುರಗಿಯ ತರಬೇತಿ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ಉದ್ಘಾಟಿಸಿದರು. ಕರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿಯವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ಗುರುನಾಥ ಜ್ಯಾಂತಿಕರ್, ಶ್ರೀ ಜಿ. ಶ್ರೀಧರ ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ, ಕಲಬುರಗಿ ಜಿಲ್ಲಾ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್.ಎಸ್ ಪಾಟೀಲ, ನಿರ್ದೇಶಕರು, ಉಪಸ್ಥಿತರಿದರು.

ಪ್ರಾರ್ಥನಾ ಗೀತೆಯನ್ನು ಗುಲ್ಬರ್ಗಾ ಮಹಿಳಾ ಸಹಕಾರಿಯ ಸಿಬ್ಬಂದಿಯಾದ ಕುಮಾರಿ ಬ್ಯಾಗ್ಯಶ್ರೀಯವರು ಹಾಡಿದರು. ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ನೆರವೇರಿಸಿದರು. ನಿರೂಪಣೆ ಮತ್ತು ವಂದನಾರ್ಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ವೀರಶೆಟ್ಟಿ ಕೆಯವರು ನೆರವರಿಸಿದರು. ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ಉಪಾಧ್ಯಕ್ಷರು ಮಾನ್ಯ ಅಧ್ಯಕ್ಷರೊಂದಿಗೆ ಸಮಾಲೋಚನೆ ಕೈಗೊಂಡು ಸಮಂಜಸ ಮಾಹಿತಿಯನ್ನು ಪಡೆದುಕೊಂಡರು. ಸದರಿ ಸಂಪರ್ಕ ಸಭೆಯಲ್ಲಿ 120 ಪ್ರತಿನಿಧಿಗಳು ಭಾಗವಹಿಸಿದ್ದರು.

**ಹಾವೇರಿ :** ದಿನಾಂಕ 10.08.2023 ರಂದು ಶಿವಾ ರೆಸಿಡೆನ್ಸಿ, ಹಾವೇರಿ ಇಲ್ಲಿ ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿ ಕಾರ್ಯಕ್ರಮವು ಜರುಗಿತು. ಸಂಪರ್ಕ ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡರವರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಕೆ ಶಿವಲಿಂಗಪ್ಪರವರು ವಹಿಸಿದ್ದರು. ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ್ ಹೊಂಗಲರವರು ಪ್ರಾಸ್ತಾವಿಕ ಭಾಷಣವನ್ನು ನಡೆಸಿಕೊಟ್ಟರು.

ಮದ್ಯಾಹ್ನದ ಅವಧಿಯಲ್ಲಿ ಸಹಕಾರಿಯ ಆಡಳಿತ ಮಂಡಲಿ ಸದಸ್ಯರ ಕರ್ತವ್ಯಗಳು ಮತ್ತು ಜವಾಬ್ದಾರಿಗಳು ವಿಷಯದ ಕುರಿತು ಟಾಸ್ಕ್ ಫೋರ್ಸ್ ಅಧಿಕಾರಿಗಳಾದ ಶ್ರೀ ಗಂಗಾರಾಮ ಕೊಳಾಪ್ಪೆರವರು ಉಪನ್ಯಾಸವನ್ನು ನೀಡಿದರು.

ಕಾರ್ಯಕ್ರಮದ ನಿರೂಪಣೆಯನ್ನು ಜಿಲ್ಲಾ ಸಂಯೋಜಕರಾದ ಕಲ್ಮೇಶ್ ಎಸ್.ಎಮ್. ಇವರು ನಿರ್ವಹಿಸಿದರು. ಸಭೆಯಲ್ಲಿ 106 ಸೌಹಾರ್ದ ಸಹಕಾರಿಗಳಿಂದ 144 ಜನ ಬಾಗವಹಿಸಿದ್ದರು.

**ಉತ್ತರಕನ್ನಡ :** ದಿನಾಂಕ 11.08.2023 ರ ಶುಕ್ರವಾರದಂದು ಟಿ.ಎಂ. ಎಸ್ ಸಭಾ ಭವನ ಶಿರಸಿ ಇಲ್ಲಿ ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿ ಕಾರ್ಯಕ್ರಮವು ಜರುಗಿತು. ಸಂಪರ್ಕ ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ನಿರ್ವಹಿಸಿದರು. ವೇದಿಕೆ ಮೇಲೆ ಶ್ರೀ ಶಂಭುಲಿಂಗ ಹೆಗಡೆ, ಅಧ್ಯಕ್ಷರು ಕದಂಬ ಮಾರ್ಕೆಟಿಂಗ್ ಸೌಹಾರ್ದ ಸಹಕಾರಿ ನಿ., ಮಾನ್ಯ ಮಾಜಿ ನಿರ್ದೇಶಕರುಗಳಾದ ಶ್ರೀ ಭಾಸ್ಕರ್ ಹೆಗಡೆ ಕಾಗೇರಿ, ಶ್ರೀಮತಿ ಸರಸ್ವತಿ ಎನ್ ರವಿ ಇವರು ಭಾಗವಹಿಸಿದ್ದರು. ಮತ್ತು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ, ಮಾನ್ಯ ಟಾಸ್ಕಫೋರ್ಸ ಮುಖ್ಯಸ್ಥರಾದ ಶ್ರೀ ಗಂಗಾರಾಮ ಕೊಳಾಪ್ಪೆ ಉಪಸ್ಥಿತರಿದ್ದರು.

ಸಭೆಯ ಸ್ವಾಗತ ಕಾರ್ಯಕ್ರಮವನ್ನು ಶ್ರೀ ಗಣಪತಿ ನಾಯ್ಕ, ಮುಖ್ಯ ಕಾರ್ಯನಿರ್ವಾಹಕರು, ಸ್ಕೋಡ್ ವೇಸ್ ಮಹಿಳಾ ಸೌಹಾರ್ದ ಸಹಕಾರಿ ನಿ., ಶಿರಸಿ ಇವರು ನಡೆಸಿಕೊಟ್ಟರು. ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲರವರು ಪ್ರಾಸ್ತಾವಿಕ ಭಾಷಣವನ್ನು ಮಾಡಿದರು. ಮದ್ಯಾಹ್ನದ ಅವಧಿಗೆ ಸಹಕಾರಿಗಳ ಆರ್ಥಿಕ ಅಭಿವೃದ್ಧಿ ಯೋಜನೆಗಳು ಎಂಬ ವಿಷಯವಾಗಿ ಸಂಪನ್ಮೂಲ ವ್ಯಕ್ತಿಯಾದ ಶ್ರೀ ಹೆಚ್.ಹರೀಶ್ ಕಾರ್ಪೊರೇಟ್ ಟ್ರೈನರ್, ಇವರು ಉಪನ್ಯಾಸ ನೀಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ಸಂತೋಷಕುಮಾರ ಎಂ.ಜಿ. ಇವರು ನಡೆಸಿಕೊಟ್ಟರು.ಸಭೆಯಲ್ಲಿ ಒಟ್ಟು 103 ಸಹಕಾರಿಗಳಿಂದ 125 ಪ್ರತಿನಿಧಿಗಳು ಭಾಗವಹಿಸಿದ್ದರು.

**ಧಾರವಾಡ :** ದಿನಾಂಕ 12.08.2023ರಂದು ಮಂತ್ರ ರೆಸಿಡೆನ್ಸಿ ಹುಬ್ಬಳ್ಳಿ., ಇಲ್ಲಿ ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿ ಕಾರ್ಯಕ್ರಮ ಜರುಗಿತು. ಸಂಪರ್ಕ ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಲ್ಲಿಕಾರ್ಜುನ ಹೊರಕೇರಿಯವರು ವಹಿಸಿದ್ದರು. ಮುಖ್ಯ ಅಥಿತಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ನಾಗರಾಜ ದೇಶಪಾಂಡೆರವರು ಭಾಗವಹಿಸಿದ್ದರು.

ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲರವರು ಪ್ರಾಸ್ತಾವಿಕ ಭಾಷಣವನ್ನು ಮಾಡಿದರು. ಮದ್ಯಾಹ್ನದ ಅವಧಿಯಲ್ಲಿ ಸಂಪನ್ಮೂಲ ವ್ಯಕ್ತಿಯಾದ ಶ್ರೀ ಗಂಗಾರಾಮ ಕೊಳಾಪ್ಪೆ ಇವರು ಆಡಳಿತ ಮಂಡಲಿ ಸದಸ್ಯರ ಜವಾಬ್ದಾರಿಗಳು ಹಾಗೂ ಕರ್ತವ್ಯಗಳ ವಿಷಯದ ಕು–ರಿತು ಉಪನ್ಯಾಸವನ್ನು ನೀಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಜಿಲ್ಲಾ ಸಂಯೋಜಕರಾದ ಕಲ್ಮೇಶ್ ಎಸ್.ಎಮ್. ಇವರು ನಿರ್ವಹಿಸಿದರು. ಸಭೆಯಲ್ಲಿ ಒಟ್ಟು 117 ಸಹಕಾರಿಗಳಿಂದ 148 ಪ್ರತಿನಿಧಿಗಳು ಭಾಗವಹಿಸಿದ್ದರು.

**ಬೆಳಗಾವಿ :** ದಿನಾಂಕ 16.08.2023ರಂದು ಕನ್ನಡ ಭವನ, ರಾಮದೇವ ಹೋಟೆಲ್ ಹತ್ತಿರ, ಬೆಳಗಾವಿ, ಇಲ್ಲಿ ಬೆಳಗಾವಿ ಜಿಲ್ಲೆಯ ಬೆಳಗಾವಿ, ಬೈಲಹೊಂಗಲ, ಸವದತ್ತಿ, ರಾಮದುರ್ಗ, ಕಿತ್ತೂರು, ಯರಗಟ್ಟಿ, ಖಾನಾಪುರ ಹಾಗೂ ಹುಕ್ಕೇರಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠರವರು ವಹಿಸಿದ್ದರು, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ್ ಹೊಂಗಲ ಹಾಗೂ ಶ್ರೀ ಸೂರ್ಯಕಾಂತ ರ್‍ಯಾಕಲೆ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು ಕಲಬುರಗಿ ಪ್ರಾಂತೀಯ ಕಛೇರಿ ಇವರುಗಳು ವೇದಿಕೆ ಮೇಲೆ ಉಪಸ್ಥಿತರಿದ್ದರು.

ಶ್ರೀ ರಾಚಯ್ಯ ಹಿರೇಮಠ ಸಹಾಯಕ/ಜಿಲ್ಲಾ ಸಂಯೋಜಕರು ಇವರು ಗಣ್ಯ ಮಾನ್ಯರ ಸ್ವಾಗತವನ್ನು ಮಾಡಿದರು. ಮದ್ಯಾಹ್ನದ ಅವಧಿಗೆ ಆಡಳಿತ ಮಂಡಳಿ ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳು ಈ ವಿಷಯದ ಕುರಿತು ಶ್ರೀ ಸೂರ್ಯಕಾಂತ ರಾಕಲೆ ಇವರು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ವಿವಿಧ ಸಹಕಾರಿಗಳಿಂದ 580 ಕ್ಕೂ ಹೆಚ್ಚಿನ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಮಲ್ಲಮ್ಮ ದೇಗಾಂವ., ಸಹಾಯಕಿ ಇವರು ನಿರ್ವಹಿಸಿದರು.

**ಬೆಳಗಾವಿ :** ದಿನಾಂಕ 16.08.2023 ರಂದು ಶ್ರೀ ಎಂ.ಕೆ.ಕವಟಗಿಮಠ ಕನ್ವೆನ್ಷನ್ ಹಾಲ್ ಚಿಕ್ಕೋಡಿ ಇಲ್ಲಿ ಬೆಳಗಾವಿ ಜಿಲ್ಲೆಯ ಅಥಣಿ, ಚಿಕ್ಕೋಡಿ, ರಾಯಭಾಗ, ಕಾಗವಾಡ, ನಿಪ್ಪಾಣಿ ಹಾಗು ಹುಕ್ಕೇರಿ ತಾಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಸಂಪರ್ಕ ಸಭೆ ಹಾಗೂ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡರವರು ನೆರವೇ–ರಿಸಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠರವರು ವಹಿಸಿದ್ದರು. ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಇವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಬೆಳಗಿನ ಅವಧಿಯಲ್ಲಿ ಆಡಳಿತ ಮಂಡಳಿ ಸದಸ್ಯರ ಕರ್ತವ್ಯ, ಜವಾಬ್ದಾರಿ ಹಾಗೂ ಆಡಳಿತ ಮಂಡಳಿ ಸಭೆ ಜರುಗಿಸುವ ವಿಧಾನ ವಿಷಯದ ಕುರಿತು ಶ್ರೀ ಗಂಗಾರಾಮ ಕೊಳಾಪ್ಪೆರವರು ಉಪನ್ಯಾಸ ನೀಡಿದರು. ನಂತರ ಮಧ್ಯಾಹ್ನ ಅವಧಿಗೆ ಸಂಪರ್ಕ ಸಭೆ ಜರುಗಿಸಲಾಯಿತು. ಒಟ್ಟು 205 ಸೌಹಾರ್ದ ಸಹಕಾರಿಗಳಿಂದ 814 ಜನ ಪ್ರತಿನಿಧಿಗಳು ಭಾಗವಹಿಸಿದ್ದರು. ಜಿಲ್ಲಾ ಸಂಯೋಜಕರಾದ ಶ್ರೀ ಸುಜಯ ಬೆಳವಿ ರವರು ನಿರೂಪಣೆ ಹಾಗೂ ಶಿವಕಾಂತ ಎನ ರವರು ವಂದನಾರ್ಪಣೆ ನೆರವೇ–ರಿಸಿದರು.

**ಬೆಳಗಾವಿ :** ದಿನಾಂಕ 17.08.2023 ರಂದು ರೋಟರಿ ಕ್ಲಬ್,ಬ್ಲಡ್ ಬ್ಯಾಂಕ್,ಯೋಗಿಕೊಳ್ಳ ರಸ್ತೆ, ಗೋಕಾಕ ಇಲ್ಲಿ ಬೆಳಗಾವಿ ಜಿಲ್ಲೆಯ ಗೋಕಾಕ ಮತ್ತು ಮೂಡಲಗಿ ತಾಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಸಂಪರ್ಕ ಸಭೆ ಹಾಗೂ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠರವರು ವಹಿಸಿದ್ದರು. ಹಾಗೂ ಅತಿಥಿಗಳಾಗಿ ಶ್ರೀ ಬಾಳಪ್ಪ ಬ. ಬೆಳಕೂಡ ಅಧ್ಯಕ್ಷರು ಬಸವೇಶ್ವರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ.,ಕಲ್ಲೋಳಿ, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲರವರು ಭಾಗವಹಿಸಿದ್ದರು. ಜಿಲ್ಲಾ ಸಂಯೋಜಕರಾದ ಶ್ರೀ ರಾಚಯ್ಯ ಹಿರೇಮಠರರವರು ಸ್ವಾಗತವನ್ನು ಶ್ರೀ ಸುಜಯ ಬೆಳವಿ ವಂದನಾರ್ಪಣೆ ನಡೆಸಿಕೊಟ್ಟರು. ಮದ್ಯಾಹ್ನ ಅವಧಿಗೆ ಆಡಳಿತ ಮಂಡಳಿ ಸದಸ್ಯರ ಕರ್ತವ್ಯ,ಜವಾಬ್ದಾರಿ ಹಾಗೂ ಆಡಳಿತ ಮಂಡಳಿ ಸಭೆ ಜರುಗಿಸುವ ವಿಧಾನ ವಿಷಯದ ಕುರಿತು ಶ್ರೀ ಗಂಗಾರಾಮ ಕೆ. ಇವರು ಉಪನ್ಯಾಸ ನೀಡಿದರು. ಒಟ್ಟು 104 ಸೌಹಾರ್ದ ಸಹಕಾರಿಗಳಿಂದ 289 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ಬಾಗಲಕೋಟ :** ದಿನಾಂಕ 18.08.2023ರಂದು ಸಾಯಿ ಮಂದಿರ, ವಿದ್ಯಾಗಿರಿ, ಬಾಗಲಕೋಟೆ ಇಲ್ಲಿ ಬಾಗಲಕೋಟೆ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಎನ್.ಪಾಟೀಲ್‌ರವರು ಹಾಗೂ ವೇದಿಕೆ ಮೇಲಿನ ಗಣ್ಯರು ನೆರವೇರಿಸಿದರು. ಈ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ್ ಹಾಗೂ ಎಮ್. ಹೆಚ್. ದಡೆನ್ನವರ, ಅಧ್ಯಕ್ಷರು, ಶಿವಶಕ್ತಿ ಸಹಕಾರಿ., ಇವರು ರವರು ಭಾಗವಹಿಸಿದ್ದರು. ಸಭೆಯಲ್ಲಿ ಬೆಳಗಾವಿ

ಕಾರ್ಯಕ್ರಮದಲ್ಲಿ ಗಣ್ಯರ ಸ್ವಾಗತವನ್ನು ಶ್ರೀ ವೆಂಕಟೇಶ್ ರಾಥೋಡ್ ಇವರು ನೆರವೇರಿಸಿದರು. ತರಬೇತಿಯ ಮೊದಲನೇಯ ಅವಧಿಯಲ್ಲಿ ಆಡಳಿತ ಮಂಡಳಿ ಸದಸ್ಯರ ಕರ್ತವ್ಯ,ಜವಾಬ್ದಾರಿ ಹಾಗೂ ಆಡಳಿತ ಮಂಡಳಿ ಸಭೆ ಜರುಗಿಸುವ ವಿಧಾನ ವಿಷಯದ ಕುರಿತು ಶ್ರೀ ಗಂಗಾರಾಂ ಕೆ.ರವರು ಉಪನ್ಯಾಸ ನೀಡಿದರು. ಎರಡನೇಯ ಅವಧಿಗೆ ದಾವಾ ದಾಖಲಾತಿ ಕುರಿತು ಜಿಲ್ಲಾ ಸಂಯೋಜಕರಾದ ಶ್ರೀ ರಾಚಯ್ಯ ಹಿರೇಮಠ ಇವರು ಉಪನ್ಯಾಸ ನೀಡಿದರು.

ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ವೆಂಕಟೇಶ ರಾಠೋಡ ಮತ್ತು ವಂದನಾರ್ಪಣೆಯನ್ನು ಶ್ರೀಮತಿ ರೇಷ್ಮಾ ಪಾಟೀಲ ಇವರುಗಳು ನೆರವೇ–ರಿಸಿದರು.ತರಬೇತಿಯಲ್ಲಿ ಒಟ್ಟು 255 ಸೌಹಾರ್ದ ಸಹಕಾರಿಗಳಿಂದ 329 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ವಿಜಯಪುರ :** ದಿನಾಂಕ 19.08.2023 ರಂದು ಶ್ರೀ ಸಂಗನ ಬಸವ ಮಂಗಳ ಕಾರ್ಯಲಯ ವಿಜಯಪುರ ಇಲ್ಲಿ ವಿಜಯಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಸಂಪರ್ಕ ಸಭೆ ಹಾಗೂ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡರವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ರಾಮನಗೌಡ ಬ ಪಾಟೀಲ ಯತ್ನಾಳರವರು ವಹಿಸಿದ್ದರು, ಅತಿಥಿಗಳಾಗಿ ಶ್ರೀ ಸುಭಾಷ ಇಂಡಿ ಮಾನ್ಯ ವೃತ್ತಿಪರ ನಿರ್ದೇಶಕರು, ಶ್ರೀ ಸಿದ್ರಾಮಪ ಉಪ್ಪಿನ ಮಾನ್ಯ ನಿಕಟಪೂರ್ವ ನಿರ್ದೇಶಕರು, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲರವರು ಭಾಗವಹಿಸಿದ್ದರು.

ಸಭೆಯಲ್ಲಿ ಗಣ್ಯ ಮಾನ್ಯರ ಸ್ವಾಗತವನ್ನು ಜಿಲ್ಲಾ ಸಂಯೋಜಕರಾದ ಬಸವರಾಜ ಎಸ್.ರವರು ನೆರವೇರಿಸಿದರು. ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲರವರು ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಸಭೆಯಲ್ಲಿ ಆಡಳಿತ ಮಂಡಳಿ ಸದಸ್ಯರ ಕರ್ತವ್ಯ, ಜವಾಬ್ದಾರಿ ಹಾಗೂ ಆಡಳಿತ ಮಂಡಳಿ ಸಭೆ ಜರುಗಿಸುವ ವಿಧಾನ ವಿಷಯದ ಕುರಿತು ಶ್ರೀ ಗಂಗಾರಾಂ ಕೊಳಾಪ್ಪೆರವರು ಉಪನ್ಯಾಸ ನೀಡಿದರು.

ಜಿಲ್ಲಾ ಸಂಯೋಜಕರಾದ ಶ್ರೀ ಪ್ರಭಯ್ಯ ಹಿರೇಮಠರವರು ನಿರೂಪಣೆ ಹಾಗೂ ಶ್ರೀಮತಿ ಪ್ರತಿಭಾ ಮಠರವರು ವಂದನಾರ್ಪಣೆ ಮಾಡಿದರು. ಒಟ್ಟು 258 ಸೌಹಾರ್ದ ಸಹಕಾರಿಗಳಿಂದ 319 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

# ಬೆಳಗಾವಿ ಪ್ರಾಂತೀಯ ಕಛೇರಿಯ ಸಂಪರ್ಕ ಸಭೆ ಹಾಗೂ ವಿಷಯಾಧಾರಿತ ತರಬೇತಿ ಕಾರ್ಯಕ್ರಮ, ಇ–ಸ್ಟಾಂಪಿಂಗ್ ಕಾರ್ಯಕ್ರಮ ಛಾಯಾಚಿತ್ರಗಳು








ಚಿಕ್ಕೋಡಿ ಸಂಪರ್ಕ ಸಭೆ ಹಾಗೂ ವಿಷಯಾಧಾರಿತ ತರಬೇತಿ ಕಾರ್ಯಕ್ರಮ ಹಾಗೂ ಭಾಗವಹಿಸಿದ ಸಹಕಾರಿಗಳು



ಬೆಳಗಾವಿ ಸಂಪರ್ಕ ಸಭೆ ಹಾಗೂ ವಿಷಯಾಧಾರಿತ ತರಬೇತಿಯಲ್ಲಿ ಭಾಗವಹಿಸಿದ ಸಹಕಾರಿಗಳೊಂದಿಗೆ ಸಮಾಲೋಚನೆ




ಬೆಳಗಾವಿ ಸಂಪರ್ಕ ಸಭೆ ಹಾಗೂ ವಿಷಯಾಧಾರಿತ ತರಬೇತಿ ಕಾರ್ಯಕ್ರಮ























**ಬೆಂಗಳೂರು ಪ್ರಾಂತೀಯ ಕಛೇರಿಯ ಸಂಪರ್ಕ ಸಭೆ ಹಾಗೂ ವಿಷಯಾಧಾರಿತ ತರಬೇತಿ ಕಾರ್ಯಕ್ರಮದ ಫೋಟೋಗಳು**











**ಕಲಬುರಗಿ ಪ್ರಾಂತೀಯ ಕಛೇರಿಯ ಸಂಪರ್ಕ ಸಭೆ ಹಾಗೂ ವಿಷಯಾಧಾರಿತ ತರಬೇತಿ ಕಾರ್ಯಕ್ರಮದ ಛಾಯಾಚಿತ್ರಗಳು**











**ಬೆಂಗಳೂರು ಪ್ರಾಂತೀಯ ಕಛೇರಿಯ ಇ-ಸ್ಟಾಂಪಿಂಗ್ ಕಾರ್ಯಕ್ರಮದ ಛಾಯಾಚಿತ್ರಗಳು**





## ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮ

| ಕ್ರ. ಸಂ | ಜಿಲ್ಲೆ | ದಿನಾಂಕ | ತರಬೇತಿಯ ಸ್ಥಳ | ಫಲಾನುಭವಿಗಳು | ಭಾಗವಹಿಸಿದ ಸೌಹಾರ್ದ ಸಹಕಾರಿಗಳ ಸಂಖ್ಯೆ | ಭಾಗವಹಿಸಿದ ಪ್ರತಿನಿಧಿಗಳ ಸಂಖ್ಯೆ |
|---|---|---|---|---|---|---|
| 1 | ವಿಜಯಪುರ | 01 ಆಗಷ್ಟ 2023 | ಹೋಟೆಲ್ ಸಂಗಮ, ಸಿಂದಗಿ | ಸಿಂದಗಿ, ಆಲಮೇಲ, ದೇವರ ಹಿಪ್ಪರಗಿ ತಾಲ್ಲೂಕಿನ ಸೌ.ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ | 22 | 25 |
| 2 | ವಿಜಯಪುರ | 01 ಆಗಷ್ಟ 2023 | ಹೋಟೆಲ್ ಸಂಗಮ, ಸಿಂದಗಿ | ಸಿಂದಗಿ, ಆಲಮೇಲ, ದೇವರ ಹಿಪ್ಪರಗಿ ತಾಲ್ಲೂಕಿನ ಸೌ.ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ | 24 | 26 |
| 3 | ಹಾವೇರಿ | 03 ಆಗಷ್ಟ 2023 | ಗಂಗಾ ಸೌಹಾರ್ದ ಸಹಕಾರಿ ಸಂಘ ನಿ., ರಾಣಿಬೆನ್ನೂರು | ರಾಣಿಬೆನ್ನೂರು ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ | 34 | 39 |
| 4 | ಹಾವೇರಿ | 07 ಆಗಷ್ಟ 2023 | ಗದಗ ಜಿಲ್ಲಾ ಸಂಪರ್ಕ ಕಛೇರಿ | ಗದಗ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ | 19 | 21 |
| 5 | ವಿಜಯಪುರ | 08 ಆಗಷ್ಟ 2023 | ಶ್ರೀ ಮೂಲ ನಂದಿಶ್ವರ ಸೌಹಾರ್ದ ಸಹಕಾರಿ ನಿ., ಬಸವನ ಬಾಗೇವಾಡಿ | ಬಸವನ ಬಾಗೇವಾಡಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ | 31 | 32 |
| 6 | ಬೆಳಗಾವಿ | 09 ಆಗಷ್ಟ 2023 | ಕಿತ್ತೂರು ಚೆನ್ನಮ್ಮ ಸೌಹಾರ್ದ ಸಹಕಾರಿ ನಿ., ಬೈಲಹೊಂಗಲ | ಬೆಳಗಾವಿ ಜಿಲ್ಲೆಯ ಸವದತ್ತಿ, ಯರಗಟ್ಟಿ ಹಾಗೂ ಮುನವಳ್ಳಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ | 16 | 19 |
| 7 | ಹಾವೇರಿ | 14 ಆಗಷ್ಟ 2023 | ಶ್ರೀಶೈಲ ಮಲ್ಲಿಕಾರ್ಜುನ ಸೌಹಾರ್ದ ಸಹಕಾರಿ ನಿ., ರೋಣ | ಹಾವೇರಿ ಜಿಲ್ಲೆಯ ನರಗುಂದ, ರೋಣ ಮತ್ತು ಗಜೇಂದ್ರಗಡ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ | 14 | 17 |
| 8 | ಹಾವೇರಿ | 18 ಆಗಷ್ಟ 2023 | ಅಳ್ನಾವರ ಪತ್ತಿನ ಸೌಹಾರ್ದ ಸಹಕಾರಿ ನಿ., ಅಳ್ನಾವರ | ಹಾವೇರಿ ಜಿಲ್ಲೆಯ ಅಳ್ನಾವರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ | 9 | 10 |
| 9 | ಹಾವೇರಿ | 22 ಆಗಷ್ಟ 2023 | ಜಿಲ್ಲಾ ಸಂಪರ್ಕ ಕಛೇರಿ, ಹುಬ್ಬಳ್ಳಿ | ಹಾವೇರಿ ಜಿಲ್ಲೆಯ ಕುಂದಗೋಳ ಮತ್ತು ಕಲಘಟಗಿ ತಾಲ್ಲೂಕಿನ ಸೌಹಾರ್ದ ಸಹಕಾ-ರಿಗಳ ಮುಖ್ಯಕಾರ್ಯನಿರ್ವಾಹಕರಿಗೆ | 5 | 7 |
| 10 | ಹಾವೇರಿ | 24 ಆಗಷ್ಟ 2023 | ಶ್ರೀ ವಿಜಯಲಕ್ಷ್ಮಿ ಸೌಹಾರ್ದ ಸಹಕಾರಿ ನಿ., ಧಾರವಾಡ | ಧಾರವಾಡ ತಾಲ್ಲೂಕಿನ ಸೌಹಾರ್ದ ಸಹಕಾ-ರಿಗಳ ಮುಖ್ಯಕಾರ್ಯನಿರ್ವಾಹಕರಿಗೆ | 13 | 18 |

## ಮೈಸೂರು ಪ್ರಾಂತೀಯ ಕಛೇರಿಯ ಇ-ಸ್ಟಾಂಪಿಂಗ್ ಕಾರ್ಯಕ್ರಮದ ಛಾಯಾಚಿತ್ರಗಳು





# ಇ-ಸ್ಟಾಂಪಿಂಗ್ ತರಬೇತಿ ಕಾರ್ಯಕ್ರಮಗಳು

**ಶಿವಮೊಗ್ಗ** : ದಿನಾಂಕ 11.08.2023ರಂದು ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಇ–ಸ್ಟಾಂಪಿಂಗ್ ಸಿಬ್ಬಂದಿಗಳಿಗಾಗಿ ತರಬೇತಿ ಕಾರ್ಯಕ್ರಮವನ್ನು ಮಥುರಾ ಪ್ಯಾರಡೈಸ್, ಶಿವಮೊಗ್ಗ ಇಲ್ಲಿ ಆಯೋಜಿಸಲಾಗಿತ್ತು. ಇ–ಸ್ಟಾಂಪಿಂಗ್ ವಿಭಾಗದ ಮಾನ್ಯ ವ್ಯವಸ್ಥಾಪಕರಾದ ಶ್ರೀ ರಾಜೇಂದ್ರ ಶಿಂಧೆ ಹಾಗೂ ಹಿರಿಯ ಸಹಾಯಕರಾದ ಶ್ರೀ ವಿನೋದ ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಉಪನ್ಯಾಸ ನೀಡಿದರು. ಜಿಲ್ಲಾ ಸಂಯೋಜಕರಾದ ಶ್ರೀ ನಾಗರಾಜು ಜಿ.ಹೆಚ್. ಇವರು ಕಾರ್ಯಕ್ರಮವನ್ನು ನಿರೂಪಿಸಿ ವಂದಿಸಿದರು. 43 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

**ಉಡುಪಿ** : ದಿನಾಂಕ 17.08.2023 ರಂದು ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಇ–ಸ್ಟಾಂಪಿಂಗ್ ಕೇಂದ್ರಗಳ ಸಿಬ್ಬಂದಿಗಳಿಗೆ, ಇ ಸ್ಟಾಂಪಿಂಗ್ ಕುರಿತು ತರಬೇತಿ ಕಾರ್ಯಕ್ರಮವನ್ನು ಕಿದಿಯೂರು ಹೋಟೆಲ್, ಉಡುಪಿ ಇಲ್ಲಿ ಆಯೋಜಿಸಲಾಗಿತ್ತು

ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿ ನಿರ್ದೇಶಕರಾದ ಶ್ರೀ ಗುರುನಾಥ್ ಜಾಂತೀಕರ್ ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಸಹಕಾರ ಸಂಘಗಳ ಲೆಕ್ಕಪರಿಶೋಧಕರ ಉಪನಿರ್ದೇಶಕರಾದ ಶ್ರೀ ಮಹೇಶ್ವರಪ್ಪ ರವರು ಭಾಗವಹಿಸಿದ್ದರು. ಕಾರ್ಯಕ್ರಮದ ಅತಿಥಿಗಳಾಗಿ ಉಡುಪಿ ಜಿಲ್ಲಾ ಸೌಹಾರ್ದ ಒಕ್ಕೂಟದ ಅಧ್ಯಕ್ಷರಾದ ಶ್ರೀ ಜಗನ್ನಾಥ ಶೆಟ್ಟಿ ರವರು ಭಾಗವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ವಹಿಸಿದ್ದರು. ಪ್ರಾಸ್ತಾವಿಕ ನುಡಿಗಳನ್ನು ಮೈಸೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ್ ಬಿರಾದರ್ ರವರು ನುಡಿದರು.

ಮೊದಲ ಅವಧಿಯನ್ನು ಶ್ರೀ ವಿನೋದ, ಮಾನ್ಯ ಹಿರಿಯ ಸಹಾಯಕರು, ಇವರು ಓಟಿಪಿ ಬೇಸ್ಡ್, ಇ–ಸ್ಟಾಂಪಿಂಗ್ ಫಾರಂಗಳು ಮತ್ತು ಸ್ಟೇಟ್‌ಮೆಂಟ್‌ಗಳ ಕುರಿತು ಉಪನ್ಯಾಸ ನೀಡಿದರು. ಎರಡನೇ ಅವಧಿಗೆ ಇ–ಸ್ಟಾಂಪಿಂಗ್ ಕುರಿತು ಮಾನ್ಯ ವ್ಯವಸ್ಥಾಪಕರಾದ ಶ್ರೀ ರಾಜೇಂದ್ರ ಸಿಂಧೆ ಇವರು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಉಡುಪಿ ಜಿಲ್ಲೆಯ 47 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ದಕ್ಷಿಣ ಕನ್ನಡ** : ದಿನಾಂಕ 18.08.2023 ರಂದು ದಕ್ಷಿಣ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಇ–ಸ್ಟಾಂಪಿಂಗ್ ಕೇಂದ್ರಗಳ ಸಿಬ್ಬಂದಿಗಳಿಗೆ, ಇ ಸ್ಟಾಂಪಿಂಗ್ ಕುರಿತು ತರಬೇತಿ ಕಾರ್ಯಕ್ರಮವನ್ನು, ಶ್ರೀನಿವಾಸ್ ಹೋಟೆಲ್, ಮಂಗಳೂರು ಇಲ್ಲಿ ಆಯೋಜಿಸಲಾಗಿತ್ತು

ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಹಕಾರಿಗಳ ಉಪ ನಿಭಂದಕರಾದ ಶ್ರೀ ಹೆಚ್ ಎನ್ ರಮೇಶ್ ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ನೋಂದಣಾಧಿಕಾರಿಗಳಾದ ಶ್ರೀ ನೂರ್ ಅಹಮದ್ ಪಾಷ ರವರು ಭಾಗವಹಿಸಿದ್ದರು. ಕಾರ್ಯಕ್ರಮದ ಅತಿಥಿಗಳಾಗಿ ದಕ್ಷಿಣ ಕನ್ನಡ ಜಿಲ್ಲಾ ಸೌಹಾರ್ದ ಒಕ್ಕೂಟದ ಅಧ್ಯಕ್ಷರಾದ ಶ್ರೀ ಸುರೇಶ್ ರೈ ರವರು ಭಾಗವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ ಭಟ್ ವಹಿಸಿದ್ದರು. ಪ್ರಾಸ್ತಾವಿಕ ನುಡಿಗಳನ್ನು ಮೈಸೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ್ ಬಿರಾದರ್ ರವರು ನುಡಿದರು.

ಮೊದಲ ಅವಧಿಯನ್ನು ಶ್ರೀ ವಿನೋದ ಮಾನ್ಯ ಹಿರಿಯ ಸಹಾಯಕರು, ಇವರು ಓಟಿಪಿ ಬೇಸ್ಡ್, ಇ–ಸ್ಟಾಂಪಿಂಗ್ ಫಾರಂಗಳು ಮತ್ತು ಸ್ಟೇಟ್ಮೆಂಟ್‌ಗಳ ಕುರಿತು ಉಪನ್ಯಾಸ ನೀಡಿದರು. ಎರಡನೇ ಅವಧಿಗೆ ಇ–ಸ್ಟಾಂಪಿಂಗ್ ಕುರಿತು ಮಾನ್ಯ ವ್ಯವಸ್ಥಾಪಕರಾದ ಶ್ರೀ ರಾಜೇಂದ್ರ ಸಿಂಧೆ ಇವರು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ 48 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ವಿಜಯಪುರ** : ದಿನಾಂಕ 28.07.2023ರಂದು ವಿಜಯಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಇ–ಸ್ಟಾಂಪಿಂಗ್ ಕೇಂದ್ರಗಳ ಸಿಬ್ಬಂದಿಗಳಿಗೆ, ಇ–ಸ್ಟಾಂಪಿಂಗ್ ಕುರಿತು ತರಬೇತಿ ಕಾರ್ಯಕ್ರಮವನ್ನು, ಹೋಟೆಲ್ ಬೆಂಗಳೂರು ರೆಸ್ಟೋರೆಂಟ್., ವಿಜಯಪುರ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ವಿಜಯಪುರ ಜಿಲ್ಲೆಯ ಹಿರಿಯ ಸಹಕಾರಿಗಳು ಮತ್ತು ನೆರೆದಿದ್ದ ಸಂಯುಕ್ತ ಸಹಕಾರಿಯ ಸಿಬ್ಬಂದಿಗಳ ಸಹಯೋಗದಲ್ಲಿ ನೆರವೇರಿಸಲಾಯಿತು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಭಾರತಿ ಎಸ್ ನಾಯಕ, ಜಿಲ್ಲಾ ನೋಂದಣಿ ಕಛೇರಿ ವಿಜಯಪುರ ಇವರು ಭಾಗವಹಿಸಿದ್ದರು.

ಮೊದಲನೆಯ ಅವಧಿಗೆ ಇ–ಸ್ಟಾಂಪಿಂಗ್ ವಿಷಯದ ಕುರಿತು ಮಾನ್ಯ ವ್ಯವಸ್ಥಾಪಕರಾದ ಶ್ರೀ ರಾಜೇಂದ್ರ ಸಿಂಧೆ ಇವರು ಉಪನ್ಯಾಸ ನೀಡಿದರು. ಎರಡನೆಯ ಅವಧಿಯನ್ನು ಶ್ರೀ ವಿನೋದವ ಹೆಚ್.ಎ. ಹಿರಿಯ ಸಹಾಯಕರು, ಇವರು ಓ.ಟಿ.ಪಿ ಬೇಸ್ಡ್, ಇ–ಸ್ಟಾಂಪಿಂಗ್ ಫಾರಂಗಳು ಮತ್ತು ಸ್ಟೇಟ್ಮೆಂಟ್‌ಗಳ ಕುರಿತು ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ 45 ಸೌಹಾರ್ದ ಸಹಕಾರಿಗಳಿಂದ 52 ಪ್ರತಿನಿಧಿಗಳು ಭಾಗವಹಿಸಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಜಿಲ್ಲಾ ಸಂಯೋಜ–ಕರಾದ ಪ್ರಭಯ್ಯ ಹಿರೇಮಠ್ ರವರು ನೆರವೇರಿಸಿದರು. ವಂದನಾರ್ಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ಬಸವರಾಜ ಎಸ್. ರವರು ನೆರವೇರಿಸಿದರು.

**ಬಾಗಲಕೋಟ** : ದಿನಾಂಕ 29.07.2023 ರಂದು, ಬಾಗಲಕೋಟೆ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಇ–ಸ್ಟಾಂಪಿಂಗ್ ಕೇಂದ್ರಗಳ ಸಿಬ್ಬಂದಿಗಳಿಗೆ, ಇ–ಸ್ಟಾಂಪಿಂಗ್ ಕುರಿತು ತರಬೇತಿ ಕಾರ್ಯಕ್ರಮವನ್ನು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಬಾಗಲಕೋಟೆ ಇಲ್ಲಿ ಆಯೋಜಿಸಲಾಗಿತ್ತು.

ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಬಾಗಲಕೋಟೆ ಜಿಲ್ಲಾ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಎಸ್.ಪಾಟೀಲ್, ಸ್ಟಾಕ್ ಹೋಲ್ಡಿಂಗ್ ಅಧಿಕಾರಿಯಾದ ಅನಿಲ್ ಕುಮಾರ್ ಮತ್ತು ಸಂಯುಕ್ತ ಸಹಕಾರಿಯ ಸಿಬ್ಬಂದಿಗಳ ಸಹಯೋಗದಲ್ಲಿ ನೆರವೇರಿಸಲಾಯಿತು. ಶ್ರೀ ಅನಿಲ್ ಜಮಖಂಡಿ, ಜಿಲ್ಲಾ ನೋಂದಣಿ ಕಛೇರಿ ಬಾಗಲಕೋಟೆ ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಮೊದಲನೆ ಅವಧಿಗೆ ಇ–ಸ್ಟಾಂಪಿಂಗ್ ಕುರಿತು ಮಾನ್ಯ ವ್ಯವಸ್ಥಾಪಕರಾದ ಶ್ರೀ ರಾಜೇಂದ್ರ ಸಿಂಧೆ ಇವರು ಉಪನ್ಯಾಸ ನೀಡಿದರು.

ಎರಡನೆಯ ಅವಧಿಯನ್ನು ಶ್ರೀ ವಿನೋದ ಮಾನ್ಯ ಹಿರಿಯ ಸಹಾಯಕರು, ಇವರು ಓಟಿಪಿ ಬೇಸ್ಡ್, ಇ–ಸ್ಟಾಂಪಿಂಗ್ ಫಾರಂಗಳು ಮತ್ತು ಸ್ಟೇಟ್ಮೆಂಟ್ ಗಳ ಕುರಿತು ಉಪನ್ಯಾಸ ನೀಡಿದರು.

ಸ್ಟಾಕ್ ಹೋಲ್ಡಿಂಗ್ ಅಧಿಕಾರಿಗಳು ಈ ಸ್ಟಾಂಪಿಂಗ್ ಆರ್ಟಿಕಲ್ಸ್ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ 58 ಸೌಹಾರ್ದ ಸಹಕಾರಿಗಳಿಂದ 75 ಪ್ರತಿನಿಧಿಗಳು ಭಾಗವಹಿಸಿದ್ದರು.

ಕಾರ್ಯಕ್ರಮದ ನಿರೂಪಣೆಯನ್ನು ಜಿಲ್ಲಾ ಸಂಯೋಜಕರಾದ ವೆಂಕಟೇಶ್ ರಾಠೋಡ್ ರವರು ನೆರವೇರಿಸಿದರು. ವಂದನಾರ್ಪಣೆಯನ್ನು ಸಹಾಯಕಿಯಾದ ಶ್ರೀಮತಿ ರೇಷ್ಮಾ ಪಾಟೀಲ್‌ರವರು ನೆರವೇರಿಸಿದರು.

ಬೆಳಗಾವಿ ಜಿಲ್ಲೆಯ ಬೆಳಗಾವಿ, ಖಾನಾಪುರ, ಬೈಲಹೊಂಗಲ, ಸವದತ್ತಿ, ರಾಮದುರ್ಗ, ಮೂಡಲಗಿ, ಯರಗಟ್ಟಿ, ಗೋಕಾಕ ಮತ್ತು ಕಿತ್ತೂರು ತಾಲ್ಲೂಕುಗಳ ತಾಲ್ಲೂಕುಗಳ ಸೌಹಾರ್ದ ಸಹಕಾರಿಗಳ ಇ–ಸ್ಟಾಂಪಿಂಗ್ ಕೇಂದ್ರಗಳ ಸಿಬ್ಬಂದಿಗಳಿಗೆ ದಿನಾಂಕ: 03.08.2023ರಂದು ತರಬೇತಿಯನ್ನು ಬೆಳಗಾವಿಯ ಪ್ರಾಂತೀಯ ಕಛೇರಿಯ ತರಬೇತಿ ಸಭಾಂಗದಲ್ಲಿ ಆಯೋಜಿಸಗಿತ್ತು.

ತರಬೇತಿಯ ಉದ್ಘಾಟನೆಯನ್ನು ಸ್ಟಾಕ್ ಹೋಲ್ಡಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾದ ಶ್ರೀ ಪುರುಶೋತ್ತಮ್‌ರವರು, ಹುಕ್ಕೇರಿಯ ನೋಂದಣಾಧಿಕಾರಿಗಳಾದ ಶ್ರೀ ಎಂ. ಬಿ. ಬಾನಿಮಠರವರು, ಬೆಳಗಾವಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲರವರು, ಟಾಸ್ಕ್‌ಫೋರ್ಸ್ ಅಧಿಕಾರಿಗಳಾದ ಶ್ರೀ ಗಂಗಾರಾಮ ಕೊಳಾಪ್ಪೆರವರು ನೆರವೇರಿಸಿದರು. ಸ್ವಾಗತವನ್ನು ಜಿಲ್ಲಾ ಸಂಯೋಜಕರಾದ ಶ್ರೀ ಭವನ್‌ರಾವ್ ಇವರು ವಂದನಾರ್ಪನೆಯನ್ನು ರಾಚಯ್ಯ ಹಿರೇಮಠ ಇವರು ನಡೆಸಿಕೊಟ್ಟರು. ತರಬೇತಿಯ ಮೊದಲನೆಯ ಅವಧಿಯನ್ನು ಸ್ಟಾಕ್ ಹೋಲ್ಡಿಂಗ್ ಅಧಿಕಾರಿಗಳು ಮತ್ತು ಉಪನೊಂದಣಾಧಿಕಾರಿಗಳು ನಡೆಸಿಕೊಟ್ಟರು. ಎರಡನೆಯ ಅವಧಿಯನ್ನು ಶ್ರೀ ವಿನೋದ್. ಹೆಚ್. ಎರವರು ನಡೆಸಿಕೊಟ್ಟರು.ಸದರಿ ಸಭೆಯಲ್ಲಿ 60 ಸೌಹಾರ್ದ ಸಹಕಾರಿಗಳ 90 ಪ್ರತಿನಿಧಿಗಳು ಹಾಜರಿದ್ದರು.

ಬೆಳಗಾವಿ ಜಿಲ್ಲೆಯ ಅಥಣಿ, ಚಿಕ್ಕೋಡಿ, ರಾಯಭಾಗ, ಕಾಗವಾಡ, ನಿಪ್ಪಾಣಿ ಮತ್ತು ಹುಕ್ಕೇರಿ ತಾಲ್ಲೂಕುಗಳ ಸೌಹಾರ್ದ ಸಹಕಾರಿಗಳ ಇ–ಸ್ಟಾಂಪಿಂಗ್ ಕೇಂದ್ರಗಳ ಸಿಬ್ಬಂದಿಗಳಿಗೆ ದಿನಾಂಕ: 04.08.2023ರಂದು ಶ್ರೀ ಸಾಯಿ ಸೌಹಾರ್ದ ಸಹಕಾರಿ ಸಂಘ ನಿ., ಸಭಾಭವನ ಚಿಕ್ಕೋಡಿ ಇಲ್ಲಿ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯ ಉದ್ಘಾಟನೆಯನ್ನು ವೇದಿಕೆ ಮೇಲಿನ ಗಣ್ಯಮಾನ್ಯರು ನೆರವೇರಿಸಿದರು. ಸ್ವಾಗತವನ್ನು ಜಿಲ್ಲಾ ಸಂಯೋಜಕರಾದ ಶ್ರೀ ಸುಜಯ ಬೆಳವಿರವರು ನೆರವೇರಿಸಿದರು. ತರಬೇತಿ ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಬೆಳಗಾವಿ ಪ್ರಾಂತ್ಯದ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲರವರು ಹೇಳಿದರು.

ಹುಕ್ಕೇರಿ ತಾಲ್ಲೂಕಿನ ನೋಂದಣಿ ಅಧಿಕಾರಿಗಳಾದ ಶ್ರೀ ಎಂ.ಬಿ.ಬಾನಿಮಠರವರು, ಕೇಂದ್ರ ಕಚೇರಿಯ ಈ ಸ್ಟಾಂಪಿಂಗ್ ವಿಭಾಗದ ವ್ಯವಸ್ಥಾಪಕರಾದ ಶ್ರೀ ರಾಜೇಂದ್ರ ರಾವ್‌ಶಿಂಧೆರವರು ಹಾಗೂ ಹಿರಿಯ ಸಹಾಯಕರಾದ ಶ್ರೀ ವಿನೋದ ಹೆಚ್.ಎ.ರವರು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ 48 ಸೌಹಾರ್ದ ಸಹಕಾರಿಗಳಿಂದ 54 ಪ್ರತಿನಿಧಿಗಳು ಭಾಗವಹಿಸಿದ್ದರು.

ಧಾರವಾಡ ಗದಗ ಮತ್ತು ಹಾವೇರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಇ–ಸ್ಟಾಂಪಿಂಗ್ ಕೇಂದ್ರಗಳ ಸಿಬ್ಬಂದಿಗಳಿಗೆ ದಿನಾಂಕ 05.08.2023ರಂದು ಮಂತ್ರ ರೆಸಿಡೆನ್ಸಿ., ಹುಬ್ಬಳ್ಳಿ ಇಲ್ಲಿ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯ ಉದ್ಘಾಟನೆಯನ್ನು ವೇದಿಕೆ ಮೇಲಿನ ಗಣ್ಯಮಾನ್ಯರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಸ್ಟಾಕ್ ಹೋಲ್ಡಿಂಗ್ ಅಧಿಕಾರಿಗಳಾದ ಶ್ರೀ ರಾಘವೇಂದ್ರ ಮತ್ತು ಶ್ರೀ ಸುಧಾಕರ ಹುಬ್ಬಳ್ಳಿ ತಾಲ್ಲೂಕಿನ ನೋಂದಣಿ ಅಧಿಕಾರಿಗಳಾದ ಶ್ರೀ ಮಲ್ಲಿಕಾರ್ಜುನ್‌ರವರು ಭಾಗವಹಿಸಿದ್ದರು. ಕೇಂದ್ರ ಕಚೇರಿಯ ಇ– ಸ್ಟಾಂಪಿಂಗ್ ವಿಭಾಗದ ಮಾನ್ಯ ವ್ಯವಸ್ಥಾಪಕರಾದ ಶ್ರೀ ರಾಜೇಂದ್ರ ರಾವ್ ಶಿಂಧೆರವರು ಹಾಗೂ ಹಿರಿಯ ಸಹಾಯಕರಾದ ಶ್ರೀ ವಿನೋದರವರು ಉಪನ್ಯಾಸ ನೀಡಿದರು. ಕಾರ್ಯಕ್ರಮದ ನಿರೂಪಣೆ ಮತ್ತು ವಂದನಾರ್ಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ಕಲ್ಮೇಶ್‌ರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ 61 ಸೌಹಾರ್ದ ಸಹಕಾರಿಗಳಿಂದ 79 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ತುಮಕೂರು** : ದಿನಾಂಕ 12.08.2023ರಂದು ತುಮಕೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಇ–ಸ್ಟಾಂಪಿಂಗ್ ಸಿಬ್ಬಂದಿಗಳಿಗಾಗಿ ತರಬೇತಿಯನ್ನು ಶಿವಾಜಿ ಸೌಹಾರ್ದ ಸಹಕಾರಿ ನಿ, ತುಮಕೂರು ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ನೆರವೇರಿಸಿದರು. ಶಿವಾಜಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಸುರೇಶ್ ರಾವ್, ಇ–ಸ್ಟಾಂಪಿಂಗ್ ವಿಭಾಗದ ಸಿಬ್ಬಂದಿಗಳಾದ ಶ್ರೀಮತಿ ಸಿಂಧು ಸಿ.ಟಿ ಹಾಗೂ ಶ್ರೀಮತಿ ವಿಜಯಶ್ರೀ ಇವರು ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್. ಇವರು ನೆರವೇರಿಸಿದರು. 28 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳಿ ಭಾಗವಹಿಸಿದ್ದರು.

## ಆಗಸ್ಟ್ – 2023 : ಶಾಸನತ್ಮಾಕ ವಿಭಾಗದ ಕಾರ್ಯಚಟುವಟಿಕೆಗಳು

**1. ಶ್ರೀ ವಶಿಷ್ಠ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಸಹಕಾರಿಯ ವಿಶೇಷಾಧಿಕಾರಿಯ ಅವಧಿ ವಿಸ್ತರಣೆ.**

ಶ್ರೀ ವಶಿಷ್ಠ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಸಹಕಾರಿಯ ಎಲ್ಲ ನಿರ್ದೇಶಕರನ್ನು ಅನರ್ಹಗೊಳಿಸಿ ಸಂಯುಕ್ತ ಸಹಕಾರಿಯಿಂದ ವಿಶೇಷಾಧಿಕಾರಿಯನ್ನು ನೇಮಕ ಮಾಡಲಾಗಿರುತ್ತದೆ. ವಿಶೇಷಾಧಿಕಾರಿಯ ಅವಧಿಯು ಮುಕ್ತಾಯವಾಗಿರುವ ಹಿನ್ನಲೆಯಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ–1997ರ ಪ್ರಕರಣ 70ರಡಿಯಲ್ಲಿ ಕರ್ನಾಟಕ ಸರ್ಕಾರಕ್ಕೇ ಪ್ರದತ್ತವಾಗಿರುವ ಅಧಿಕಾರವನ್ನು ಬಳಸಿಕೊಂಡು ಶ್ರೀ ವಶಿಷ್ಠ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಇದರ ವಿಶೇಷಾಧಿಕಾರಿಯ ಅವಧಿಯನ್ನು ದಿನಾಂಕ 02.08.2023ರಿಂದ ದಿನಾಂಕ 02.08.2024ರವರೆಗೆ ವಿಸ್ತರಿಸಿ ಮಾನ್ಯ ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ, ಕರ್ನಾಟಕ ಸರ್ಕಾರ ಇವರು ಸರ್ಕಾರದ ಆದೇಶ ಸಂಖ್ಯೆ: ಸಿಒ 43 ಸಿಆರ್‌ಸಿ 2023 ಬೆಂಗಳೂರು, ದಿನಾಂಕ 05.08.2023ರ ಆದೇಶವನ್ನು ಹೊರಡಿಸಿರುತ್ತಾರೆ.

**2. ಶುಶೃತಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಂಗಳೂರು ಸಹಕಾರಿಗೆ ಸಮಾಪನಾಧಿಕಾರಿ ನೇಮಕ.**

ಶುಶೃತಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಂಗಳೂರು ಸಹಕಾರಿ ಬ್ಯಾಂಕ್ ಠೇವಣಿದಾರ ಹಣ ಮರುಪಾವತಿಸುವಲ್ಲಿ ವಿಫಲರಾದ ಹಿನ್ನಲೆಯಲ್ಲಿ ಸಹಕಾರಿ ಬ್ಯಾಂಕ್‌ನ ಎಲ್ಲ ನಿರ್ದೇಶಕರನ್ನು ಸಂಯುಕ್ತ ಸಹಕಾರಿಯಿಂದ ಅನರ್ಹಗೊಳಿಸಿ ಸಹಕಾರಿಗೆ ದಿನಾಂಕ 12.10.2022ರಂದು ಶ್ರೀ ರುದ್ರಮೂರ್ತಿ ಎಮ್., ಚೀಫ್ ಜನರಲ್ ಮ್ಯಾನೇಜರ್ (ನಿವೃತ್ತ), ಅಫೆಕ್ಸ್ ಬ್ಯಾಂಕ್, ಬೆಂಗಳೂರು ಇವರನ್ನು ವಿಶೇಷಾಧಿಕಾರಿಯನ್ನು ನೇಮಕ ಮಾಡಲಾಗಿತ್ತು. ಪ್ರಸ್ತುತ ಸಹಕಾರಿಯ ವಿಶೇಷಾಧಿಕಾರಿಯ ಅವಧಿ ಮುಕ್ತಾಯವಾಗಿರುವುದರಿಂದ, ಡೆಪ್ಯೂಟಿ ಜನರಲ್ ಮ್ಯಾನೇಜರ್, ಭಾರತೀಯ ರಿಸರ್ವ್ ಬ್ಯಾಂಕ್ ಇವರು ಸಹಕಾರಿ ಬ್ಯಾಂಕ್‌ನ ಲೈಸನ್ಸ್ ರದ್ದುಪಡಿಸಿ ಸಹಕಾರಿಯ ಬ್ಯಾಂಕ್‌ಗೆ ಸಮಾಪಕರನ್ನು ನೇಮಕ ಮಾಡುವಂತೆ ಮಾನ್ಯ ಸಹಕಾರಿಗಳ ನಿಬಂಧಕರು, ಕರ್ನಾಟಕ ರಾಜ್ಯ ಇವರಿಗೆ ಸೂಚನೆ ನೀಡಿರುತ್ತಾರೆ. ಈ ಹಿನ್ನಲೆಯಲ್ಲಿ ಶುಶೃತಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಂಗಳೂರು ಸಹಕಾರಿಗೆ ಶ್ರೀ ಮಹಂತಪ್ಪ, ವ್ಯವಸ್ಥಾಪಕರು, ಕೇಂದ್ರ ಕಛೇರಿ, ಕ.ರಾ.ಸೌ.ಸಂ.ಸ.ನಿ., ಇವರು ಬೆಂಗಳೂರು ಇವರನ್ನು ಸಮಾಪನಾಧಿಕಾರಿಯನ್ನಾಗಿ ದಿನಾಂಕ 01.08.2023ರಂದು ಮಾನ್ಯ ಸಹಕಾರಿಗಳ ನಿಬಂಧಕರು, ಕರ್ನಾಟಕ ರಾಜ್ಯ ಇವರು ನೇಮಕ ಮಾಡಿ ಆದೇಶ ಹೊರಡಿಸಿರುತ್ತಾರೆ.

**3. ವಿ–ಗೋಲ್ಡ್ ಸೌಹಾರ್ದ ಕೋ–ಅಪ್‌ರೇಟಿವ್ ಲಿ., ಬೆಂಗಳೂರು ಸಹಕಾರಿಗೆ ಸಮಾಪನಾಧಿಕಾರಿ ನೇಮಕ.**

ವಿ–ಗೋಲ್ಡ್ ಸೌಹಾರ್ದ ಕೋ–ಅಪ್‌ರೇಟಿವ್ ಲಿ., ಸಹಕಾರಿಯ ವಿಶೇಷಾಧಿಕಾರಿಯ ಅವಧಿ ಮುಕ್ತಾಯವಾದ ಹಿನ್ನಲೆಯಲ್ಲಿ ಹಾಗೂ ಚುನಾವಣಾ ವೇಳಾಪಟ್ಟಿಯ ಪ್ರಕಾರ ಸಹಕಾರಿಯ ಸದಸ್ಯರಿಂದ ಯಾವುದೇ ಉಮೇದುವಾರಿಕೆ ಸಲ್ಲಿಕೆಯಾಗದ ಹಿನ್ನಲೆಯಲ್ಲಿ ಹಾಗೂ ದಿನಾಂಕ 10.03.2023ರ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ನಿರ್ಣಯದನುಸಾರ ಸಹಕಾರಿಯ ಸಮಾಪನೆಗಾಗಿ ಮಾನ್ಯ ಸಹಕಾರಿಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು ಇವರಿಗೆ ಶಿಫಾರಸ್ಸು ಮಾಡಲಾಗಿರುತ್ತದೆ.

ಪ್ರಸ್ತುತ ಸಹಕಾರಿಗೆ ಸಮಾಪನಾಧಿಕಾರಿಯಾಗಿ ಶ್ರೀ ಅನಿಲ್ ಕುಮಾರ್ ಎಮ್, ಸಹಾಯಕರು ಹಾಗೂ ಜಿಲ್ಲಾ ಸಂಯೋಜಕರು (ಪ್ರ), ಪ್ರಾಂತೀಯ ಕಛೇರಿ, ಕ.ರಾ.ಸೌ.ಸ.ಸ.ನಿ., ಬೆಂಗಳೂರು ಇವರನ್ನು ಸಹಕಾರಿಯ ಸಮಾಪನಾಧಿಕಾರಿಯಾಗಿ ದಿನಾಂಕ 01.07.2023ರಂದು ಮಾನ್ಯ ಸಹಕಾರಿಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು ಇವರು ನೇಮಕಮಾಡಿ ಆದೇಶ ಹೊರಡಿಸಿರುತ್ತಾರೆ.

**4. ಶ್ರೀ ಶಕ್ತಿ ಸೌಹಾರ್ದ ಕ್ರೆಡಿಟ್ ಕೋ–ಅಪರೇಟಿವ್ ಲಿ., ಬೆಂಗಳೂರು ಸಹಕಾರಿಗೆ ಸಮಾಪನಾಧಿಕಾರಿಯ ನೇಮಕ.**

ಶ್ರೀ ಶಕ್ತಿ ಸೌಹಾರ್ದ ಕ್ರೆಡಿಟ್ ಕೋ–ಅಪರೇಟಿವ್ ಲಿ., ಸಹಕಾರಿಗೆ ಈ ಹಿಂದೆ ಸಮಾಪನಾಧಿಕಾರಿಯಾಗಿ ನೇಮಕವಾಗಿದ್ದ ಶ್ರೀ ರಘುನಂದನ್ ಕೆ., ಉಪಪ್ರಧಾನ ವ್ಯವಸ್ಥಾಪಕರು, ಕೇಂದ್ರ ಕಛೇರಿ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿರುವ ಹಿನ್ನಲೆಯಲ್ಲಿ ಹಾಗೂ ದಿನಾಂಕ 06.04.2023ರ ಪತ್ರದ ಮೂಲಕ ಸಮಾಪನಾಧಿಕಾರಿಯ ಮಾರ್ಪಾಡು ಆದೇಶ ಮಾಡುವಂತೆ ಮಾನ್ಯ ಸಹಕಾರಿಗಳ ನಿಬಂಧಕರಿಗೆ ಸಂಯುಕ್ತ ಸಹಕಾರಿಯು ಕೋರಿಕೆಯನ್ನು ಸಲ್ಲಿಸಿರುವ ಈ ಹಿನ್ನಲೆಯಲ್ಲಿ ಶ್ರೀ ಶಕ್ತಿ ಸೌಹಾರ್ದ ಕ್ರೆಡಿಟ್ ಕೋ–ಅಪರೇಟಿವ್ ಲಿ., ಬೆಂಗಳೂರು ಸಹಕಾರಿಗೆ ಶ್ರೀ ಗುರುಪ್ರಸಾದ್ ಬಂಗೇರ, ಹಿರಿಯ ವ್ಯವಸ್ಥಾಪಕರು, ಕೇಂದ್ರ ಕಛೇರಿ, ಕ.ರಾ.ಸೌ.ಸಂ.ಸ.ನಿ., ಇವರು ಬೆಂಗಳೂರು ಇವರನ್ನು ಸಮಾಪನಾಧಿಕಾರಿಯನ್ನಾಗಿ ದಿನಾಂಕ 19.06.2023ರಂದು ಮಾನ್ಯ ಸಹಕಾರಿಗಳ ನಿಬಂಧಕರು, ಕರ್ನಾಟಕ ರಾಜ್ಯ ಇವರು ನೇಮಕ ಮಾಡಿ ಆದೇಶ ಹೊರಡಿಸಿರುತ್ತಾರೆ.

**5. ಶ್ರೀ ಮುನೀಶ್ವರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ವಿಜಯಪುರ (ಎಸ್.ಎಮ್.ಎನ್ ಸೌಹಾರ್ದ) ಸಹಕಾರಿಗೆ ನೂತನ ಸಮಾಪನಾಧಿಕಾರಿ ನೇಮಕ.**

ಸಹಕಾರಿಗೆ ಈ ಹಿಂದೆ ಸಮಾಪನಾಧಿಕಾರಿಯಾಗಿ ನೇಮಕವಾಗಿದ್ದ ಶ್ರೀ ಶಿವಕಾಂತ್ ಎನ್., ಜಿಲ್ಲಾ ಸಂಯೋಜಕರು, ಕ.ರಾ.ಸೌ.ಸಂ.ಸ.ನಿ., ಬೆಳಗಾವಿ ಇವರು ಮತ್ತೊಂದು ಜಿಲ್ಲೆಗೆ ವರ್ಗಾವಣೆಯಾಗಿರುವ ಹಿನ್ನಲೆಯಲ್ಲಿ ಹಾಗೂ ದಿನಾಂಕ 21.06.2023ರ ಪತ್ರದ ಮೂಲಕ ಸಮಾಪನಾಧಿಕಾರಿಯ ಮಾರ್ಪಾಡು ಆದೇಶ ಮಾಡುವಂತೆ ಮಾನ್ಯ ಸಹಕಾರಿಗಳ ಜಂಟಿ ನಿಬಂಧಕರು ಬೆಳಗಾವಿ ಪ್ರಾಂತ ಇವರಿಗೆ ಸಂಯುಕ್ತ ಸಹಕಾರಿಯು ಕೋರಿಕೆಯನ್ನು ಸಲ್ಲಿಸಿರುವ ಈ ಹಿನ್ನಲೆಯಲ್ಲಿ ಶ್ರೀ ಮುನೀಶ್ವರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ವಿಜಯಪುರ (ಎಸ್.ಎಮ್.ಎನ್ ಸೌಹಾರ್ದ) ಸಹಕಾರಿಗೆ ವಿಜಯಪುರ ಜಿಲ್ಲಾ ಸಂಯೋಜಕರು, ಪ್ರಾಂತೀಯ ಕಛೇರಿ, ಕ.ರಾ.ಸೌ.ಸಂ.ಸ.ನಿ., ಬೆಳಗಾವಿ ಇವರನ್ನು ಸಮಾಪನಾಧಿಕಾರಿಯನ್ನಾಗಿ ದಿನಾಂಕ 21.07.2023ರಂದು ಮಾನ್ಯ ಸಹಕಾರಿಗಳ ಜಂಟಿ ನಿಬಂಧಕರು ಬೆಳಗಾವಿ ಪ್ರಾಂತ ಇವರು ನೇಮಕ ಮಾಡಿ ಆದೇಶ ಹೊರಡಿಸಿರುತ್ತಾರೆ.

## ಸೌಹಾರ್ದ ಸಹಕಾರಿಗಳು ಗಮನಿಸಬೇಕಾದ ಮತ್ತು ಪಾಲಿಸಬೇಕಾದ ಪ್ರಮುಖ ಅಂಶಗಳು

1. **ಸೆಪ್ಟೆಂಬರ್ 01 :** ಕಾಯ್ದೆ ಕಲಂ 33 (8) ರಂತೆ ಲೆಕ್ಕಪರಿಶೋಧನೆಯನ್ನು ಮುಕ್ತಾಯಗೊಳಿಸಿ ವರದಿ ಸಲ್ಲಿಸಲು ಕೊನೆಯ ದಿನ. ವರದಿಯನ್ನು ರಿಜಿಸ್ಟ್ರಾರಿನಿಗೆ, ಸಹಕಾರ ಲೆಕ್ಕ ಪರಿಶೋಧನಾ ನಿರ್ದೇಶಕನಿಗೆ, ಹಣಕಾಸು ನೀಡುವ ಬ್ಯಾಂಕಿಗೆ ಅಥವಾ ಸಾಲ ನೀಡಿಕೆ ಏಜೆನ್ಸಿಗೆ ಮತ್ತು ಸದರಿ ಸಹಕಾರಿಯು ಯಾವುದೇ ಇತರ ಸಹಕಾರಿಯೊಡನೆ ಸಂಯೋಜಿತವಾಗಿದ್ದರೆ ಆ ಸಹಕಾರಿಗೆ ಕಳುಹಿಸತಕ್ಕದ್ದು.
2. **ಸೆಪ್ಟೆಂಬರ್ 25 :** ಕಾಯ್ದೆ ಕಲಂ 30(1) ಹಾಗೂ ನಿಯಮ 6ಸಿ(1) ರಂತೆ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲು ಕೊನೆಯ ದಿನ.
3. **ಸೆಪ್ಟೆಂಬರ್ 30 :** ಕಾಯ್ದೆ ಕಲಂ 34ರಡಿ ಮಾಹಿತಿ/ವರದಿಗಳನ್ನು ಸಲ್ಲಿಸಲು ಕೊನೆಯ ದಿನ. ವರದಿಯನ್ನು ನಿಬಂಧಕರಿಗೆ ಹಾಗೂ ಸಂಯುಕ್ತ ಸಹಕಾರಿಗೆ ಸಲ್ಲಿಸತಕ್ಕದ್ದು.
4. **ಸೆಪ್ಟೆಂಬರ್ 30 :** ಸಂಯುಕ್ತ ಸಹಕಾರಿ ಉಪವಿಧಿ ಕ್ರಮ ಸಂಖ್ಯೆ 38 ರಂತೆ ಸಂಯುಕ್ತ ಸಹಕಾರಿಯ ವಾರ್ಷಿಕ ವಂತಿಗೆ ಪಾವತಿಗೆ ಕೊನೆಯ ದಿನ.
5. ಕಾಯ್ದೆ ಕಲಂ 10(2)(21)(ಬಿ) ರಂತೆ ನಿವ್ವಳ ಲಾಭದ ಶೇ.2 ಶಿಕ್ಷಣ ನಿಧಿಯನ್ನು ಸಂಯುಕ್ತ ಸಹಕಾರಿಗೆ ಸಾಮಾನ್ಯ ಸಭೆ ಮುಗಿದ ಮುವತ್ತು ದಿನಗಳೊಳಗೆ ಸಂಯುಕ್ತ ಸಹಕಾರಿಗೆ ಜಮಾಮಾಡತಕ್ಕದ್ದು. ಶಿಕ್ಷಣ ನಿಧಿ ಪಾವತಿಸದೆ ತನ್ನ ಸದಸ್ಯರಿಗೆ ಲಾಭಾಂಶವನ್ನು ಸಂದಾಯ ಮಾಡುವಂತಿಲ್ಲ.
6. ಸಾಮಾನ್ಯ ಸಭೆಯ ದಿನಾಂಕ, ಸ್ಥಳ, ಸಮಯ ಮತ್ತು ವಿಷಯಗಳನ್ನೊಳಗೊಂಡ ನೋಟಿಸ್‌ನ್ನು ನಿಯಮ 6ಸಿ(2) ರನ್ವಯ ಉಪವಿಧಿ ತಿದ್ದುಪಡಿ ಸಂದರ್ಭದಲ್ಲಿ ಕನಿಷ್ಠ 20 ದಿನಗಳ ಮೊದಲು ಅಥವಾ ಇತರ ಸಂದರ್ಭಗಳಲ್ಲಿ ಕನಿಷ್ಠ 15 ಸ್ಪಷ್ಟ ದಿನಗಳ ನೋಟಿಸನ್ನು ನೀಡುವುದರ ಮೂಲಕ ವಾಷಿಕ ಸಾಮಾನ್ಯ ಸಭೆಯನ್ನು ಕರೆಯತಕ್ಕದ್ದು.
7. ಕಾಯ್ದೆ ಕಲಂ 33 (3) ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನು ಅನುಮೋದಿಸಿದ ಲೆಕ್ಕಪರಿಶೋಧಕರ ಪಟ್ಟಿಯಲ್ಲಿರುವ ಲೆಕ್ಕಪರಿಶೋಧಕರನ್ನು ಸಹಕಾರಿ ವರ್ಷದ ಲೆಕ್ಕಪರಿಶೋಧನೆಗೆ ನೇಮಿಸಿಕೊಳ್ಳಬೇಕಾಗುತ್ತದೆ. ಯಾವುದೇ ಕಾಲಕ್ಕೂ ಹಾಗೂ ಯಾವುದೇ ಕಾರಣಕ್ಕೂ ಲೆಕ್ಕಪರಿಶೋಧಕರ ಪಟ್ಟಿಯಲ್ಲಿ ಹೆಸರಿಲ್ಲದ ಲೆಕ್ಕಪರಿಶೋಧಕರನ್ನು ನೇಮಿಸತಕ್ಕದ್ದಲ್ಲ. ಲೆಕ್ಕಪರಿಶೋಧಕರ ಪಟ್ಟಿಯು http://sahakaradarpana.kar.nic.in/ ವೆಬ್‌ತಾಣದಲ್ಲಿ ಲಭ್ಯವಿರುತ್ತದೆ.
8. ಕಾಯ್ದೆ ಕಲಂ 33 (2) ಸಹಕಾರಿಯ ಲೆಕ್ಕಪರಿಶೋಧಕರ ನೇಮಕಾತಿಯನ್ನು ಸಾಮಾನ್ಯ ಸಭೆಯಲ್ಲಿಯೇ ಮಾಡಬೇಕು.
9. ನಿಯಮ 8ಬಿ(8) ರಂತೆ ಸಾಮಾನ್ಯ ಸಭೆ ಮುಗಿದ 7 ದಿವಸಗಳಲ್ಲಿ ಲೆಕ್ಕಪರಿಶೋಧಕರಿಗೆ ನೇಮಕಾತಿ ಬಗ್ಗೆ ಹಾಗೂ ನಿಗದಿಪಡಿಸಿದ ಸಂಭಾವನೆ ಕುರಿತ ತಿಳುವಳಿಕೆ ಪತ್ರವನ್ನು ಕಳುಹಿಸಬೇಕು. ಮತ್ತು ನೇಮಕಾತಿ ಮಾಹಿತಿಯನ್ನು ಸಂಯುಕ್ತ ಸಹಕಾರಿಗೆ, ಲೆಕ್ಕಪರಿಶೋಧನಾ ನಿರ್ದೇಶಕನಿಗೆ ತಿಳಿಸಬೇಕು.
10. ಕಾಯ್ದೆ ಕಲಂ 33(10) ರಂತೆ ಲೆಕ್ಕಪರಿಶೋಧನಾ ವರದಿಯನ್ನು ಅನುಪಾಲನಾ ವರದಿಗೆ ಸಾಮಾನ್ಯ ಸಭೆ ಮುಗಿದ 30 ದಿನಗಳೊಳಗೆ ರಿಜಿಸ್ಟ್ರಾರನಿಗೆ, ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನಿಗೆ ಮತ್ತು ಸಂಯುಕ್ತ ಸಹಕಾರಿಗೆ ಸಲ್ಲಿಸಬೇಕು.
11. ಸಾಮಾನ್ಯ ಸಭೆ ಮುಗಿದ 30 ದಿನಗಳೊಳಗೆ ಸಾಮಾನ್ಯ ಸಭೆಯ ನಡವಳಿಗಳ ದೃಢೀಕೃತ ಪ್ರತಿಯನ್ನು ನಿಯಮ 6ಸಿ(14) ರಂತೆ ರಿಜಿಸ್ಟ್ರಾರನಿಗೆ, ಸಂಯುಕ್ತ ಸಹಕಾರಿಗೆ ಸಲ್ಲಿಸಬೇಕು, ಸಂಬಂಧಪಟ್ಟ ಣಕಾಸು ಬ್ಯಾಂಕಿಗೆ, ಸಂಬಂಧಪಟ್ಟ ಕ್ರೆಡಿಟ್ ಏಜೆನ್ಸಿಗೆ ಕಳುಹಿಸತಕ್ಕದ್ದು ಮತ್ತು ಸಹಕಾರಿಯ ಸೂಚನಾ ಫಲಕದಲ್ಲಿ ದೃಢೀಕೃತ ಪ್ರತಿಯನ್ನು ಪ್ರಕಟಿಸತಕ್ಕದ್ದು.

## ಸಂಯುಕ್ತ ಸಹಕಾರಿಯ ಹಿರಿಯ ಅಧಿಕಾರಿ - ಶ್ರೀ ಶ್ರೀಕಾಂತ ಬರುವೆ ರವರಿಗೆ ಬೀಳ್ಕೋಡಿಗೆ



ಶ್ರೀ ಶ್ರೀಕಾಂತ ಬರುವೆ ಸಂಯುಕ್ತ ಸಹಕಾರಿಯ ಅಧಿಕಾರಿಯಾಗಿ ಸಹಪ್ರಧಾನ ವ್ಯವಸ್ಥಾಪಕರಾಗಿ ಹಾಗೂ ಉಪಪ್ರದಾನ ವ್ಯವಸ್ಥಾಪಕರಾಗಿ ಬೆಳಗಾವಿ ಪ್ರಾಂತೀಯ ಕಛೇರಿಯ ವ್ಯವಸ್ಥಾಪಕರಾಗಿ ಹಾಗೂ ಟಾಸ್ಕ್ ಫೋರ್ಸ್‌ನ ಮುಖ್ಯಸ್ಥರಾಗಿ ಉತ್ತಮ ಸೇವೆ ಸಲ್ಲಿಸಿ ಪ್ರಸ್ತುತ ಅವರಿಗೆ ಪ್ರತಿಷ್ಠಿತ ಮ್ಯಾಮ್‌ಕೋಸ್ ಅಡಿಕೆ ಮಾರಾಟ ಸಹಕಾರ ಸಂಸ್ಥೆ ಶಿವಮೊಗ್ಗ ಇದರ ವ್ಯವಸ್ಥಾಪಕ ನಿರ್ದೇಶಕರಾಗಿ ನೇಮಕಗೊಂಡ ನಂತರ ಸಂಯುಕ್ತ ಸಹಕಾರಿಯ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದರು.

ಸಂಯುಕ್ತ ಸಹಕಾರಿಯ ದಿನಾಂಕ 28.08.2023 ಆಡಳಿತ ಮಂಡಳಿ ಸಭೆಯ ನಿರ್ಣಯದಂತೆ ಶ್ರೀಯುತರನ್ನು ಆಮಂತ್ರಿಸಿ ಅವರಿಗೆ ಬೀಳ್ಕೋಡಿಗೆ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಈ ಸಮಾರಂಭದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕರಾದ ಶ್ರೀ ಎ. ಆರ್. ಪ್ರಸನ್ನಕುಮಾರ್ ಮಾಜಿ ಅಧ್ಯಕ್ಷರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿ ಹಾಗೂ ಶ್ರೀ ಗುರುನಾಥ ಜ್ಯಾಂತಿಕರ್ ರವರು ಸೇರಿದಂತೆ ಆಡಳಿತ ಮಂಡಳಿಯ ಗೌರವಾನ್ವಿತ ನಿರ್ದೇಶಕರುಗಳು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಸಂಯುಕ್ತ ಸಹಕಾರಿಯ ಎಲ್ಲ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದು ಶ್ರೀಯುತ ಸೇವಾವಧಿಯ ಅನೇಕ ಮಹತ್ವದ ಕೆಲಸಕಾರ್ಯಗಳ ಬಗ್ಗೆ ಮೆಲಕುಹಾಕಿ ಅವರ ಸೇವೆಯನ್ನು ಪ್ರಸಂಶಿಸಿದರು. ಶ್ರೀ ಸೂರ್ಯಕಾಂತ್ಯಾಕಲೇರವರು ಕಾರ್ಯಕ್ರಮದ ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಮಾಡಿದರು. ಸ್ವಾಗತವನ್ನು ಶ್ರೀಮತಿ ಶೋಭರವರು ನೆರವೇರಿಸಿದರು.

# ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರು ವಿವಿಧ ಸೌಹಾರ್ದ ಸಹಕಾರಿಗಳಿಗೆ ಭೇಟಿ



ತುಂಗಭದ್ರಾ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು ಸದರಿ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ನಂಜನಗೌಡ ರವರು ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಯ ಬಗ್ಗೆ ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಈ ಸಹಕಾರಿಯ ಅಧ್ಯಕ್ಷರು ರಾಯಚೂರು ಜಿಲ್ಲಾ ಒಕ್ಕೂಟದ ಅಧ್ಯಕ್ಷರು ಹಾಗೂ ಮಾಜಿ ಸಂಸದರು ಶ್ರೀ ವೀರೂಪಾಕ್ಷಪ್ಪರವರು, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಆರ್, ತಿಮ್ಮಯ್ಯಶೆಟ್ಟಿಯವರು ಹಾಗೂ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು, ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜರವರು ಸಹಕಾರಿಯ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಸಹಕಾರಿ ವತಿಯಿಂದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರು, ನಿರ್ದೇಶಕರು, ಹಾಗೂ ಪ್ರಾಂತೀಯ ವ್ಯವಸ್ಥಾಪಕರಿಗೆ ಸನ್ಮಾನಿಸಿದರು.



ಶ್ರೀ ಗಂಗಾಧರೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., ಗಂಗಾವತಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಜಿ ನಂಜನಗೌಡರವರು. ನಿರ್ದೇಶಕರಾದ ಶ್ರೀ ಜಿ ಶ್ರೀಧರರವರು ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಿದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಶ್ರೀಧರ ರವರು ಒಕ್ಕೂಟದ ಅದ್ಯಕ್ಷರಾದ ಶ್ರೀ ನಾಗಲಿಂಗಪ್ಪ ಪತ್ತಾರ ರವರು ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರವರು, ಜಿಲ್ಲಾ ಸಂಯೋಜಕರಾದ ಶ್ರೀ ಓಂಕಾರವರು ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

---

ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ಹಾಗೂ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠರವರು ಬೆಳಗಾವಿ ಜಿಲ್ಲೆಯ ಯಳ್ಳೂರಿನಲ್ಲಿರುವ ಚತ್ರಪತಿ ಶಿವಾಜಿ ಕೋಟೆ ಹಾಗೂ ಪ್ರತಿಮೆಗೆ ವಂದಿಸಿದರು.



ಭುವನೇಶ್ವರಿ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿ ನಿ., ಗಂಗಾವತಿ ಸದರಿ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡರವರು, ನಿರ್ದೇಶಕರಾದ ಶ್ರೀ ಜಿ ಶ್ರೀಧರರವರು ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತರವರು, ಜಿಲ್ಲಾ ಸಂಯೋಜಕರಾದ ಶ್ರೀ ಓಂಕಾರವರು ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಉಪಸ್ಥಿತರಿದ್ದರು.



ಶ್ರೀ ಚನ್ನಬಸವ ಸೌಹಾರ್ದ ಪತ್ತಿನ ಸಹಕಾರಿ ನಿ., ಗಂಗಾವತಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ಶ್ರೀಧರರವರು ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಿದರು.ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಶ್ರೀಧರ ರವರು ಒಕ್ಕೂಟದ ಅದ್ಯಕ್ಷರಾದ ಶ್ರೀ ನಾಗಲಿಂಗಪ್ಪ ಪತ್ತಾರ ರವರು ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರವರು, ಜಿಲ್ಲಾ ಸಂಯೋಜಕರಾದ ಶ್ರೀ ಓಂಕಾರವರು ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



ಶ್ರೀ ಶಾಂತವೀರೇಶ್ವರ ಸೌಹಾರ್ದ ಸಹಕಾರಿ ನಿಯಮಿತ ಹಾವೇರಿ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಜಿ ನಂಜನಗೌಡರವರು ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಿದರು.




ಗಂಗೋತ್ರಿ ಮಹಿಳಾ ವಿವಿದ್ದೋದ್ಧೇಶ ಸೌಹಾರ್ದ ಸಹಕಾರಿ ನಿ., ಹುಮನಾಬಾದ ಸದರಿ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ, ಮಾನ್ಯ ನಿರ್ದೇಶಕರುಗಳಾದ ಶ್ರೀ ಗುರುನಾಥ ಜ್ಯಾಂತಿಕರ್, ಶ್ರೀಮತಿ ಶೈಲಜಾ ತಪಲಿ, ಶ್ರೀ ಜಿ. ಶ್ರೀಧರ ರವರು ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಭೇಟಿ ನೀಡಿದರು. ಸಹಕಾರಿ ವತಿಯಿಂದ ಮಾನ್ಯ ಅಧ್ಯಕ್ಷರು, ನಿರ್ದೇಶಕರು ಸನ್ಮಾನಿಸಲಾಯಿತು. ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ಮಾಯಾದೇವಿ ಸಿಂಧನಕೇರಾರವರು, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



ಓಂ ಶ್ರೀ ವೀರಭದ್ರೇಶ್ವರ ಸೌಹಾರ್ದ ಸಹಕಾರಿ ನಿ., ಕಲಬುರಗಿ ಸದರಿ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ, ಮಾನ್ಯ ನಿರ್ದೇಶಕರುಗಳಾದ ಶ್ರೀ ಗುರುನಾಥ ಜ್ಯಾಂತಿಕರ್, ಶ್ರೀಮತಿ ಶೈಲಜಾ ತಪಲಿ, ಶ್ರೀ ಜಿ. ಶ್ರೀಧರ ರವರು ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಭೇಟಿ ನೀಡಿದರು. ಸಹಕಾರಿಯ ಬೆಳವಣಿಗೆಯ ಕುರಿತು ಚರ್ಚಿಸಿದರು. ಸಹಕಾರಿ ವತಿಯಿಂದ ಮಾನ್ಯ ಅಧ್ಯಕ್ಷರು, ನಿರ್ದೇಶಕರು ಸನ್ಮಾನಿಸಲಾಯಿತು. ಸಹಕಾರಿಯ ಅಧ್ಯಕ್ಷರಾದ ಶ್ರೀ ಚಂದ್ರಶೇಖರ ಪರಸರೆಡ್ಡಿ ಹಾಗೂ ಒಕ್ಕೂಟದ ನಿರ್ದೇಶಕರಾದ ಶ್ರೀ ಬಸವರಾಜ ಸಮಾಳ ಸಿಬ್ಬಂದಿಗಳು ಉಪಸ್ಥಿತರಿದ್ದರು.



ಶ್ರೀ ಬಸವೇಶ್ವರ ಸೌಹಾರ್ದ ಸಹಕಾರಿ ನಿ., ಕಮಲಾಪುರ ಸದರಿ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ, ಮಾನ್ಯ ನಿರ್ದೇಶಕರುಗಳಾದ ಶ್ರೀ ಗುರುನಾಥ ಜ್ಯಾಂತಿಕರ್, ಶ್ರೀಮತಿ ಶೈಲಜಾ ತಪಲಿ, ಶ್ರೀ ಜಿ. ಶ್ರೀಧರ ರವರು ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಭೇಟಿ ನೀಡಿದರು. ಸಹಕಾರಿ ವತಿಯಿಂದ ಮಾನ್ಯ ಅಧ್ಯಕ್ಷರು, ನಿರ್ದೇಶಕರು ಸನ್ಮಾನಿಸಲಾಯಿತು. ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಬಸವರಾಜ ಕಶೆಟ್ಟಿ ಮತ್ತು ನಿರ್ದೇಶಕರುಗಳಾದ ಶ್ರೀ ರಾಮಲಿಂಗ ಎಮ್ ಚಿಕ್ಕೆಗೌಡ, ಶ್ರೀ ಉದಯಕುಮಾರ ಸ್ಥಾವರಮಠ, ಶ್ರೀ ಸಂಜೀವಕುಮಾರ ಸಿ ಜಿಂಗಿ, ಶ್ರೀಮತಿ ಸುನಂದ ಎಂ ದೋಶೆಟ್ಟಿ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



ಕಲ್ಯಾಣ ಕರ್ನಾಟಕ ವಕೀಲರ ಸೌಹಾರ್ದ ಸಹಕಾರಿ ನಿ., ಕಲಬುರಗಿ ಸದರಿ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ, ಮಾನ್ಯ ನಿರ್ದೇಶಕರುಗಳಾದ ಶ್ರೀ ಗುರುನಾಥ ಜ್ಯಾಂತಿಕರ್, ಶ್ರೀಮತಿ ಶೈಲಜಾ ತಪಲಿ, ಶ್ರೀ ಜಿ. ಶ್ರೀಧರ ರವರು ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಭೇಟಿ ನೀಡಿದರು. ಸಹಕಾರಿಯ ಬೆಳವಣಿಗೆಯ ಕುರಿತು ಚರ್ಚಿಸಿದರು. ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



ವಿಜಯಲಕ್ಷ್ಮೀ ಸೌಹಾರ್ದ ಸಹಕಾರಿ ನಿ., ಶಿರಸಿ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡರವರು ಭೇಟಿ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು, ನಿರ್ದೇಶಕರು ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದು ಸಹಕಾರಿಯ ಬಗ್ಗೆ ಮಾಹಿತಿ ನೀಡಿದರು.



ಹಿರಿಯ ಸಹಕಾರಿ ಮತ್ತು ಆಳಂದ ಕ್ಷೇತ್ರದ ಮಾನ್ಯ ಶಾಸಕರು ಹಾಗೂ ವಿಶ್ವಕಲ್ಯಾಣ ಸೌಹಾರ್ದ ಪತ್ತಿನ ಸಹಕಾರಿ ನಿ., ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ,ಆರ್ ಪಾಟೀಲರವರನ್ನು ಸಂಯುಕ್ತ ಸಹಕಾರಿ ವತಿಯಿಂದ ಸಂಂ–ಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ, ಮಾನ್ಯ ನಿರ್ದೇಶಕರುಗಳಾದ ಶ್ರೀ ಗುರುನಾಥ ಜ್ಯಾಂತಿಕರ್, ಶ್ರೀಮತಿ ಶೈಲಜಾ ತಪಲಿ, ಶ್ರೀ ಜಿ. ಶ್ರೀಧರ ರವರು, ಭೇಟಿ ನೀಡಿ ಸನ್ಮಾನಿಸಿದರು . ಈ ಸಂದರ್ಭದಲ್ಲಿ ಕಲಬುರಗಿ ಜಿಲ್ಲಾ ಒಕ್ಕೂಟದ ನಿರ್ದೇಶಕರಾದ ಶ್ರೀ ಚಂದ್ರಕಾಂತ ಪರಸರೆಡ್ಡಿರವರು ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ದ್ಯಾಕಲೆಯವರು ಉಪಸ್ಥಿತರಿದ್ದರು.




ಶ್ರೀ ಗುರು ಸದಾನಂದ ಸೌಹಾರ್ದ ಸಹಕಾರಿ ನಿಯಮಿತ ಹಾವೇರಿ., ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಜಿ ನಂಜನಗೌಡರವರು. ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಿದರು.

..........................................................................................

ಕದಂಬ ಸೌಹಾರ್ದ ಸಹಕಾರಿ ನಿ., ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಜಿ ನಂಜನಗೌಡರವರು ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಿದರು.



ಗೋದಾವರಿ ಸಮೂಹ ಸಂಸ್ಥೆ., ಶಿರಸಿ ಸಂಸ್ಥೆಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಜಿ ನಂಜನಗೌಡರವರು ಭೇಟಿ ನೀಡಿದ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ರಾಘವೇಂದ್ರ ನಾಯಕರವರು ಭೇಟಿಯಾಗಿ ಗೌರವಪೂರ್ವಕವಾಗಿ ಸನ್ಮಾನಿಸಿದರು



ದಿನಾಂಕ 17.08.2023 ರಂದು ಶ್ರೀ ಮಹಾಲಕ್ಷ್ಮೀ ಸಮೃದ್ಧಿ ಸೌಹಾರ್ದ ಸಹಾಕರಿ ಸಂಘ ನಿ., ಕನಕಗಿರಿ ಸಹಕಾರಿಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ಇವರು ನೆರವೇರಿಸಿದರು.

..........................................................................................

ದಿನಾಂಕ 05.08.2023 ರಂದು ತುಮಕೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ, ತುಮಕೂರು ಇದರ ಆಡಳಿತ ಮಂಡಳಿ ಸಭೆಯು ಜರುಗಿತು. ಸಭೆಯಲ್ಲಿ ತುಮಕೂರು ಜಿಲ್ಲಾ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು, ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್, ಲಕ್ಷ್ಮೀನಾರಾಯಣ, ಉಪಾಧ್ಯಕ್ಷರಾದ ಶ್ರೀ ಲ್ಯಾನ್ಸಿ ಹೆಚ್. ಪಾಯಸ್, ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್. ಇವರು ಉಪಸ್ಥಿತರಿದ್ದರು.

ದಿನಾಂಕ 10.08.2023ರಂದು ಮಂಚೇನಹಳ್ಳಿ ಸ್ನೇಹ ಸೌಹಾರ್ದ ಸಹಕಾರಿ ನಿ, ಮಂಚೇನಹಳ್ಳಿ, ಚಿಕ್ಕಬಳ್ಳಾಪುರ ಜಿಲ್ಲೆ ಸಹಕಾರಿಗೆ ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್. ಇವರು ಭೇಟಿ ನೀಡಿ ಆಡಳಿತ ಮಂಡಳಿ ಸದಸ್ಯರಿಗೆ ಸೌಹಾರ್ದ ಕಾಯ್ದೆ ಮತ್ತು ಕಾರ್ಯಚಟುವಟಿಕೆಗಳು ಹಾಗೂ ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿ ನೀಡಿದರು.

ದಿನಾಂಕ 12.08.2023ರಂದು ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ಎಸ್. ಇವರು ಜಿ.ಎಮ್. ಸೌಹಾರ್ದ ಸಹಕಾರಿ ನಿ, ದಾವಣಗೆರೆ ಇದರ ಆಡಳಿತ ಮಂಡಳಿ ಸಭೆಯಲ್ಲಿ ಭಾಗವಹಿಸಿ ಆಡಳಿತ ಮಂಡಳಿ ಸದಸ್ಯರಿಗೆ ನಿರ್ದೇಶಕರ ಕರ್ತವ್ಯಗಳು ಮತ್ತು ಜವಾಬ್ದಾರಿಗಳ ಕುರಿತು ಮಾಹಿತಿ ನೀಡಿದರು.



# ಸಂಯುಕ್ತ ಸಹಕಾರಿ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಗಳಲ್ಲಿ 77ನೇ ಸ್ವಾತಂತ್ರ್ಯ ದಿನಾಚರಣೆ

77ನೇ ಸ್ವಾತಂತ್ರ್ಯ ದಿನಾಚರಣೆಯ ಧ್ವಜರೋಹಣವನ್ನು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ಬೆಂಗಳೂರು ವಿಭಾಗ ಹಾಗೂ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ ಮತ್ತು ಬೆಳಗಾವಿ ವಿಭಾಗ, ಕಲಬುರಗಿ ವಿಭಾಗ, ಮೈಸೂರು ವಿಭಾಗದಲ್ಲಿ ಹಾಗೂ ಜಿಲ್ಲಾ ಸಂಪರ್ಕ ಕಛೇರಿಗಳಲ್ಲಿ ಆಚರಿಸಲಾಯಿತು.



**ಬೆಂಗಳೂರು** : 77ನೇಯ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಮಾನ್ಯ ಶ್ರೀ ಬಿ ಎಸ್ ಗುಂಡುರಾವ್ ರವರು ನೆರವೇರಿಸಿದರು.

ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ಹಾಗೂ ಉಪಪ್ರಧಾನ ವ್ಯವಸ್ಥಾಪಕರಾದ ಮಾನ್ಯ ಶ್ರೀ ನಾರಾಯಣ ಹೆಗ್ಡೆ ಹಾಗೂ ಎಲ್ಲಾ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಕಲಬುರಗಿ** : ದಿನಾಂಕ 15.08.2023 ರಂದು ಪ್ರಾಂತೀಯ ಕಛೇರಿ ಕಲಬುರಗಿಯಲ್ಲಿ 77ನೇ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿಯವರು ನೆರವೇರಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿಕಟಪೂರ್ವ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ, ಜಿಲ್ಲ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಎಸ್, ಎಸ್ ಪಾಟೀಲರವರು ಹಾಗೂ ನಗರದ ಸಹಕಾರಿಗಳ ಪ್ರತಿನಿಧಿಗಳು ಪ್ರಾಂತದ ಮತ್ತು ಕೇಂದ್ರ ಕಛೇರಿಯ ಸಿಬ್ಬಂದಿಯವರು ಉಪಸ್ಥಿತರಿದ್ದರು.



**ಬೆಳಗಾವಿ** : 77ನೇಯ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡರವರು ನೆರವೇರಿಸಿದರು. ಈ ಕಾರ್ಯಕ್ರಮದಲ್ಲಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲರವರು, ಹಾಗೂ ಬೆಳಗಾವಿಯ ವಿವಿಧ ಹಿರಿಯ ಸಹಕಾರಿಗಳು ಮತ್ತು ಪ್ರಾಂತೀಯ ಕಛೇರಿಯ ಎಲ್ಲ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಮೈಸೂರು** : 77ನೇ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣವನ್ನು ಆರಾಧ್ಯ ಸೌಹಾರ್ದ ಸಹಕಾರಿಯ ನಿರ್ದೇಶಕರಾದ ಶ್ರೀ ನಾಗಭೂಷಣ್ ಆರಾಧ್ಯ ಮತ್ತು ಶಾರದಾ ಸೌಹಾರ್ದ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಕುಮಾರ್ ರವರು ನೆರವೇರಿಸಿದರು, ಈ ಕಾರ್ಯಕ್ರಮದಲ್ಲಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದರ ಹಾಗೂ ಸ್ಥಳೀಯ ಸಹಕಾರಿಗಳು ಮತ್ತು ಪ್ರಾಂತೀಯ ಕಛೇರಿಯ ಎಲ್ಲ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಬೀದರ** : ಬೀದರ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ 77ನೇ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರ್ ನೆರವೇರಿಸಿದರು. ಈ ಸಂದರ್ಭದಲ್ಲಿ ಒಕ್ಕೂಟದ ನಿರ್ದೇಶಕರು, ಸಹಕಾರಿಯ ಅಧ್ಯಕ್ಷರು, ಮುಖ್ಯ ಕಾರ್ಯನಿರ್ವಾಹಕರು ಹಾಗೂ ಕಛೇರಿಯ ಎಲ್ಲ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ 77ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ದಿನಾಚರಣೆ




ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ಸಂಘ ನಿ., ಇದರ ಕಛೇರಿಯಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ಸಹಕಾರಿಯ ಅಧ್ಯಕ್ಷರು ಧ್ವಜಾರೋಹಣ ಮೂಲಕ ಆಚರಣೆ ಮಾಡಿದರು. ಈ ಸಂದರ್ಭದಲ್ಲಿ ಸಹಕಾರಿಯ ನಿರ್ದೇಶಕರುಗಳಾದ ಎಸ್ ಬಾಲಸುಬ್ರಹ್ಮಣ್ಯ, ಸಿ.ಎಸ್ ಮಹೇಶ್ ಕುಮಾರ್, ಎಂ ರಾಮಚಂದ್ರ, ಎಸ್.ವಿ ಗಣೇಶ್, ಎಂ. ಕಮಲರಾಜ್, ಡಿ.ಎಸ್ ರಾಘವೇಂದ್ರ, ಹೆಚ್.ಬಿ ರಾಜಶೇಖರ್ ಮತ್ತು ಮುಖ್ಯ ಕಾರ್ಯ ನಿರ್ವಾಹಕ ಬಿ.ಜಿ ಸಂಕೀರ್ತನ ಸಿಬ್ಬಂದಿಗಳಾದ ಕು. ಭಾವನಾ ಮತ್ತು ಕು. ಸ್ಫೂರ್ತಿ ಹಾಜರಿದ್ದರು.



ಇಶಾನಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ವಿಜಯಪುರ ಸಹಕಾರಿಯಲ್ಲಿ 77ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದಭದಲ್ಲಿ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



ಕೆ.ಆರ್ ಪೇಟೆ ತಾಲ್ಲೂಕು ಶ್ರೀ ಶಿವಜ್ಯೋತಿ ಗಾಣಿಗರ ಸೌಹಾರ್ದ ಸಹಕಾರಿ ನಿ., ಇದರ ಕಛೇರಿಯಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಧ್ವಜಾರೋಹಣವನ್ನು ನೇರವೇರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಎಸ್.ನಾಗರಾಜು ರವರು ನಿರ್ದೇಶಕರು ಮತ್ತು ಸಿಇಓ ರವರು ಹಾಜರಿದ್ದರು.



ಪಾರ್ವತಿ ಸೌಹಾರ್ದ ಸಹಕಾರಿ ನಿ., ಕುದೇರು ಇದರ ಕಛೇರಿಯಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ಸಹಕಾರಿಯ ಅಧ್ಯಕ್ಷರು ಧ್ವಜಾರೋಹಣ ಮಾಡುವುದರ ಮೂಲಕ ಆಚರಣೆ ಮಾಡಿದರು. ಈ ಸಂದರ್ಭದಲ್ಲಿ ಸಹಕಾರಿಯ ನಿರ್ದೇಶಕರು ಮುಖ್ಯ ಕಾರ್ಯನಿರ್ವಾಹಕರು ಹಾಜರಿದ್ದರು.



ಜೈಭೀಮ್ ಬಿಸಿನೆಸ್ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಇದರ ಕಛೇರಿಯಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನಸ್ವಾಮಿ ರವರು ಧ್ವಜಾರೋಹಣ ಮಾಡುವುದರ ಮೂಲಕ ಆಚರಣೆ ಮಾಡಿದರು. ಈ ಸಂದರ್ಭದಲ್ಲಿ ಸಹಕಾರಿಯ ನಿರ್ದೇಶಕರು ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ನಂಜುಂಡ ರವರು ಹಾಜರಿದ್ದರು.



ನವ್ಯ ಕರ್ನಾಟಕ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಚಾಮರಾಜನಗರ ಇದರ ಕಚೇರಿ ಆವರಣದಲ್ಲಿ ಸ್ವಾತಂತ್ರ್ಯೋತ್ಸವ ದಿನಾಚರಣೆ ಪ್ರಯುಕ್ತ ಧ್ವಜಾರೋಹಣವನ್ನು ಸಹಕಾರಿಯ ಅಧ್ಯಕ್ಷರು ಮಾಡಿದರು. ಈ ಸಂದರ್ಭದಲ್ಲಿ ನಿರ್ದೇಶಕರು, ಸಿಇಓ, ಲೆಕ್ಕಿಗರು & ಪಿಗ್ಮಿ ಸಂಗ್ರಹಕಾರರು ಹಾಜರಿದ್ದರು.



ನುಡಿಭಾರತಿ ಸೌಹಾರ್ದ ಸಹಕಾರಿ ಸಂಘ ನಿ., ಮಂಡ್ಯ ಕಛೇರಿಯಲ್ಲಿ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಎ.ಎಲ್ ಬಸವೇಗೌಡ ರವರು ಧ್ವಜಾರೋಹಣ ಕಾರ್ಯಕ್ರಮ ನಡೆಸಿ ಎಲ್ಲರಿಗೂ ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯಗಳನ್ನು ಕೋರಿದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಅರುಣ್ ಕುಮಾರ್ ಪಿ ಸಿ ಹಿರಿಯ ನಿರ್ದೇಶಕರುಗಳಾದ ದೊರೆಸ್ವಾಮಿ ವಿ , ನಾಗರಾಜು ಕೆ ಸಿ , ನವೀನ್ ಕುಮಾರ್ ಬಿ , ಸಂತೋಷ್ ಕುಮಾರ್ ಬಿ , ಮಂಜುನಾಥ್ ಬಿ, ಮತ್ತು ಸಂಸ್ಥೆಯ ನೌಕರನಾದ ಅನಂತು ಭಾಗವಹಿಸಿದ್ದರು.



ವಿಶ್ವರೂಪ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಹಾಸನ ಕಛೇರಿಯಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಸಹಕಾರಿಯ ಅಧ್ಯಕ್ಷರು ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ನಿರ್ದೇಶಕರು, ಸಿಇಓ & ಸಹಾಯಕರು ಹಾಜರಿದ್ದರು.



ಶ್ರೀ ಸಾಯಿಸಿರಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಹಾಸನ ಕಛೇರಿಯಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಸಹಕಾರಿಯ ಅಧ್ಯಕ್ಷರು ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಉಪಾಧ್ಯಕ್ಷರು ನಿರ್ದೇಶಕರು, ಸದಸ್ಯರು, ಸಿಇಓ & ಸಿಬ್ಬಂದಿಗಳು ಹಾಜರಿದ್ದರು.



ಶ್ರೀ ವಿಘ್ನೇಶ್ವರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಹಾಸನ ಕಛೇರಿಯಲ್ಲಿ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಕುಮಾರಪ್ಪ ರವರು ಧ್ವಜಾರೋಹಣ ಕಾರ್ಯಕ್ರಮ ನಡೆಸಿ ಎಲ್ಲರಿಗೂ ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯಗಳನ್ನು ಕೋರಿದರು. ಕಾರ್ಯಕ್ರಮದಲ್ಲಿ ನಿರ್ದೇಶಕರು, ಸಿಇಓ ರಾದ ಶ್ರೀ ರವಿಕುಮಾರ್ ರವರು ಮತ್ತು ಸಹಕಾರಿಯ ಸಿಬ್ಬಂದಿಗಳು ಭಾಗವಹಿಸಿದ್ದರು.



ಶ್ರೀ ಸಿದ್ದಮಲ್ಲೇಶ್ವರ ಸೌಹಾರ್ದ ಸಹಕಾರಿ ಸಂಘ ನಿ., ಚಾ.ನಗರ ಕಛೇರಿಯಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಪರಮಪೂಜ್ಯ ಶ್ರೀ ಶ್ರೀ ಚನ್ನಬಸವ ಸ್ವಾಮೀಜಿಗಳು ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಮಹದೇವ ಸ್ವಾಮಿ (ಬಾಬು) ನಿರ್ದೇಶಕರು & ಸಿಇಓ ರವರು ಹಾಜರಿದ್ದರು. ಇಂದು ಶ್ರೀಗಳ ಜನ್ಮ ದಿನದ ಕಾರಣ ಸಹಕಾರಿಯ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.



ಪಾಂಡವಪುರ ಗಾಣಿಗರ ಸೌಹಾರ್ದ ಸಹಕಾರಿ ನಿ., ಇದರ ಕಛೇರಿಯಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಸಹಕಾರಿಯ ಅಧ್ಯಕ್ಷರು ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಉಪಾಧ್ಯಕ್ಷರು ನಿರ್ದೇಶಕರು, ಸದಸ್ಯರು & ಸಿಇಓ ರವರು ಹಾಜರಿದ್ದರು.



ಸ್ನೇಹ ಜ್ಯೋತಿ ಮಹಿಳಾ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಇದರ ಕಛೇರಿಯಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಸಹಕಾರಿಯ ಅಧ್ಯಕ್ಷರು ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಉಪಾಧ್ಯಕ್ಷರು ನಿರ್ದೇಶಕರು, ಸದಸ್ಯರು, ಸಿಇಓ & ಸಿಬ್ಬಂದಿಗಳು ಹಾಜರಿದ್ದರು.



ವೀರೇಶ್ವರ ಲಿಂಗಾಯತ ಜನೋಪಯೋಗಿ ಸೌಹಾರ್ದ ಸಹಕಾರಿ ನಿ., ಅರಕಲಗೂಡು ಇದರ ಕಛೇರಿಯಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಸಹಕಾರಿಯ ಅಧ್ಯಕ್ಷರು ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಉಪಾಧ್ಯಕ್ಷರು ನಿರ್ದೇಶಕರು, ಸದಸ್ಯರು & ಸಿಇಓ ರವರು ಹಾಜರಿದ್ದರು.



ಸ್ನೇಹ ಮಿಲನ ಸೌಹಾರ್ದ ಸಹಕಾರಿ ನಿ., ಚನ್ನರಾಯಪಟ್ಟಣ ಇದರ ಕಛೇರಿ ಆವರಣದಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಸಹಕಾರಿಯ ಅಧ್ಯಕ್ಷರು ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ನಿರ್ದೇಶಕರು & ಸಿಇಓ ರವರು ಹಾಜರಿದ್ದರು.



ಬಿಜಿಎಸ್ ಸೌಹಾರ್ದ ಸಹಕಾರಿ ಸಂಘ ನಿ., ಚನ್ನರಾಯಪಟ್ಟಣ ಇದರ ಕಛೇರಿ ಆವರಣದಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಸಹಕಾರಿಯ ಅಧ್ಯಕ್ಷರು ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಉಪಾಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರು & ಸಿಇಓ ರವರು ಹಾಜರಿದ್ದರು.



ಹಾಸನಾಂಬ ಸೌಹಾರ್ದ ಸಹಕಾರಿ ನಿ., ಹಾಸನ ಇದರ ಕಛೇರಿಯಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಸಹಕಾರಿಯ ಅಧ್ಯಕ್ಷರು ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ನಿರ್ದೇಶಕರು & ಸಿಇಓ ರವರು ಹಾಜರಿದ್ದರು.



ಶ್ರೀ ಘನ್ನಿ ಬಸವೇಶ್ವರ ಸೌಹಾರ್ದ ಸಹಕಾರಿ ನಿ., ಹಿರೀಸಾವೆ, ಚನ್ನರಾಯಪಟ್ಟಣ– ತಾ ಇದರ ಕಛೇರಿಯಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಸಹಕಾರಿಯ ಅಧ್ಯಕ್ಷರು ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ನಿರ್ದೇಶಕರು & ಸಿಇಓ ರವರು ಹಾಜರಿದ್ದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಸೌಹಾರ್ದ ಸಹಕಾರಿಯಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



ದಿನಾಂಕ 15–08–2023 ರ ಮಂಗಳವಾರ ಬೆಳಗ್ಗೆ 08:30 ತರೀಕೆರೆ ಅಡಿಕೆ ಬೆಳೆಗಾರರ ಸೌಹಾರ್ದ ಸಹಕಾರಿ ಸಂಘ ನಿಯಮಿತ., ಕಚೇರಿಯ ಆವರಣದಲ್ಲಿ 77ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು.

ನಮ್ಮ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಶಶಾಂಕ ಟಿ.ಜಿ. ರವರು ಧ್ವಜಾರೋಹಣ ನೆರವೇರಿಸಿ ಸ್ವತಂತ್ರಕ್ಕಾಗಿ ಹೋರಾಟ ಮಾಡಿದವರನ್ನು ಸ್ಮರಿಸಿ ಎಲ್ಲರಿಗೂ ಶುಭ ಹಾರೈಸಿದರು.

ನಂತರ ಎಲ್ಲರಿಗೂ ಸಿಹಿ ವಿತರಿಸಿ ಈ ಸಂದರ್ಭದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶಿವ್ವೇಶ್ ಕೆ.ಜಿ. ಹಾಗೂ ನಿರ್ದೇಶಕರಾದ ಶ್ರೀಧರ ಟಿ.ಆರ್, ಆನಂದ ಟಿ.ಎನ್, ಜಯರಾಮ್ ಟಿ.ಕೆ, ದೇವರಾಜು, ಈರಪ್ಪ ಟಿ.ಸಿ, ರಮೇಶ್ ಟಿ.ಎಸ್, ಮುಖ್ಯ ಕಾರ್ಯನಿರ್ವಾಹಕರಾದ ಪ್ರಕಾಶ್ ಟಿ.ಜೆ ಹಾಗೂ ಪರಮೇಶ್ ರವರು ಉಪಸ್ಥಿತರಿದ್ದರು.



ಸಮಾನ ಪತ್ತಿನ ಸೌಹಾರ್ದ ಸಹಕಾರಿ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ಸಹಕಾರಿಯ ಅಧ್ಯಕ್ಷರು, ಮುಖ್ಯಕಾರ್ಯನಿರ್ವಾಹಕರು ಹಾಗೂ ನಿರ್ದೇಶಕರು ಉಪಸ್ಥಿತರಿದ್ದರು



ಉಳವಿ ಚನ್ನಬಸವ ಪತ್ತಿನ ಸೌಹಾರ್ದ ಸಹಕಾರಿಯಲ್ಲಿ 77ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥತರಿದ್ದರು.



ದಿನಾಂಕ 15–08–2023 ರ ಮಂಗಳವಾರದಂದು ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿಯಮಿತ ದಿಂದ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಸಹಕಾರಿಯಿಂದ ಧ್ವಜರೋಹಣ ಮಾಡಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ನಾರಾಯಣ ಮೂರ್ತಿ ಎಸ್ ಎ, ಉಪಾಧ್ಯಕ್ಷರಾದ ಶ್ರೀ ಗೋಪಾಲ್ ಎಸ್ ಜಿ. ಸಹಕಾರಿಯ ನಿರ್ದೇಶಕರಾದ ಶ್ರೀ ಕುಲಕರ್ಣಿ ಸಿ.ಎಂ, ಶ್ರೀ ಗುರುರಾಜ್ ಎ.ಎಸ್ ಮತ್ತು ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಮಾಲತಿ ಎಂ.ಪಿ ಹಾಗೂ ಸಿಬ್ಬಂದಿ ವರ್ಗದವರೂ ಹಾಜರಿದ್ದರು.

ವಿಪ್ರ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿಯಮಿತ ಸಹಕಾರಿಯ ಭದ್ರವತಿ ಶಾಖೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ ಕೆ. ಇವರು ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಸಹಾಯಕ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಕೆ.ಎಸ್ ಶಾಖಾ ಸಿಬ್ಬಂದಿಗಳು ಹಾಗೂ ಗ್ರಾಹಕರು ಉಪಸ್ಥಿತರಿದ್ದರು.




**ಮಂಗಳೂರು :** ಶ್ರೀಶಾ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ ಸಹಕಾರಿಯಲ್ಲಿ 77ನೇ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣವನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ.ಎಸ್ ಗುರುರಾಜ್ ಇವರು ನೇರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



77ನೇ ಸ್ವಾತಂತ್ರೋತ್ಸವ ಅಂಗವಾಗಿ ಸನ್ ರೈಸ್ ಸೌಹಾರ್ದ ಸಹಕಾರಿ ನಿ., ಕ್ಯಾತಸಂದ್ರ, ತುಮಕೂರು ಸಹಕಾರಿಯ ಧ್ವಜಾರೋಹಣವನ್ನು ನಿವೃತ್ತ ಹವಾಲ್ದಾರ್ ನಾಗರಾಜಯ್ಯ ರವರು ನೆರವೇರಿಸಿದರು. ಸಹಕಾರಿಯ ವತಿಯಿಂದ ನಿವೃತ್ತ ಹವಾಲ್ದಾರ್ ನಾಗರಾಜಯ್ಯ ರವರಿಗೆ ಗೌರವ ಸಲ್ಲಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಸಿ.ಪಿ ವಿಜಯ್ ರವರು, ಉಪಾಧ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.




ಮಂಡ್ಯ ವರ್ತಕರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಮಂಡ್ಯ ಇದರ 2022–23 ನೇ ವರ್ಷದ ಸರ್ವ ಸದಸ್ಯರ ಮಹಾ ಸಭೆಯ ಉದ್ಘಾಟನೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಮಹೇಂದ್ರಬಾಬು ಎಂ ಪಿ ರವರು ಹಾಗೂ ಎಲ್ಲಾ ನಿರ್ದೇಶಕರುಗಳು ಒಟ್ಟಿಗೆ ದೀಪ ಬೆಳಗಿಸುವುದರ ಮೂಲಕ ನೆರವೇರಿಸಿದರು. ವೇದಿಕೆ ಮೇಲೆ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಲುವಿಸ್ ೦ ಇ ಹಾಗೂ ಆಡಳಿತ ಮಂಡಳಿಯ ನಿರ್ದೇಶಕರುಗಳು ಹಾಜರಿದ್ದರು.ಸಭೆಯಲ್ಲಿ 110 ಸದಸ್ಯರು ಹಾಜರಿದ್ದರು. ಸಹಕಾರಿಯು ಸುಮಾರು 11ಲಕ್ಷದಷ್ಟು ಲಾಭ ಗಳಿಸಿದೆ.



ದಿನಾಂಕ 20.08.2023ರಂದು ಶಿವಮೊಗ್ಗ ಜಿಲ್ಲಾ ಸಂಯೋಜಕರಾದ ಶ್ರೀ ಜಿ.ಹೆಚ್. ನಾಗರಾಜುರವರು ಶಿಕಾರಿಪುರ ಶ್ರೀ ಬಸವೇಶ್ವರ ಸೌಹಾರ್ದ ಸಹಕಾರಿಯ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ ಸದಸ್ಯರ ಹಕ್ಕು ಮತ್ತು ಕರ್ತವ್ಯಗಳ ಕುರಿತು ಮಾಹಿತಿ ನೀಡಿದರು.



ದಿನಾಂಕ: 02.07.2023ರಂದು ವಿಶೇಷ ಮತ್ತು ವಿಶಿಷ್ಟ ಸಂಸ್ಥೆಯಾದ ನವತೇಜ್ ಸೇವಾ ಸೌಹಾರ್ದ ಸಹಕಾರಿ ಸಂಘ ನಿ., ಲಿಂಗಸೂಗುರು ಈ ಸಹಕಾರಿಯು ಲಿಂಗಸೂಗೂರು ನಗರದಲ್ಲಿ ಪ್ರಾರಂಭಗೊಂಡಿರುತ್ತದೆ. ಇದರಿಂದ ಸದಸ್ಯರಿಗೆ ಕ್ರೆಡಿಟ್ ವ್ಯವಹಾರ ನೀಡುವುದರ ಜೊತೆಗೆ ಸಹಕಾ–ರಿಯ ವತಿಯಿಂದ ಸೇವೆಗಳನ್ನು ನೀಡಲು ಪೂರಕ ಸಂಸ್ಥೆಗಳನ್ನು ಪ್ರಾರಂಭಿಸಲಾಗಿದೆ. ಸಹಕಾರಿಯು ಪೂಕರ ಸಂಸ್ಥೆಯ ವತಿಯಿಂದ ನೀಡುವ ಸೇವೆಗಳು ಈ ಕೆಳಗಿನಂತಿದೆ.

1. ಸೌಹಾರ್ದ ಸಹಕಾರಿಗಳಿಗೆ ಪ್ರಿಂಟಿಂಗ್ ಸೇವೆ (ಎಲ್ಲ ತರಹದ ಅರ್ಜಿಗಳು)
2. ಸಿಬ್ಬಂದಿಗಳ ಪೂರೈಕಾ ಕೇಂದ್ರ
3. ಮಾರಾಟ ಮಳಿಗೆ ( ಈ ಮಳಿಗೆಯ ವತಿಯಿಂದ ಸೌಹಾರ್ದ ಸಹಕಾರಿಗಳಿಗೆ ಸ್ಟೇಷನರಿ, ಪುಸ್ತಕಗಳು, ಸಹಕಾರಿಯ ಶಾಲು, ಸಹಕಾರಿಯ ಧ್ವಜ ಸನ್ಮಾದ ಶಾಲುಗಳು, ಮುಮೊಂಟೊಗಳು, ಪಿತಾಮಹರ ಪೋಟೋಗಳು ಹಾಗೂ ಇತರೆ ಪೋಟೋಗಳು ಮಾರಾಟ ಮಾಡಲಾಗುವುದು)
4. ಟೂರ್ಸ್ & ಟ್ರಾವೇಲ್ ಏಜೇನ್ಸಿ
5. ಸೇವಾ ಕೇಂದ್ರ
6. ವೈಬ್ ಸೈಟ್ ಡಿಸೈನ್( ಸಹಕಾರಿಗಳಿಗೆ ವೈಬ್ ಸೈಟ್ ಡಿಸೈನ್ ಮಾಡಿ ಕೊಡಲಾಗುವುದು)

ಹೆಚ್ಚಿನ ಮಾಹಿತಿಗಾಗಿ www.navtejsevasahakari.com ಮತ್ತು 7676969587 ಈ ನಂಬರಗೆ ಸಂಪರ್ಕಿಸಿ ಮತ್ತು ವಾಟ್ಸಪ್ ನಲ್ಲಿ “ಊ” ಕಳುಹಿಸಿ ಮಾಹಿತಿ ಪಡೆಯಬಹುದಾಗಿದೆ.

## ರಾಜ್ಯದ ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆ



ದಿನಾಂಕ 13.08.2023ರಂದು ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ಸಂಘ ನಿ., ಚಾ.ನಗರ ಇದರ 8ನೇ ವರ್ಷದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಉದ್ಘಾಟನೆಯನ್ನು ವರ್ತಕರ ಸಂಘದ ಸಭಾಂಗಣದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಪದ್ಮಪ್ರಸಾದ್ ರವರು ನೆರವೇರಿಸಿದರು. ಈ ಸಂದರ್ಭದಲ್ಲಿ ವೇದಿಕೆಯ ಮೇಲೆ ಉಪಾಧ್ಯಕ್ಷರಾದ ಶ್ರೀ ವೆಂಕಟ ನಾಗಪ್ಪ ಶೆಟ್ಟಿ ರವರು ಮತ್ತು ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಬಿ ಜಿ ಸಂಕೀರ್ತನ್ ರವರು ಉಪಸ್ಥಿತರಿದ್ದರು. ಸಭೆಯಲ್ಲಿ ಎಸ್.ಎಸ್. ಎಲ್.ಸಿ ಹಾಗೂ ಪಿಯುಸಿ ಯಲ್ಲಿ ಅತಿಹೆಚ್ಚು ಅಂಕಗಳನ್ನು ಪಡೆದ ಸದಸ್ಯರ ಮಕ್ಕಳನ್ನು ನೆನಪಿನ ಕಾಣಿಕೆ & ನಗದು ಮೊತ್ತವನ್ನು ನೀಡಿ ಸನ್ಮಾನಿಸಲಾಯಿತು. ಮತ್ತು ಸಮಾಜದ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದವ–ರಿಗೂ ಸನ್ಮಾನಿಸಲಾಯಿತು. ಸಹಕಾರಿಯು 2022–23ನೇ ಸಾಲಿನಲ್ಲಿ ರೂ.33.87 ಲಕ್ಷಗಳ ನಿವ್ವಳ ಲಾಭ ಗಳಿಸಿದ್ದು ಸದಸ್ಯರಿಗೆ ಶೇ.20%ರಷ್ಟು ಡಿವಿಡೆಂಟ್ ಅನ್ನು ನೀಡಲು ಸಭೆಯಲ್ಲಿ ಅನುಮೋದನೆ ಪಡೆಯಲಾಯಿತು. ಸಹಕಾರಿ ಆಡಳಿತ ಮಂಡಳಿಯ ಎಲ್ಲಾ ನಿರ್ದೇಶಕರು ಹಾಜರಿದ್ದರು.



**ಚಿಕ್ಕಮಗಳೂರು** : ದಿನಾಂಕ 30.07.2023 ರಂದು ಸಮಾನ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಚಿಕ್ಕಮಗಳೂರು ಇದರ 10ನೇ ವಾರ್ಷಿಕ ಸಭೆಯ ಉದ್ಘಾಟನೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಕೆ.ಬಿ. ದೇವರಾಜ್ ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಶ್ರೀ. ಬಿ.ಪಿ ಕೃಷ್ಣಮೂರ್ತಿ, ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.



ದಿನಾಂಕ 13.08.2023 ರಂದು ವಾಗ್ದೇವಿ ಸೌಹಾರ್ದ ಸಹಕಾರಿಯ 22ನೇ ವಾರ್ಷಿಕ ಸಾಮಾನ್ಯ ಸಭೆಯ ಸಹಕಾರಿಯ ಅಧ್ಯಕ್ಷರಾದ ಶ್ರೀ ಹೆಚ್. ಎನ್ ನವೀನ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



ದಿನಾಂಕ 12.08.2023ರಂದು ಶಿವಮೊಗ್ಗ ಜಿಲ್ಲಾ ಸಂಯೋಜಕರಾದ ಶ್ರೀ ನಾಗಾಜು ಜಿ.ಹೆಚ್. ಇವರು ಮಡಿಲು ಮಹಿಳಾ ಸೌಹಾರ್ದ ಸಹಕಾರಿ ಸಂಘ ನಿ, ಶಿಕಾರಿಪುರ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿದರು.



ದಿನಾಂಕ 13.08.2023ರಂದು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ಇವರು ಸುದರ್ಶನ ಸೌಹಾರ್ದ ಸಹಕಾರಿ ಸಂಘ ನಿ, ಮತ್ತೂರು ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



ದಿನಾಂಕ 15–8–2023 ರಂದು ದಿ ಇಂಡಿಯನ್ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ ನಿಯಮಿತ, ಹರಿಹರ, ದಾವಣಗೆರೆ ಈ ಸಹಕಾರಿಯ ಸಾಮಾನ್ಯ ಸಭೆಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಂ ಆರ್ ಪ್ರಭುದೇವ್ ರವರು ಭಾಗವಹಿಸಿದರು. ಭಾಗವಹಿಸಿ ಸದಸ್ಯರ ಕರ್ತವ್ಯ & ಜವಾಬ್ದಾರಿ ಬಗ್ಗೆ ಮಾಹಿತಿ ನೀಡಿದರು. ಈ ಸಮಯದಲ್ಲಿ ಸಹಕಾರಿಯ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು, ಮುಕಾನಿ ಹಾಗೂ ಸನ್ನದ್ದು ಲೆಕ್ಕಪರಿಶೋಧಕರಾದ ಶ್ರೀ ಉಮೇಶ್ ಶೆಟ್ಟಿ ಯವರು ಭಾಗವಹಿಸಿದ್ದರು.



ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘದ ಉಪಾಧ್ಯಕ್ಷರಾದ ಶ್ರೀ ಗೋಪಾಲ್ ಎಸ್ ಜಿ ಇವರು ವಿಪ್ರ ಟ್ರಸ್ಟ್‌ನ ಆಡಳಿತ ಅಧಿಕಾರಿಯಾಗಿ ನೇಮಕಗೊಂಡಿದ್ದು ಇವರಿಗೆ ಸಹಕಾರಿ ವತಿಯಿಂದ ಗೌರವ ಪೂರ್ವಕವಾಗಿ ಅಭಿನಂದನೆ ಮಾಡಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ನಾರಾಯಣ ಮೂರ್ತಿ ಎಸ್ ಎ, ಸಹಕಾರಿಯ ನಿರ್ದೇಶಕರಾದ ಶ್ರೀ ಕುಲಕರ್ಣಿ ಸಿ.ಎಂ, ಶ್ರೀ ಗುರುರಾಜ್ ಎ.ಎಸ್ ಮತ್ತು ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಮಾಲತಿ ಎಂ.ಪಿ ಹಾಗೂ ಸಿಬ್ಬಂದಿ ವರ್ಗದವರೂ ಹಾಜರಿದ್ದರು.



**ಕಾರವಾರ :** ದಿನಾಂಕ 15 ಅಗಸ್ಟ 2023ರ ಸೊಮವಾರದಂದು 77ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಜೈ ದುರ್ಗಾಮಾತಾ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತ ಸದಾಶಿವಗಡ ಇದರ ಪ್ರಧಾನ ಕಛೇರಿಯಲ್ಲಿ ಧ್ವಜಾರೊಹಣವನ್ನು ಸಹಕಾರಿಯ ನಿರ್ದೇಶಕರಾದ ಶ್ರೀ. ಮತ್ತು ದತ್ತಾ ಕಲ್ಗುಟಕರ, ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ. ದಿಕ್ಷಾ ದತ್ತಾರಾಮ ಕಲ್ಗುಟಕರ ಮತ್ತು ಸಹಕಾರಿಯ ವ್ಯವಸ್ಥಾಪಕರಾದ ಶ್ರೀ. ಲಿಂಗರಾಜ ಮತ್ತು ಕಲ್ಗುಟಕರ ಇವರು ನೆರವೇರಿಸಿದರು. ಈ ಸಂಧರ್ಭದಲ್ಲಿ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರು, ಪ್ರಧಾನ ಕಛೇರಿಯ ಸಿಬ್ಬಂಧಿಗಳು ಮತ್ತು ಸಹಕಾರಿಯ ಸಿಬ್ಬಂಧಿಗಳು ಉಪಸ್ಥಿತರಿದ್ದರು. ನಂತರ ಸಹಕಾರಿಯ ಸಿಬ್ಬಂದಿಗಳು ಸಾಮೂಹಿಕವಾಗಿ ಕಾರ್ಯಕ್ರಮವನ್ನು ನೆರವೇರಿಸಿದರು.



ಶ್ರೀ ಪಂಚಶಕ್ತಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ಮೂಡುಬಿದಿರೆ ಇದರ 9ನೇ ವರ್ಷದ ವಾರ್ಷಿಕ ಮಹಾಸಭೆಯು ಸಹಕಾ–ರಿಯ ಅಧ್ಯಕ್ಷರಾದ ಶ್ರೀ ರಂಜಿತ್ ಪೂಜಾರಿ ಇವರ ಅಧ್ಯಕ್ಷತೆಯಲ್ಲಿ ತಾ. 13.08.2023 ರಂದು ನಡೆಯಿತು. ಸಹಕಾರಿಯು ವರದಿ ವರ್ಷದಲ್ಲಿ ರೂ 1416932 ನಿವ್ವಳ ಲಾಭ ಹೊಂದಿದ್ದು 12% ಡಿವಿಡೆಂಡ್‌ನ್ನು ಘೋಷಿಸಲಾಯಿತು. ಸಭೆಯಲ್ಲಿ 9 ಮಂದಿ ಉತ್ತಮ ಗ್ರಾಹಕರನ್ನು ಗುರುತಿಸಿ ಸನ್ಮಾನಿಸಲಾಯ್ತು. ಸುಮಾರು 12 ಅಶಕ್ತ ಕುಟುಂಬಗಳಿಗೆ ಧನ ಸಹಾಯವನ್ನು ಸಭೆಯಲ್ಲಿ ವಿತರಿಸಲಾಯಿತು. ವರದಿ ವರ್ಷದಲ್ಲಿ ಅತೀ ಹೆಚ್ಚು ಪಿಗ್ಮಿ ಸಂಗ್ರಹಣೆ ಮಾಡಿದ ಶ್ರೀ. ದಿನೇಶ ಪೂಜಾರಿ ಯವರನ್ನು ಸನ್ಮಾನಿಸಲಾಯಿತು.

ದಿನಾಂಕ 05.09.2023ರಂದು ಶಿಕ್ಷಕರ ದಿನಾಚರಣೆ ಪ್ರಯುಕ್ತ ರಾಜ್ಯ ಸರ್ಕಾರದ ವತಿಯಿಂದ ಪ್ರಧಾನ ಮಾಡುವ ರಾಜ್ಯ ಮಟ್ಟದ ಉತ್ತಮ ಶಿಕ್ಷಕರ ಪ್ರಶಸ್ತಿಗೆ ನಾಗಮಂಗಲ ತಾಲ್ಲೂಕು ಶಿಕ್ಷಣ ಇಲಾಖೆ ಪದವಿ ಶಿಕ್ಷಕರ ಸೌಹಾರ್ದ ಸಹಕಾರಿ ನಿ., ನಾಗಮಂಗಲ ಇದರ ಆಡಳಿತ ಮಂಡಳಿ ನಿರ್ದೇಶಕರಾದ ಶ್ರೀ. ಪ್ರಶಾಂತ. ಜಿ ರವರು ಮತ್ತು ಶ್ರೀ ಮಲೆಮಹದೇಶ್ವರ ವೀರಶೈವ ಲಿಂಗಾಯತ ಸೌಹಾರ್ದ ಸಹಕಾರಿ ಸಂಘ ನಿ., ಹನೂರು ಇದರ ಮುಖ್ಯ ಪ್ರವರ್ತಕರಾದ ಶ್ರೀ ವಿ. ವೀರಪ್ಪ ರವರು ಆಯ್ಕೆಯಾಗಿರುತ್ತಾರೆ.



ದಿನಾಂಕ 01–09–2023 ರ ಶುಕ್ರವಾರದಂದು ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಚಿಕ್ಕಬಳ್ಳಾಪುರ ಇದರ ಎರಡನೇ ವರ್ಷದ ಸರ್ವಸದಸ್ಯರ ಸಾಮಾನ್ಯ ಸಭೆಯು ಗೌರಿಬಿದನೂರಿನ ಸುಮಂಗಲಿ ಸಭಾಂಗಣದಲ್ಲಿ ಜರುಗಿತು. ಈ ಸಭೆಯ ವೇದಿಕೆಯಲ್ಲಿ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲಾ ಸೌಹಾರ್ದ ಸಹಕಾ–ರಿಗಳ ಒಕ್ಕೂಟ ಅಧ್ಯಕ್ಷರಾದ ಶ್ರೀ ಅಮರ್ .ಆರ್ ರವರು, ಉಪಾಧ್ಯಕ್ಷರಾದ ಶ್ರೀ ಹರ್ಷಜಿತ್ .ಎಸ್ ರವರು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ರವರು ಉಪಸ್ಥಿತರಿದ್ದರು. ಸಭೆಗೆ ಅತಿಥಿಗಳಾಗಿ ತುಮಕೂರು ಜಿಲ್ಲಾ ನಿರ್ದೇಶಕರಾದ ಸಿ.ಪಿ.ವಿಜಯ್ ರವರು ಆಗಮಿಸಿದ್ದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ನಿಕಟಪೂರ್ವ ನಿರ್ದೇಶಕರಾದ ಶ್ರೀ ನಾಗೇಂದ್ರ ಗುಪ್ತ ರವರು, ಜಿಲ್ಲಾ ಒಕ್ಕೂಟದ ನಿರ್ದೇಶಕರಾದ ಶ್ರೀಮತಿ ಡಾ. ಗಂಗಲಕ್ಷ್ಮಮ್ಮ ರವರು ಹಾಗೂ ಜಿಲ್ಲಾ ಒಕ್ಕೂಟದ ನಿರ್ದೇಶಕರು, ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ. ಎಸ್ ರವರು ಉಪಸ್ಥಿತರಿದ್ದರು. ಈ ಸಭೆಯಲ್ಲಿ 32 ಜಿಲ್ಲಾ ಒಕ್ಕೂಟದ ಸದಸ್ಯ ಸಹಕಾರಿಗಳು ಒಳಗೊಂಡಂತೆ 43 ಪ್ರತಿನಿಧಿಗಳು ಭಾಗವಹಿಸಿದ್ದರು.

---



**ಸಾಲಿಗ್ರಾಮ:** ಕೊಪ್ಪಳ ಜಿಲ್ಲೆ ಸೌಹಾರ್ದ ಸಹಕಾರಿ ಸಂಘಗಳ ಅಧ್ಯಕ್ಷರು, ಉಪಾಧ್ಯಕ್ಷರುಗಳು ಮತ್ತು ನಿರ್ದೇಶಕರ ತಂಡ ಇತ್ತೀಚೆಗೆ ಶ್ರೀ ಗುರು ನರಸಿಂಹ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಸಹಕಾರಿಗೆ ಭೇಟಿ ನೀಡಿರುತ್ತಾರೆ. ಈ ಸಂದರ್ಭದಲ್ಲಿ ಸಂಘದ ಮುಖ್ಯ ಕಾರ್ಯನಿರ್ವಾಹಕರು ಶ್ರೀಧರ ಸೋಮಯಾಜಿಯವರು ಸಂಘ ಬೆಳೆದು ಬಂದ ದಾರಿ, ಕಾರ್ಯಚಟುವಟಿಕೆಗಳು, ಕಡತಗಳ ನಿರ್ವಹಣೆ ಬಗ್ಗೆ ಎಳೆ ಎಳೆಯಾಗಿ ತಿಳಿಸಿದರು. ಆಗಮಿಸಿದ ಅತಿಥಿಗಳು ಸಂಘದ ಪ್ರಗತಿ ಕಾರ್ಯ ಚಟುವಟಿಕೆ ಬಗ್ಗೆ ಸಂತಸ ವ್ಯಕ್ತಪಡಿಸಿದರು.

---



ಸರಸ್ವತಿ ಸೌಹಾರ್ದ ಸಹಕಾರಿ ಸಂಘ ನಿಯಮಿತ, ತೀರ್ಥಹಳ್ಳಿ (ಎಸ್–ಎಂಜಿ35) ಯ "ಹದಿನಾಲ್ಕನೇ ಸರ್ವಸದಸ್ಯರ ಮಹಾಸಭೆ" ದಿನಾಂಕ: 26–08–2023ರ ಶನಿವಾರ ತೀರ್ಥಹಳ್ಳಿಯ ವಿದ್ಯಾಧಿರಾಜ ಸಭಾಗೃಹದಲ್ಲಿ ನಡೆಯಿತು. ಬೆಳಿಗ್ಗೆ 10.30ಗಂಟೆಗೆ ಸಹಕಾರಿಯ ವಾರ್ಷಿಕ ಸರ್ವಸದಸ್ಯರ ಮಹಾಸಭೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಬಾಳೇಬೈಲು ರಾಘವೇಂದ್ರರವರು, ಆಡಳಿತ ಮಂಡಳಿ ಸದಸ್ಯರು ಮತ್ತು ಸಹಕಾರಿಯ ಹಿರಿಯ ಸದಸ್ಯರು ದೀಪ ಬೆಳಗುವುದರ ಮೂಲಕ ಚಾಲನೆ ನೀಡಿದರು. ಸಭೆಯ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಬಾಳೇಬೈಲು ರಾಘವೇಂದ್ರ ರವರು ವಹಿಸಿದ್ದರು. ಉಪಾಧ್ಯಕ್ಷರಾದ ಶ್ರೀ ಸಂದೇಶ್ ಜವಳಿ ಸರ್ವರನ್ನೂ ಸ್ವಾಗತಿಸಿದರು. 2022–23ನೇ ಸಾಲಿನಲ್ಲಿ ಸಹಕಾರಿಯು ರೂ. 29,15,569/– ಲಾಭ ಗಳಿಸಿದ್ದು, ಶೇ15ರಂತೆ ಸದಸ್ಯರಿಗೆ ಲಾಭಾಂಶ ಘೋಷಿಸಲಾಯಿತು. ಮಹಾಸಭೆಯಲ್ಲಿ ಶಿವಮೊಗ್ಗ ಲೋಕಸಭಾ ಕ್ಷೇತ್ರದ ಸದಸ್ಯರಾದ ಸನ್ಮಾನ್ಯ ಶ್ರೀ ಬಿ ವೈ ರಾಘವೇಂದ್ರರವರನ್ನು ಸಹಕಾರಿಯ ಪರವಾಗಿ ಸರಸ್ವತಿ ಸಮ್ಮಾನ್ ಪ್ರಶಸ್ತಿ ನೀಡಿ ಅಭಿನಂದಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಮಾನ್ಯ ಸಂಸದರು, ಸರಸ್ವತಿ ಸೌಹಾರ್ದ ಸಹಕಾರಿಯು ತೀರ್ಥಹಳ್ಳಿಯಲ್ಲಿಯೇ ಅತ್ಯಂತ ಶಿಸ್ತುಬದ್ಧ ಆರ್ಥಿಕ ಸಂಸ್ಥೆಯಾಗಿ ಹೊರಹೊಮ್ಮಿದ್ದು, ಪ್ರತೀ ವರ್ಷ ಸಹಕಾರಿಯು ಲಾಭ ಗಳಿಸುತ್ತಿರುವುದು ಪ್ರಶಂಸನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದ ಕಾರ್ಯವೈಖರಿಯನ್ನು ಶ್ಲಾಘಿಸಿದರು. ಕರ್ನಾಟಕ ರಾಜ್ಯ ಘನ ಸರ್ಕಾರದ ಮಾಜಿ ಗೃಹ ಸಚಿವರೂ, ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕರೂ ಆದ ಸನ್ಮಾನ್ಯ ಶ್ರೀ ಆರಗ ಜ್ಞಾನೇಂದ್ರರವರು ಮಹಾಸಭೆಯಲ್ಲಿ ಉಪಸ್ಥಿತರಿದ್ದು, ಸಹಕಾರಿಯ ಏಳಿಗೆಗೆ ಶುಭ ಹಾರೈಸಿದರು.

ಮಹಾಸಭೆಯಲ್ಲಿ ತೀರ್ಥಹಳ್ಳಿಯ ಸಾಮಾಜಿಕ ಹಾಗೂ ಸಹಕಾರಿ ಕ್ಷೇತ್ರದ ಸಾಧಕರಾದ ಸಹಕಾರಿ ರತ್ನ ಪ್ರಶಸ್ತಿ ಪುರಸ್ಕೃತರಾದ ಶ್ರೀಯುತ ನಾಗರಾಜ ಶೆಟ್ಟಿ, ಶ್ರೀ ಮಹೇಶ್ ಹುಲ್ಕುಳಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಪ್ರಸನ್ನಕುಮಾರ್ ಮತ್ತು NES ಶಿವಮೊಗ್ಗ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ನಾರಾಯಣರಾವ್ ಜಿ ಎಸ್ ಇವರನ್ನು ಸರಸ್ವತಿ ಸಮ್ಮಾನ್ ಪ್ರಶಸ್ತಿ ನೀಡಿ ಗೌರವಿಸಲಾಯಿತು ಹಾಗೂ ಸಹಕಾರಿಯ ಸರ್ವಸೇವೆಯನ್ನೂ ಬಳಸಿಕೊಂಡು ಸಹಕಾರಿಯ ಪ್ರಗತಿಯಲ್ಲಿ ತಮ್ಮ ಕೊಡುಗೆಯನ್ನು ನೀಡಿದ ಐವರು ಗ್ರಾಹಕರಿಗೆ ಸರಸ್ವತಿ ಉತ್ತಮ ಗ್ರಾಹಕ ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು. ಸಹಕಾರಿಯ ಸದಸ್ಯರ ಮಕ್ಕಳಲ್ಲಿ ಅತ್ಯುತ್ತಮ ಶೈಕ್ಷಣಿಕ ಸಾಧನೆಗೈದ ವಿದ್ಯಾರ್ಥಿಗಳಿಗೆ ಸರಸ್ವತಿ ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸಲಾಯಿತು. ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಅಚ್ಚುತ್‌ನಾಯಕ್ ಬಿ.ಸ್.ರವರು ಕಾರ್ಯಕ್ರಮ ನಿರೂಪಿಸಿದರು.

## ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆ

**ಸನ್ ರೈಸ್ ಸೌಹಾರ್ದ ಸಹಕಾರಿ ಸಂಘ ನಿ., ಕ್ಯಾತಸಂದ್ರ, ತುಮಕೂರು**




**ಶ್ರೀ ಸಿ.ಪಿ ವಿಜಯ್**
ಅಧ್ಯಕ್ಷರು



**ಶ್ರೀ ಅಶೋಕ್ ಕುಮಾರ್ ವೈಷ್ಣವ್**
ಉಪಾಧ್ಯಕ್ಷರು

**ಉದಯ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ ಬೆಂಗಳೂರು.**



**ಶ್ರೀ ಬಿ.ಎಸ್ ಗುಂಡುರಾವ್**
ಅಧ್ಯಕ್ಷರು



**ಶ್ರೀ ಚಂದ್ರಶೇಖರ ಎನ್**
ಉಪಾಧ್ಯಕ್ಷರು

**ಶ್ರೀ ವೇಮನ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ನಿಯಮಿತ ಬೆಂಗಳೂರು**



**ಶ್ರೀ ಜಿ. ಕೃಷ್ಣಾರೆಡ್ಡಿ**
ಅಧ್ಯಕ್ಷರು



**ಶ್ರೀ ಮುನಿನಾಗಪ್ಪ**
ಉಪಾಧ್ಯಕ್ಷರು

**ಶ್ರೀ ಸಿದ್ಧಗಂಗಾ ವಿದ್ಯಾ ಸಂಸ್ಥೆ ನೌಕರರ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ತುಮಕೂರು**




**ಶ್ರೀ ಬಿ. ಗಂಗಾಧರಯ್ಯ**
ಅಧ್ಯಕ್ಷರು



**ಶ್ರೀ ಬಿ. ಅದ್ವಿಶ್**
ಉಪಾಧ್ಯಕ್ಷರು

**ಜನಹಿತ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್ ಉಡುಪಿ**



**ಶ್ರೀ ಗೋಪಾಲ್ ಯು**
ಅಧ್ಯಕ್ಷರು



**ಶ್ರೀ ದಿನೇಶ್ ಶೆಟ್ಟಿ**
ಉಪಾಧ್ಯಕ್ಷರು



ಶ್ರೀ ಸಿದ್ಧಮಲ್ಲೇಶ್ವರ ಸೌಹಾರ್ದ ಸಹಕಾರಿ ನಿ., ಇದರ ಸರ್ವಸದಸ್ಯರ ವಾರ್ಷಿಕ ಮಹಾ ಸಭೆ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವುದರ ಮೂಲಕ ಶ್ರೀ ಶ್ರೀ ಚನ್ನಬಸವ ಸ್ವಾಮಿಗಳು ಮತ್ತು ಚಾಮುಲ್ ಅಧ್ಯಕ್ಷರಾದ ನಾಗೇಂದ್ರ ರವರು, ಉದ್ಘಾಟನೆಯನ್ನು ನೆರವೇರಿಸಿದರು.



ಬೆಂಗಳೂರಿನ ಸುರಭಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ ದಿನಾಂಕ 20.08.2023 ವಾರ್ಷಿಕ ಸಾಮಾನ್ಯ ಸಭೆ ನಡೆಯಿತು ಸಭೆಯಲ್ಲಿ ಗೌರವಾನ್ವಿತ ಅತಿಥಿಗಳಾಗಿ ವ್ಯವಸ್ಥಾಪಕ ನಿರ್ದೇಶಕ ಶರಣಗೌಡ ಜಿ. ಪಾಟೀಲ್ ಮತ್ತು ಬೆಂಗಳೂರು ಸಂಯೋಜಕರಾದ ವಿಕ್ರಾಂತ ಪಾಟೀಲ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿದರು.

**ಸಹಕಾರಿಯ ಆರ್ಥಿಕ ಯಶಸ್ಸು:**

2022–23 ರ ಆರ್ಥಿಕ ವರ್ಷದಲ್ಲಿ, ಸುರಭಿ ಸಹಕಾರಿಯು 4.08 ಕೋಟಿಗಳಷ್ಟು ಲಾಭವನ್ನು ಗಳಿಸಿದೆ, ಆಡಳಿತ ಮಂಡಳಿಯ ಸದಸ್ಯರಿಗೆ ಅಭಿನಂದನೆ ತಿಳಿಸಿ ಹಾಗೂ ಸದರಿ ಬೆಳವಣಿಗೆಯನ್ನು ಮುಂದುವರೆಸಿ ಸಹಕಾರಿಯ ಏಳಿಗೆಗಾಗಿ ಆಡಳಿತ ಮಂಡಳಿಯವರಿಗೆ ಸಲಹೆ ನೀಡಿ ಹಾಗೂ ಸದಸ್ಯರ ಭಾಗವಹಿಸುವಿಕೆಯನ್ನು ಹಾಗೂ ಕರ್ತವ್ಯಗಳನ್ನು ವ್ಯವಸ್ಥಾಪಕ ನಿರ್ದೇಶಕರು ತಮ್ಮ ಭಾಷಣದಲ್ಲಿ ತಿಳಿಸಿದರು.

# “ಸೌಹಾರ್ದ ಸಹಕಾರಿ ಕಾಯ್ದೆ ಆಶಯ ಮತ್ತು ಚಟುವಟಿಕೆಗಳ ಬಗ್ಗೆ ವಿಸ್ತೃತ ಅರಿವು ಹಾಗೂ ಪ್ರಚಾರ ಅಗತ್ಯ” (ಭಾಗ - 2)



– ಶ್ರೀ ಸಿ.ಎನ್ ಪರಶಿವಮೂರ್ತಿ, ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರು, ಮೈಸೂರು.

ಅನೂಪ್ ದೇಶಪಾಂಡೆಯವರು ಮತ್ತೊಂದು ಪ್ರಮುಖ ವಿಷಯ ಪ್ರಸ್ತಾಪಿಸಿದ್ದಾರೆ. ಅದೇಂದರೆ, ಸಂಯುಕ್ತ ಸಹಕಾರಿಯು ವ್ಯವಸ್ಥಾಪಕ ನಿರ್ದೇಶಕರಿಗೆ, ವಿಚಾರಣೆ ಮಾಡುವ ಅಧಿಕಾರ ನೀಡಿದ ಬಗ್ಗೆ ಅವರ ಅನಿಸಿಕೆಯಲ್ಲಿ ಪ್ರಮುಖವಾಗಿ ಅರ್ಥೈಸಬೇಕಾದ್ದು ಕಲಂ.35 ರಡಿ ನಿಬಂಧಕರಿಗೆ ಶಾಸನಾತ್ಮಕ ವಿಚಾರಣೆ ಮಾಡುವ ಅಧಿಕಾರ ನೀಡಲಾಗಿದೆ ಮತ್ತು ಕಲಂ.53(7)(ಯು) ನಲ್ಲಿ ಸದಸ್ಯ ಸಹಕಾರಿಗಳ ಪರಿವೀಕ್ಷಣೆ ಮಾಡಲು ಸಂಯುಕ್ತ ಸಹಕಾರಿ ಮಂಡಳಿಗೆ ಅಧಿಕಾರ ನೀಡಲಾಗಿದೆ ಮತ್ತು ಈ ಮಧ್ಯ ವ್ಯವಸ್ಥಾಪಕ ನಿರ್ದೇಶಕರಿಗೆ ಪ್ರತ್ಯೇಕವಾಗಿ ಅಧಿಕಾರ ನೀಡಿದರೆ ನಿಬಂಧಕರು ಮತ್ತು ಸಂಯುಕ್ತ ಸಹಕಾರಿ ಮಂಡಳಿ ಶಕ್ತಿಯ ಬಗ್ಗೆ ಅನುಮಾನಿಸಿದಂತಾಗುತ್ತಿದೆಯೇ? ಅನೂಪ್ ಅವರು ಈ ಬಗ್ಗೆ ಈ ರೀತಿ ಚಿಂತನೆ ಮಾಡಿದ್ದರೂ ಇಲ್ಲವೋ ತಿಳಿಯದು. ಆದರೆ ವ್ಯವಸ್ಥಾಪಕ ನಿರ್ದೇಶಕರು, ಕಲಂ.53(7) ರಲ್ಲಿ ನೀಡಲಾದ ಅಧಿಕಾರವನ್ನು ಮಂಡಳಿ ತೀರ್ಮಾನದ ನಂತರ ಜಾರಿ ಮಾಡಬೇಕು. ಚುನಾಯಿತ ಮಂಡಳಿ ಸಂಘ ಪರಿವಾರ/ರಾಜಕೀಯ ಒತ್ತಡಕ್ಕೆ ಮಣಿದು ಅವಶ್ಯಕವಿದ್ದಾಗ ತೀರ್ಮಾನ ತೆಗೆದುಕೊಳ್ಳದೇ ಇರಬಹುದು ಅಥವಾ ನಿಬಂಧಕರಿಗೆ ವರದಿಯನ್ನು ಸಂಯುಕ್ತ ಸಹಕಾರಿಯ ಕ್ಷೇತ್ರ ಸಿಬ್ಬಂದಿ ವರದಿ ಆಧಾರದ ಮೇಲೆ ಮನವಿ ಮಾಡಿ, ವಿಚಾರಣೆ ಮಾಡಲು ವಿನಂತಿ ಬಂದ ನಂತರ ನಿಬಂಧಕರು ಆದೇಶಿಸಬಹುದು ಅಥವ ಆದೇಶ ಮಾಡದೇ ಇರಬಹುದು. ತುರ್ತು ಸಂದರ್ಭದಲ್ಲಿ ಸದಸ್ಯ ಸಹಕಾರಿಯಲ್ಲಿ ನಡೆದಿರಬಹುದಾದ ನ್ಯೂನತೆ ಮೇಲೆ ತುರ್ತು ತೀರ್ಮಾನ ತೆಗೆದುಕೊಳ್ಳದಿದ್ದರೆ, ಆ ಸಹಕಾರಿಗೆ ಆರ್ಥಿಕ/ಸಮಾಜಿಕ ನಷ್ಟ ಸಂಭವಿಸುವ ಅವಕಾಶ ಇರುತ್ತದೆ ಎಂಬುದನ್ನು ಮನಗಂಡು ವಿಚಾರಣೆ ಮಾಡಲು ನೀಡಿದ ಈ ಅವಕಾಶ ಒಂದು ಹೆಚ್ಚುವರಿ ಅವಕಾಶ ಎಂದು ತಿಳಿಯಬೇಕು. ಇದಕ್ಕೆ ಅನೂಪ್ ಅವರು ವ್ಯವಸ್ಥಾಪಕ ನಿರ್ದೇಶಕನಿಗೆ ಈ ಅಧಿಕಾರ ನೀಡಿದರೆ, ಅದನ್ನು ಮನಸೋಇಚ್ಛೆ ಚಲಾಯಿಸಬಹುದೆಂದೋ ಅಥವಾ ಸಂಯುಕ್ತ ಸಹಕಾರಿ, ಈ ಅವಕಾಶವನ್ನು ಆಧರಿಸಿ ವ್ಯವಸ್ಥಾಪಕ ನಿರ್ದೇಶಕರ ಮೇಲೆ ಒತ್ತಡ ತಂದು ಅವಶ್ಯಕತೆ ಇಲ್ಲದೇ ಇದ್ದರೂ, ವಿಚಾರಣೆಗೆ ಆದೇಶಿಸುವಂತೆ ಒತ್ತಾಯಿಸಬಹುದೆಂದೋ? ಅಥವಾ ಸಂಯುಕ್ತ ಸಹಕಾರಿ, ತನ್ನ ನಿಷ್ಪಕ್ಷಯತೆಯನ್ನು ಮುಚ್ಚು ಹಾಕಲು, ವ್ಯವಸ್ಥಾಪಕ ನಿರ್ದೇಶಕರು ಬೇಕೆಂತಲೇ ವಿಚಾರಣಾ ಅವಕಾಶ ಉಪಯೋಗಿಸಿಲ್ಲವೆಂದು, ಅವರ ಮೇಲೆ ಗೂಬೆಕೂರಿಸುವ ಪ್ರಯತ್ನ ಮಾಡುತ್ತಾರೆಂದೋ ತಿಳಿಯದು?

ಆದರೆ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಒಬ್ಬ ವೃತ್ತಿಪರ ವ್ಯಕ್ತಿ ಮತ್ತು ಅವನಿಗೆ ಶಾಸನಾತ್ಮಕವಾಗಿ ಸಂಯುಕ್ತ ಸಹಕಾರಿ, ಮತ್ತು ಅದರ ಸಿಬ್ಬಂದಿ ಮತ್ತು ಸದಸ್ಯ ಸಹಕಾರಿಗಳ ಮೇಲೆ ಸ್ನೇಹಿತ, ತತ್ವಜ್ಞಾನಿ ಮತ್ತು ಮಾರ್ಗದರ್ಶಕ ಎಂಬ ಜವಾಬ್ದಾರಿ ಇದೆ. ಇರಬೇಕು, ಏಕೆಂದರೆ ಸೌಹಾರ್ದ ಕಾಯಿದೆಯಲ್ಲಿ ನಿಬಂಧಕರ ಸ್ಥಾನವನ್ನು ಪಡೆದ, ಸಂಯುಕ್ತ ಸಹಕಾರಿ ಮಂಡಳಿ ತನ್ನ ತೀರ್ಮಾನ ತೆಗೆದುಕೊಳ್ಳಲು ಮತ್ತು ಅವುಗಳನ್ನು ಜಾರಿ ಮಾಡಲು, ಸಂಯುಕ್ತ ಸಹಕಾರಿಯ ಮುಖ್ಯಕಾರ್ಯನಿರ್ವಾಹಕ ಅಂದರೆ ವ್ಯವಸ್ಥಾಪಕ ನಿರ್ದೇಶಕನ ಮುಖಾಂತರವೇ ಮಾಡಬೇಕಾಗದ್ದು, ಅವರು ಮಂಡಳಿ ತೀರ್ಮಾನ ಜಾರಿ ಮಾಡುವುದರ ಜೊತೆಗೆ, ಅದರ ಅವಶ್ಯಕತೆಯನ್ನು ಮಂಡಳಿ ಗಮನಕ್ಕೆ ತಂದು ಮಂಡಳಿಗೆ ಮನದಟ್ಟು ಮಾಡಿ ಪರಿವೀಕ್ಷಣೆ ಮಾಡಿದ ನಂತರ ಒಪ್ಪಿಗೆ ಪಡೆಯಬೇಕು. ಇದರಲ್ಲಿ ಮಂಡಳಿಯ ಎಲ್ಲಾ ಸದಸ್ಯರು ಸಹಮತ ವ್ಯಕ್ತ ಪಡಿಸದಿದ್ದರೆ, ಅಂತಹ ಸದಸ್ಯ ಸಹಕಾರಿ ಮೇಲೆ ತುರ್ತು ಕ್ರಮ ಜರುಗಿಸಲು ಸಾಧ್ಯವಾಗದು ಎಂದು ಮನಗಂಡಾಗಿ, ತನಗೆ ನೀಡಿದ ವಿಚಾರಣಾ ಅಧಿಕಾರ ಚಲಾಯಿಸಬಹುದೆಂಬ ಭಾವನೆಯಿಂದ ಈ ಅಧಿಕಾರವನ್ನು ಸರ್ಕಾರ ನೀಡಿರಬೇಕು.

ಆದರೆ ಈ ಅಧಿಕಾರ ನೀಡಿದಾಗ, ವ್ಯವಸ್ಥಾಪಕ ನಿರ್ದೇಶಕನ ಹಕ್ಕು, ಕರ್ತವ್ಯ ಮತ್ತು ಜವಾಬ್ದಾರಿಗಳು ಹೆಚ್ಚು ಹೊರೆಯನ್ನು ನೀಡುತ್ತಿದೆ. ಅದನ್ನು ನಿಭಾಯಿಸಲು ಸ್ವಇಚ್ಛಾ ಶಕ್ತಿ ಪ್ರದರ್ಶಿಸಬೇಕು ಮತ್ತು ಯಾವುದೇ ಕಾರಣದಿಂದ ಸಂಯುಕ್ತ ಸಹಕಾರಿ ಮಂಡಳಿ ಒತ್ತಡಕ್ಕೆ ಸಿಲುಕದೇ, ತೀರ್ಮಾನತೆಗೆದುಕೊಳ್ಳಲು ನೀಡಿದ ಒಂದು ಅವಕಾಶ ಎಂದು ತಿಳಿದು ವ್ಯಕ್ತಿಪರ ನಿರ್ಧಾರ ತೆಗೆದುಕೊಳ್ಳುವ ಜವಾಬ್ದಾರಿ ವ್ಯವಸ್ಥಾಪಕ ನಿರ್ದೇಶಕನ ಮೇಲಿದೆ. ಆದ್ದರಿಂದ ಅನೂಪ್‌ದೇಶ್‌ಪಾಂಡೆ ಅವರು ಈ ಅಧಿಕಾರ ನೀಡಿದ್ದು ತಪ್ಪು ಎಂಬ ಭಾವನೆ ಸೂಕ್ತವಾದ ಅಭಿಪ್ರಾಯವಲ್ಲ. ಇದರ ಜೊತೆಗೆ 1959ರ ಕಾಯಿದೆಯಲ್ಲಿ ಶಾಸನಾತ್ಮಕ ಅಧಿಕಾರ ಚಲಾಯಿಸಲು ನಿಬಂಧಕರಿಗೆ ಮಾತ್ರ ಅಧಿಕಾರವಿದೆ. ಸರ್ಕಾರ, ಆ ಅಧಿಕಾರವನ್ನು ಸಹಕಾರ ಇಲಾಖಾಧಿಕಾರಿಗಳಿಗೆ ವರ್ಗಾಯಿಸುವ ಅವಕಾಶವನ್ನು ಕಾಯಿದೆ ಕಲಂ.2ಎ(2) ರಲ್ಲಿ ಇಲಾಖಾಧಿಕಾರಿಗಳಿಗೆ ಹಸ್ತಾಂತರಿಸಲು ಅವಕಾಶ ಕಲ್ಪಿಸಿದೆ. ಅದರಂತೆ ಸಹಕಾರ ಇಲಾಖಾಧಿಕಾರಿಗಳ ವಿವಿಧ ಶ್ರೇಣಿಯ ಅಧಿಕಾರಿಗಳಿಗೆ ನಿಬಂಧಕರ ಶಾಸನಾತ್ಮಕ ಅಧಿಕಾರವನ್ನು ವರ್ಗಾಯಿಸಿ ಆದೇಶ ಮಾಡಲು ಸರ್ಕಾರಕ್ಕೆ ಅಧಿಕಾರಿ ಇರುವುದನ್ನು ಉಪಯೋಗಿಸಿ, ಆದೇಶ ಹೊರಡಿಸಿದೆ. ಅಂದರೆ ಸಹಕಾರಿ ಸಂಘಗಳ ಕಾರ್ಯವ್ಯಾಪ್ತಿ ಗನುಗುಣವಾಗಿ ನಿಬಂಧಕರ ಅಧಿಕಾರವನ್ನು ಅಪರ ನಿಬಂಧಕರು, ಸಂಯುಕ್ತ ನಿಬಂಧಕರು, ಉಪನಿಬಂಧಕರು ಹಾಗೂ ಸಹಾಯಕ ನಿಬಂಧಕರಿಗೆ ಹಂಚಿಕೆ ಮಾಡಿದೆ. ಆ ರೀತಿ ಸೌಹಾರ್ದ ಕಾಯಿದೆಯಲ್ಲಿ ಆದೇಶ ಮಾಡುವ ಅಧಿಕಾರ ಇಲ್ಲ. ಏಕೆಂದರೆ ಸಂಯುಕ್ತ ಸಹಕಾರಿ ನೌಕರರು ಸರ್ಕಾರದ ನೌಕರರಲ್ಲಿ ಮತ್ತು ಅವರನ್ನು ಶಿಸ್ತು ಕ್ರಮಕ್ಕೊಳ್ಳ ಪಡಿಸಲು ಸರ್ಕಾರಕ್ಕೆ ಅಧಿಕಾರ ಇಲ್ಲದೇ ಇರುವುದರಿಂದ, ಅಂತಹ ಪ್ರಯೋಗವನ್ನು ಸೌಹಾರ್ದ ಕಾಯಿದೆಯಲ್ಲಿ ಮಾಡಿಲ್ಲವೆಂದು ತಿಳಿಯಬೇಕು.

ವ್ಯವಸ್ಥಾಪಕ ನಿರ್ದೇಶಕನ ಹುದ್ದೆ ಕಾಯಿದೆಯಲ್ಲಿ ಕಲಂ.61(2) ರಲ್ಲಿ ಸೃಷ್ಟಿಯಾಗಿಲ್ಲ, ಆ ವ್ಯಕ್ತಿಗೆ ಶಾಸನಾತ್ಮಕ ಅಧಿಕಾರ ನೀಡಿದರೆ ಕಾಯಿದೆ ಜಾರಿಗೆ ಪೂರಕವಾಗಿ ಕೆಲಸ ನಿರ್ವಹಿಸಲು ಅನುಕೂಲ ಕಲ್ಪಿಸಿದೆ. ಇದನ್ನು ಅನೂಪ್ ಅವರು ಮನಗಾಣಬೇಕು.

**ಸೌಹಾರ್ದ ಕಾಯಿದೆ ಮತ್ತು ಸಂಘ ಪರಿವಾರ :**

ಸಂಘ ಪರಿವಾರ ಮತ್ತು ಸೌಹಾರ್ದ ಕಾಯಿದೆ ಮತ್ತು ಸಂಯುಕ್ತ ಸಹಕಾರಿ ಬೇರ್ಪಡಿಸುವುದು ಕಷ್ಟವಾಗಬಹುದು. ಏಕೆಂದರೆ, ಸೌಹಾರ್ದ ಕಾಯಿದೆ ರಚನೆ ನಂತರ ಪ್ರಾರಂಭಿಕ ಅನುಕೂಲ ಪಡೆದು, ಪ್ರಾರಂಭದ ಸಹಕಾರಿಗಳು ಸಂಘ ಪರಿವಾರ ಪ್ರೇರಿತ. ಪ್ರಥಮ ಸಂಯುಕ್ತ ಸಹಕಾರಿ ಮಂಡಳಿ ರಚನೆಯಿಂದ ಈಗಿನ ಮಂಡಳಿ ರಚನೆಯಲ್ಲಿ ಅದರ ಪ್ರಭಾವ ಕಾಣಬಹುದು. ಕೆಲವು ಪ್ರಸಂಗಗಳಲ್ಲಿ ಕ್ರಮ ಜರುಗಿಸಬೇಕಿದ್ದರೂ ಕ್ರಮ ಜರುಗಿಸದೆ ಇರುವುದು. ಉದಾಹರಣೆಗೆ ಸಹಕಾರಿ ಸಕ್ಕರೆ ಕಾರ್ಖಾನೆಗಳು ಸೌಹಾರ್ದ ಸಹಕಾರಿ ಸದಸ್ಯರ ಠೇವಣಿಯಲ್ಲಿ ಸಕ್ಕರೆ ಕಾರ್ಖಾನೆಗಳ ದುಡಿಯುವ ಬಂಡವಾಳವಾಗಿ, ಭದ್ರತೆ ಇಲ್ಲದೇ ಸಾಲ ಪಡೆದಿದ್ದರೂ, ಸಂಯುಕ್ತ ಸಹಕಾರಿ ಕ್ರಮ ಜರುಗಿಸುತ್ತಿಲ್ಲ. ಅದೇ ರೀತಿ ಕೆಲವು ಸಹಕಾರಿಗಳು ಠೇವಣಿ ಹಣವನ್ನು ಸದಸ್ಯರಿಗೆ ವಾಪಸ್ ನೀಡಲು ಶಕ್ತಿ ಇಲ್ಲದೇ ಇದ್ದರೂ ಕ್ರಮ ಜರುಗಿಸದೇ ಇರುವುದು, ಏಕೆಂದರೆ ಸದಸ್ಯರ ಠೇವಣಿ ಹಣವನ್ನು ಸ್ವಹಿತಾಸಕ್ತಿ ಸಂಸ್ಥೆಗಳಿಗೆ ವಾಪಸಾಗದ ಸಾಲ ನೀಡಿ, ನಿಯಂತ್ರಿಸಲು ಸಾಧ್ಯವಾಗದೇ ಇದ್ದಾಗಿನ ಶಾಸನಾತ್ಮಕ ಅಧಿಕಾರ ಚಲಾಯಿಸದೇ ಇರುವುದು. ಸದಸ್ಯ ಸಹಕಾರಿಗಳಿಗೆ ಕಾರ್ಯನಿರ್ವಹಣೆಯಲ್ಲಿ ಮತ್ತು ಮಂಡಳಿ ಸದಸ್ಯರಿಗೆ ಸಕ್ರಿಯ ಭಾಗವಹಿಸುವ ಬಗ್ಗೆ ತರಬೇತಿ ನೀಡಿದ್ದರೂ ಅದನ್ನು ನಿಯಂತ್ರಿಸಲಾಗಿದೆ, ಸ್ವೇಚ್ಛೆತೆ ಪ್ರದರ್ಶಿಸಲು ಅವಕಾಶ ಕಲ್ಪಿಸಿದೆ. ಇದೆಲ್ಲವೂ ಸಂಯುಕ್ತ ಸಹಕಾರಿ ಮಂಡಳಿ, ನಿಯಂತ್ರಿಸಲು ಒತ್ತಡಕ್ಕೆ ಸಿಲುಕಿ ಕ್ರಮ ಜರುಗಿಸದೇ ಇರುವುದು ಮತ್ತು ಸಂಯುಕ್ತ ಸಹಕಾರಿ ನಿರ್ದೇಶಕರು ಸದಸ್ಯ ಸಹಕಾರಿಗಳು ನಿರ್ದೇಶಕರ ನಿಯಂತ್ರಣದಲ್ಲಿ ಕೆಲಸ ನಿರ್ವಹಿಸಬೇಕೆಂಬ ಮನೋಭಾವನೆ ಮತ್ತು ಸರ್ಕಾರದ ಮಂತ್ರಿಗಳು ಅಧಿಕಾರ ಚಲಾಯಿಸಿದಂತೆ ಪ್ರಯತ್ನ ಪಡಲು ಭಾವನೆ ಬೆಳೆಸಿಕೊಂಡಿದ್ದಾರೆ. ಇದರಿಂದ ಪಾರದರ್ಶಕ ಮತ್ತು ವ್ಯಕ್ತಿಪರ ತೀರ್ಮಾನ ತೆಗೆದುಕೊಳ್ಳಲು ಶಕ್ತಿ ಕಳೆದುಕೊಂಡಿದ್ದಾರೆ. ಮತ್ತೊಂದು ಉದಾಹರಣೆ ನೀಡುವುದಾದರೇ ಬೆಳಗಾಂ ವಿಭಾಗ ಒಂದರಲ್ಲೇ ಸುಮಾರು 700–800 ಸದಸ್ಯ ಸಹಕಾರಿಗಳ ಲೆಕ್ಕ ತಪಾಸಣೆ ಮಾಡಿಸದೇ ಇದ್ದರೂ, ಸಂಯುಕ್ತ ಸಹಕಾರಿ ಕ್ರಮ ಜರುಗಿಸದೇ ಇರುವುದು. ಸಿಬ್ಬಂದಿ ಕೊರತೆ ಒಂದು ಕಾರಣವೆಂದು ಆಡಳಿತಾಧಿಕಾರಿ/ವಿಶೇಷಾಧಿಕಾರಿ ನೇಮಕ ಮಾಡಲು ಸಾಧ್ಯವಿಲ್ಲವೆಂಬ ಚಿಂತನೆಯಲ್ಲಿ ವಿಳಂಬ ಮಾಡಲಾಗುತ್ತಿದೆ. ಇದು ಒಂದು ಶಾಸನಾತ್ಮಕ ಶಕ್ತಿ, ಪ್ರದರ್ಶಿಸಬೇಕಾದ ನಿಲುವು ಅಲ್ಲ. ಸಂಯುಕ್ತ ಸಹಕಾರಿ ಶಕ್ತಿ ಪ್ರದರ್ಶಿಸಿಲ್ಲ.

ವ್ಯವಸ್ಥಾಪಕ ನಿರ್ದೇಶಕರಿಗೆ ನೀಡಿದ ವಿಚಾರಣೆ ಅಧಿಕಾರವನ್ನು ಮತ್ತೊಂದು ಆಯಾಮದಿಂದಲೂ ನೋಡಬೇಕು. ಕಲಂ.35 ರಡಿ ನಿಬಂಧಕರ ವಿಚಾರಣೆ ಆದೇಶಿಸಲು, ಸಂಯುಕ್ತ ಸಹಕಾರಿ/ಸದಸ್ಯ ಸಹಕಾರಿಯಿಂದ ಬಂದ ಮನವಿ/ವಿನಂತಿ /ವರದಿ ಆಧಾರದಲ್ಲಿ ಆದೇಶಿಸುತ್ತಾರೆ. ಅಂದರೆ ಮತ್ತೊಂದು ಪ್ರಾರಂಭಿಕ ಹಂತದ ಪರಿಶೀಲನೆ ನಡೆದಿರುತ್ತದೆ. ಅದರಂತೆ ಸಂಯುಕ್ತ ಸಹಕಾರಿ ಕಲಂ.53(7)(ಯು) ಅಡಿ ಪರಿವೀಕ್ಷಣೆ ಮಾಡಲು ತೀರ್ಮಾನ ತೆಗೆದುಕೊಳ್ಳಲು ವಿಳಂಬವಾಗುತ್ತಿದೆ. ಏಕೆಂದರೆ ಅದು ಪ್ರಜಾಪ್ರಭುತ್ವದಡಿ ರಚನೆಯಾದ ಸಂಸ್ಥೆ ಮತ್ತು ಅದಕ್ಕೆ ಸಂಘ ಪರಿವಾರ ಅಥವಾ ರಾಜಕೀಯ ಒತ್ತಡದಿಂದ ತೀರ್ಮಾನ ತೆಗೆದುಕೊಳ್ಳಲು ವಿಳಂಬವಾಗುತ್ತಿದೆ. ಇದಕ್ಕೆ ಒಂದು ಉದಾಹರಣೆ ನೀಡುವುದಾದರೆ ಕೇಂದ್ರ ಸರ್ಕಾರ ಹೊಸದಾಗಿ ರಚನೆಯಾದಾಗ, ವಿರೋದ ಪಕ್ಷದ ಆಡಳಿತ ವಿರುವ ರಾಜ್ಯಗಳನ್ನು ವಜಾ ಮಾಡುವುದು ಮತ್ತು ಅದೇ ರೀತಿ ಪಕ್ಷದ ಕಾರ್ಯಕರ್ತರಿಗೆ ರಾಜ್ಯಪಾಲರ ಹುದ್ದೆ ನೀಡಿ, ನಿಯಂತ್ರಿಸಲು ಪ್ರಯತ್ನ ನಡೆಯುತ್ತಿತ್ತು. ಈಗ ಅದು ಕಡಿಮೆಯಾಗಿದ್ದು. ಆರ್ಥಿಕ ನೆರವಿನ ವಿಷಯದಲ್ಲಿ ತಾರತಮ್ಯ ತೋರುತ್ತಿರುವುದನ್ನು ಗಮನಿಸಬಹುದು. ಅದೇ ರೀತಿ ಸಂಯುಕ್ತ ಸಹಕಾರಿ ಮಂಡಳಿ ಕ್ರಮ ಜರುಗಿಸದೇ ಇದ್ದಾಗ, ವ್ಯವಸ್ಥಾಪಕ ನಿರ್ದೇಶಕನಿಗೆ ಅಧಿಕಾರ ನೀಡಿದರೆ, ಒಬ್ಬ ವ್ಯಕ್ತಿಪರ ವ್ಯಕ್ತಿಯಾದ್ದರಿಂದ ತೀರ್ಮಾನ ತೆಗೆದುಕೊಳ್ಳಲೇಬೇಕಾದ ಪರಿಸ್ಥಿತಿ ನಿರ್ಮಾಣ ಮಾಡಿದಂತಾಗಿದೆ.

ಏಕೀಕೃತ ಸಹಕಾರಿ ಕಾಯಿದೆ ಬಗ್ಗೆ ಅನೂಪ್‌ದೇಶ್‌ಪಾಂಡೆ ಪ್ರತಿ ಪಾದಿಸುತ್ತಿದ್ದಾರೆ. ಈ ಬಗ್ಗೆ ಸರ್ಕಾರ ಬಿ.ಎಸ್. ವಿಶ್ವನಾಥ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚಿಸಿ, ಸಹಕಾರ ಕಾಯಿದೆ ತಿದ್ದುಪಡಿಗೆ ವರದಿ ಪಡೆದಿದ್ದು. ಆ ವರದಿಯಲ್ಲಿ ಸೌಹಾರ್ದ ಕಾಯಿದೆ ಅವಶ್ಯಕತೆ ಇಲ್ಲವೆಂದು ಶಿಪಾರಸ್ ಮಾಡಿ ಮರದಿ ಸಲ್ಲಿಸಿತ್ತು. ಆದರೆ ಆ ಸಮಿತಿಯ ಮುಖ್ಯಸ್ಥರೇ ನಿಬಂಧಕರ ಅತಿ ನಿಯಂತ್ರಣದಿಂದ ಸಹಕಾರ ಸಂಸ್ಥೆಗಳ ಸ್ವಾಯತ್ತತೆ ಇಲ್ಲದಂತಾಗುತ್ತಿದೆ ಎಂದು ಎಲ್ಲಾ ವೇದಿಕೆಗಳಲ್ಲಿ ಪ್ರತಿ ಪಾದಿಸುತ್ತಿದ್ದರು. ಆದರೆ ಸ್ವಾಯತ್ತತೆ, ಸ್ವಾತಂತ್ರ್ಯ ಮತ್ತು ಸ್ವಯಂ ನಿಯಂತ್ರಣವನ್ನು 97ನೇ ಸಂವಿಧಾನ ತಿದ್ದುಪಡಿಗೆ ಪೂರ್ವದಲ್ಲಿಯೇ ಕರ್ನಾಟಕ ಸೌಹಾರ್ದ ಸಹಕಾರ ಕಾಯಿದೆ ರೂಪಿಸಿ ಪೂರ್ಣ ಪ್ರಮಾಣದ, ಸ್ವಾಯತ್ತತೆ, ನೀಡಿ ರಚಿಸಿದ "ಸಂಯುಕ್ತ ಸಹಕಾರಿ" ಎಂಬ ಕಲ್ಪನೆ ರಾಷ್ಟ್ರದ ಯಾವುದೇ ಕಾಯಿದೆ ರೂಪಿಸಿಲ್ಲ. ಸಂವಿಧಾನ ತಿದ್ದುಪಡಿಯಲ್ಲಿಯೂ ಪ್ರಜಾಪ್ರಭುತ್ವದಡಿ ರಚನೆಯಾದ ಒಂದು ಮಂಡಳಿಗೆ ಶಾಸನಾತ್ಮಕ ಅಧಿಕಾರ ನೀಡಿದ ಮತ್ತೊಂದು ಕಾಯಿದೆ ರಾಷ್ಟ್ರದಲ್ಲಿ ರಚನೆಯಾಗಿಲ್ಲ. ಈ ಪರಿಕಲ್ಪನೆಗೆ ಪ್ರೋತ್ಸಾಹ ನೀಡುವ ಬದಲು ಅಥವಾ ಅಳವಡಿಸಿಕೊಳ್ಳಲು ಪ್ರಯತ್ನ ಪಡದೆ ಏಕೀಕೃತ ಕಾಯಿದೆ ಪ್ರಸ್ತಾವನೆ ಸೂಚನೆ ನೀಡುವುದು ಸ್ವಾಯತ್ತ ಸಹಕಾರಿ ಆಂದೋಲನಕ್ಕೆ ಮಾಡಿದ ಒಂದು ಅಪಚಾರ. ಸಂಯುಕ್ತ ಸಹಕಾರಿ ತನ್ನ ಜವಾಬ್ದಾರಿ ನಿರ್ವಹಣೆಯಲ್ಲಿ ಕೆಲವು ಬಾರಿ ಎಡವಿರಬಹುದು. ಆದರೆ ಸ್ವಾಯತ್ತತೆ, ಸ್ವಾತಂತ್ರ್ಯ ಮತ್ತು ಸ್ವಯಂ ನಿಯಂತ್ರಣ ಎಂಬ ಪರಿಕಲ್ಪನೆಗೆ ಚ್ಯುತಿ ಬರದಂತೆ ನೋಡಿಕೊಳ್ಳುವ ಜವಾಬ್ದಾರಿ ಈ ಸಂಯುಕ್ತ ಸಹಕಾರಿಗೆ ಕಾಯಿದೆಯಲ್ಲಿಯೇ ಅಧಿಕಾರ ನೀಡಿದೆ. ಅದರ ಉಪಯೋಗ ಪಡೆಯುವ ಜವಾಬ್ದಾರಿ ಸಂಯುಕ್ತ ಸಹಕಾರಿ ಉಪಯೋಗಿಸಬೇಕು. ಇದರ ಜೊತೆಗೆ ಬಹಳಷ್ಟು ರಾಜ್ಯಗಳ ಕಾಯಿದೆಯಲ್ಲಿ ಸರ್ಕಾರದ ಹಣ ಪಡೆಯಲು ಅವಕಾಶ ನೀಡಿದೆ. ಆದರೆ ಸೌಹಾರ್ದ ಕಾಯಿದೆಯಲ್ಲಿ ಸರ್ಕಾರದಿಂದ ಪ್ರತ್ಯಕ್ಷ/ಪರೋಕ್ಷ ಸಹಾಯಧನ ಪಡೆಯಲು ಅವಕಾಶವಿಲ್ಲ ಮತ್ತು ಅದನ್ನು ನಿರ್ಬಂದಿಸಲಾಗಿದೆ. ಈ ಹಿಂದೆ ನಾನು ರಾಯಚುರಿನಲ್ಲಿ ಕೆಲಸ ಮಾಡುತ್ತಿದ್ದಾಗ, ಆಗಿನ ಜಿಲ್ಲಾ ಪೋಲೀಸ್ ಅಧಿಕಾರಿ ಹರ್ಯಾನ ರಾಜ್ಯದಲ್ಲಿ ಸಹಕಾರಿ ಸಂಘಗಳ ಸ್ಥಾಪನೆ ಮಾಡುವ ಉದ್ದೇಶವೇ ಸರ್ಕಾರದಿಂದ ಹಣ

ಪಡೆಯುವುದೇ ಎಂದು ತಿಳಿಸುತ್ತಿದ್ದರು. (ಜಿಲ್ಲಾ ಮಟ್ಟದ ಕ್ರಿಮಿನಲ್ ಪ್ರಕರಣಗಳ ಸಮನ್ವಯ ಸಮಿತಿ ಸಭೆಯಲ್ಲಿ). ಸೌಹಾರ್ದ ಕಾಯಿದೆ ಕಲಂ.53(7) ರಲ್ಲಿ ಸದಸ್ಯ ಸಹಕಾರಿಗಳ ಬೆಳವಣಿಗೆಗೆ, ಸಂಯುಕ್ತ ಸಹಕಾರಿ ಶಾಸನಾತ್ಮಕ ಅಧಿಕಾರದಿಂದ, (ಸದಸ್ಯ ಸಹಕಾರಿಗಳೇ ಆಯ್ಕೆ ಮಾಡಿದ ಸಂಯುಕ್ತ ಸಹಕಾರಿ ಮಂಡಳಿ) ಮಾರ್ಗದರ್ಶಕ, ತತ್ವಜ್ಞಾನಿ ಮತ್ತು ಸ್ನೇಹಿತ ಎಂಬ, ನಿಬಂಧಕರಿಗೆ ನೀಡಿದ ಜವಾಬ್ದಾರಿಯನ್ನು ಸಂಯುಕ್ತ ಸಹಕಾರಿ ಕಾಯಿದೆ ನೀಡಿದೆ. ಇಂತಹ ಪರಿಕಲ್ಪನೆ ಬೇರೆ ಯಾವುದೇ ರಾಜ್ಯ ಕಾಯಿದೆಗಳಲ್ಲಿ ಸೇರಿಸಿಲ್ಲ. ಇದರ ಜೊತೆಗೆ ರಾಷ್ಟ್ರದಲ್ಲಯೇ ಪ್ರಥಮ ಬಾರಿಗೆ, ಸೌಹಾರ್ದ ಕಾಯಿದೆಯಲ್ಲಿ ನೋಂದಾವಣೆಯಾದ ದಿನಾಂಕದಂದೇ ಸಂಯುಕ್ತ ಸಹಕಾರಿ ಸದಸ್ಯತ್ವ ಪಡೆಯುವ ಪರಿಕಲ್ಪನೆ. 1959ರ ಕಾಯಿದೆ ಸದಸ್ಯತ್ವ ಪಡೆಯಲು ಪ್ರತಿ ಜಿಲ್ಲಾ ಸಹಕಾರ ಒಕ್ಕೂಟಗಳ ಗುಂಪುಗಾರಿಕೆಯಿಂದ ಸದಸ್ಯತ್ವ ನೀಡದೆ, ಆಯ್ದ ಸಹಕಾರ ಸಂಸ್ಥೆಗಳಿಗೆ ಮಾತ್ರ ಸದಸ್ಯತ್ವ ನೀಡಿ, ತಮ್ಮ ಅಧಿಕಾರವನ್ನು ಮೊಟಕುಗೊಳಿಸದಂತೆ ನೋಡಿಕೊಳ್ಳುವುದೇ ಒಂದು ಹಕ್ಕು ಎಂದು ತಿಳಿದಿದ್ದಾರೆ. ಈ ನೀತಿ ಪ್ರಜಾಪ್ರಭುತ್ವ ನೀತಿಗೆ ವಿರೋದವಾಗಿದೆ ಎಂದು ವಾದಿಸಬಹುದು. ಆದರೆ 1959ರ ಕಾಯಿದೆಯಲ್ಲಿ ಇತ್ತೀಚಿನ ತಿದ್ದುಪಡಿಗಳನ್ನು ಗಮನಿಸಿದಾಗ ಅರ್ಜಿ ಸಲ್ಲಿಸಿದ 60 ದಿವಸಗಳಲ್ಲಿ ಸದಸ್ಯತ್ವದ ಬಗ್ಗೆ ತೀರ್ಮಾನ ತೆಗೆದುಕೊಳ್ಳದಿದ್ದರೆ, ಅಂತಹ ವ್ಯಕ್ತಿಗೆ ಸದಸ್ಯತ್ವ ನೀಡಲಾಗಿದೆ ಎಂದು ಭಾವಿಸುವಂತೆ ಅವಕಾಶ ಕಲ್ಪಿಸಿದೆ. ಅಂದರೆ ಸದಸ್ಯತ್ವ ನೀಡುವುದು, ಆ ಸಹಕಾರಿ ಸಂಸ್ಥೆಯ ಬೆಳವಣಿಗೆ ದೃಷ್ಟಿಯಿಂದ ವೈವಿದ್ಯತೆ ಇರಲೆಂದು ಎಂದು ಭಾವಿಸತಕ್ಕದ್ದು. ಇದನ್ನು ಪ್ರಜಾಪ್ರಭುತ್ವ ವಿರೋದಿ ಎಂದು ತಿಳಿಯುವುದಿಲ್ಲ. ಸಂವಿಧಾನ ತಿದ್ದುಪಡಿ ನಂತರವೂ, 1959ರ ಕಾಯಿದೆಯಲ್ಲಿ ಸೌಹಾರ್ದ ಕಾಯಿದೆಯಲ್ಲಿ ಬಹಳಷ್ಟು ವ್ಯತ್ಯಾಸವಿದೆ ಮತ್ತು ಈ ವೈತ್ಸಾಸ ಸಹಕಾರಿ ಆಂದೋಲನ ಬೆಳೆವಣಿಗೆಗೆ ಸಹಕಾರಿಯಾಗಿದೆ. ಹಾಲಿ ಸಂಯುಕ್ತ ಸಹಕಾರಿ ಸಮರ್ಪಕ ಕೆಲಸ ನಿರ್ವಹಿಸುತ್ತಿಲ್ಲವೆಂಬ ಒಂದೇ ಕಾರಣದಿಂದ, ಇದನ್ನು ತಿರಸ್ಕರಿಸಲಾಗದು. ಸಂಯುಕ್ತ ಸಹಕಾರಿ ನಿರ್ದೇಶಕರಲ್ಲಿ ಸೌಹಾರ್ದ ಕಾಯಿದೆ ಬಗ್ಗೆ ಬದ್ದತೆ ಇಲ್ಲದೇ ಇರಬಹುದು. ಆದರೆ ಮುಂದೆ ಈ ಸಂಯುಕ್ತ ಸಹಕಾರಿ ಸಮರ್ಪಕವಾಗಿ ಕೆಲಸ ಮಾಡುವಂತೆ ಉತ್ತಮ ಮುಖಂಡತ್ವಸಿಗುವುದೇ ಇಲ್ಲವೆಂದು ಏಕೆ ಭಾವಿಸಬೇಕು. ಇದಕ್ಕೆ ಭಾರತದ ಮುಖಂಡತ್ವವಹಿಸಿರುವ ಈಗಿನ ಪ್ರಧಾನ ಮಂತ್ರಿಗಳು ರಾಷ್ಟ್ರಕ್ಕೆ ಒಂದು ದಿಟ್ಟ ಮಾರ್ಗದರ್ಶಿ ನೀಡುತ್ತಿಲ್ಲವೇ? ಅಂದರೆ ಭದ್ದತಿ ಇದ್ದ ಮುಖಂಡತ್ವ ಸಂಯುಕ್ತ ಸಹಕಾರಿಗೆ ಸಿಗುವುದಿಲ್ಲವೆಂದು ಏಕೆ ಭಾವಿಸವೇಕು? ಅಂದರೆ ಒಂದು ಜವಾಬ್ದಾರಿಯುತ, ಸಂಯುಕ್ತ ಸಹಕಾರಿ, ಸೌಹಾರ್ದ ಕಾಯಿದೆಗೆ ಒಳ್ಳೆಯ ಮುಖಂಡತ್ವ ನೀಡಿದರೆ, ಸದಸ್ಯರೇ ತಮ್ಮ ಅತ್ಯಲ್ಪ ಸಂಪನ್ಮೂಲವನ್ನು ಕ್ರೊಡಿಕರಿಸಿ ರಚಿಸಿಕೊಂಡ ಸಹಕಾರಿ ಸದಸ್ಯರ ಆರ್ಥಿಕ, ಸಮಾಜಿಕ, ಬೆಳವಣಿಗೆಗೆ ಸ್ವಾಯತ್ತತೆ, ಸ್ವಾತಂತ್ರ್ಯ ಮತ್ತು ಸ್ವಯಂ ನಿಯಂತ್ರಣ ನೀಡಿದ ಸೌಹಾರ್ದ ಕಾಯಿದೆಯೂ 59ರ ಕಾಯಿದೆಗೆ ವಿಲೀನಗೊಳಿಸುವುದು ಸೂಕ್ತವಲ್ಲ. ಈಗಿನ ಭ್ರಷ್ಟ ವ್ಯವಸ್ಥೆಯಲ್ಲಿ ಪ್ರತಿ ಹಂತದಲ್ಲಿ ನಿಬಂಧಕರ ಒಪ್ಪಿಗೆ ಪಡೆಯುವ ಬದಲು ಸ್ವಯತ್ತ ಸಂಸ್ಥೆಯಾಗಿ ಸಂಯುಕ್ತ ಸಹಕಾರಿ, ಸದಸ್ಯ ಸಹಕಾರಿಗಳಿಗೆ ಸ್ನೇಹಿತ, ತತ್ವಜ್ಞಾನಿ ಮತ್ತು ಮಾರ್ಗದರ್ಶಕ ಪರಿಕಲ್ಪನೆಗೆ ಪೂರಕವಾಗಿದೆ ಎಂದು ಭಾವಿಸುತ್ತೇನೆ. ಆದ್ದರಿಂದ ರಾಷ್ಟ್ರಕ್ಕೆ ಮಾದರಿಯಾಗಿರುವ ಸೌಹಾರ್ದ ಕಾಯಿದೆಯನ್ನು ಏಕೀಕೃತ ಕಾಯಿದೆ ಎಂಬ ಭ್ರಮೆಯಿಂದ ಮುಕ್ತಿಗೊಳಿಸಿ, 1959ರ ಕಾಯಿದೆಯಲ್ಲಿ ನೋಂದಾವಣೆಯಾದ ಹೆಚ್ಚು ಸಹಕಾರ ಸಂಸ್ಥೆಗಳ ಸೌಹಾರ್ದ ಕಾಯಿದೆಗೆ ವರ್ಗಾವಣೆ ಮಾಡುವ ಪ್ರಯತ್ನ ಮಾಡಬೇಕು. ಏಕೆಂದರೆ, ಪ್ರತಿ ಹಂತದಲ್ಲಿಯೂ, ಭ್ರಷ್ಟ ವ್ಯವಸ್ಥೆಯಿಂದ ಮುಕ್ತಿ ನೀಡಿದಾಗ ಮಾತ್ರ ಸಹಕಾರಿ ಆಂದೋಲನ ಇನ್ನು ಶಕ್ತಿಯುತವಾಗಿ ಬೆಳೆಯಲು ಸಾಧ್ಯ.

**ದ್ವಿನಿಯಂತ್ರಣ :**

ಸೌಹಾರ್ದ ಕಾಯಿದೆಯಡಿ ಶಾಸನಾತ್ಮಕ ಅಧಿಕಾರವನ್ನು ನಿಬಂಧಕರಿಗೆ ಮತ್ತು ಸಂಯುಕ್ತ ಸಹಕಾರಿಗೆ ಹಂಚಲಾಗಿದೆ. ಪ್ರಾರಂಭದಲ್ಲಿ ಚಿಂತನೆ ನಡೆದದ್ದು ಸಹಕಾರಿ ನೋಂದಣಿ ಮತ್ತು ಸಹಕಾರಿ ಸಮಾಪನೆ ನಂತರ, ನೋಂದಣಿ ರದ್ದತಿ ಬಿಟ್ಟು, ಉಳಿದೆಲ್ಲ ಶಾಸನಾತ್ಮಕ ಅಧಿಕಾರಗಳನ್ನು ಸಂಯುಕ್ತ ಸಹಕಾರಿಗೆ ನೀಡಬೇಕೆಂಬುದೆ ಆಶಯವಾಗಿತ್ತು. ನೋಂದಣಿಯನ್ನು ರದ್ದತಿ ಎರಡನ್ನು ನಿಬಂಧಕರಿಗೆ ಉಳಿಸಲು ಚಿಂತಿಸಬೇಕೆಂದರೆ, ಹುಟ್ಟು ಮತ್ತು ಸಾವು ಮಾತ್ರ ನಿಬಂಧಕರಿಗೆ ಉಳಿದ ಜೀವಿತಾವಧಿಯಲ್ಲಿ ನಡೆಯುವ ಎಲ್ಲಾ ಕೆಲಸಗಳನ್ನು ಸಂಯುಕ್ತ ಸಹಕಾರಿ ನಿರ್ವಹಿಸಬೇಕೆಂಬ ಆಶಾಭಾವನೆಯಿಂದ. ಈಗಾಗಲೇ ಪ್ರಾರಂಭದಲ್ಲಿ ಹೇಳಿದಂತೆ ಪ್ರಾರಂಭದ ಹಂತದಲ್ಲಿ ಆದ ಕೆಲವು ನ್ಯೂನತೆಗಳಿಂದ ಈ ಸ್ವಾಯತ್ತತೆ, ಸ್ವಾತಂತ್ರ್ಯ ಮತ್ತು ಸ್ವಯಂ ನಿಯಂತ್ರಣಕ್ಕೆ ವಿರುದ್ದವಾಗಿದೆ ಎಂದು ಭಾವಿಸಿದ್ದರೂ, ಅನೂಪ್ ದೇಶ್‌ಪಾಂಡೆ ಅವರೆ ಆ ಸಂಸ್ಥೆಯ ಶಾಸನಾತ್ಮಕ ಪ್ರಮುಖ ವ್ಯಕ್ತಿಯಾಗಿದ್ದರು ಮತ್ತು ಅವರೇ ಸಂಯುಕ್ತ ಸಹಕಾರಿ ಮಂಡಳಿಗೆ ಮಾರ್ಗದರ್ಶಕವಾಗಿರಬೇಕಾಗಿತ್ತು. ಆಗಿನ ಕೆಲವು ನ್ಯೂನತೆಗಳಿಂದ ಸಂಯುಕ್ತ ಸಹಕಾರಿ ಮಂಡಳಿ ನಿರ್ದೇಶಕರು, ತಮ್ಮ ಶಾಸನಾತ್ಮಕ ಅಧಿಕಾರ ಚಲಾಯಿಸಲು ವಿಫಲರಾಗಿ, ಕೆಲವು ಅಧಿಕಾರಿಗಳನ್ನೂ ನಿಬಂಧಕರಿಗೆ ವರ್ಗಾಯಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ದ್ವಿನಿಯಂತ್ರಣವಿರಬಾರದೆಂದೆ, ಮೇಲ್ಕಂಡ ಪರಿಕಲ್ಪನೆಯಿಂದ ಕಾಯಿದೆ ರಚಿಸಲಾಗಿತ್ತು. ದ್ವಿನಿಯಂತ್ರಣದ ಬಗ್ಗೆ ಚಿಂತಿಸುವಾಗ ನಾವು ಗಮನಿಸಬೇಕಾದ ಪ್ರಮುಖ ಅಂಶವೆಂದರೆ ಸಹಕಾರ ಬ್ಯಾಂಕ್‌ಗಳನ್ನು ನಿಬಂಧಕರು ಮತ್ತು ಭಾರತೀಯ ರಿಜರ್ವ್ ಬ್ಯಾಂಕ್ ಎರಡೂ ನಿಯಂತ್ರಿಸುತ್ತೇವೆ. ಇತ್ತೀಚೆಗೆ ಇನ್ನು ಹೆಚ್ಚಿನ ಅಧಿಕಾರವನ್ನು ಭಾರತೀಯ ರಿಜರ್ವ್ ಬ್ಯಾಂಕ್ ಪಡೆದಿದ್ದರೂ, ನಿಬಂಧಕರ ನಿಯಂತ್ರಣ ಮುಂದುವರಿದಿದೆ. ಕಾಯಿದೆಯಲ್ಲಿ ನಿಬಂಧಕರು ಏನು ಮಾಡಬೇಕು ಮತ್ತು ಸಂಯುಕ್ತ ಸಹಕಾರಿ ಏನು ಮಾಡಬೇಕೆಂಬ ಸ್ಪಷ್ಟ ಚಿತ್ರಣವಿದೆ. ಅದಕ್ಕಾಗಿ ಯಾರು ಯಾವ ಕೆಲಸ ಮಾಡಬೇಕೆಂಬ ಅಂಶ ತಿಳಿದಿದೆ. ಈ ರೀತಿ ವ್ಯವಸ್ಥೆ ಸಹಕಾರಿ ಆಂದೋಲನಕ್ಕೆ ಪೂರಕ ಎಂದು ಸರ್ಕಾರ ಭಾವಿಸಿದ ನಂತರವೇ ಈ ಕಾಯಿದೆಗೆ ಅಂತಿಮ ರೂಪ ನೀಡಲಾಗಿದೆ. ಮತ್ತು ಸೌಹಾರ್ದ ಕಾಯಿದೆ ರಾಷ್ಟ್ರ ಮಟ್ಟದಲ್ಲಿ ಗಮನ ಸೆಳೆದಿದೆ ಮತ್ತು ಇದಕ್ಕೆ ಹೆಚ್ಚಿನ ಪ್ರಚಾರದ ವ್ಯವಸ್ಥೆ ಮಾಡಬೇಕೆಂದರೆ ಸಂಯುಕ್ತ ಸಹಕಾರಿ ತನ್ನ ಕಾರ್ಯಚಟುವಟಿಗೆಗಳನ್ನು ವಿಸ್ತರಿಸಿ, ಸಹಕಾರಿನ್ನು ಸ್ವಯತ್ತ, ಸ್ವಾತಂತ್ರ ಮತ್ತು ಸ್ವಯಂ ನಿಯಂತ್ರಿತ ಸಂಸ್ಥೆಗಳಾಗುವಂತೆ ವ್ಯವಸ್ಥಿತ ತರಬೇತಿ ನೀಡಬೇಕು. ಈಗ ತರಬೇತಿ ಪಡೆದ ಚುನಾಯಿತ ಪ್ರತಿನಿಧಿಗಳು ಸಹಕಾರಿ ಅಧಿಕಾರಿಗಳು ನೌಕರನ್ನು, ಸೇವಕರಂತೆ ನೋಡದೆ, ಸಹಕಾರಿ ಬೆಳವಣಿಗೆಗೆ ಪ್ರಮುಖ ಪಾತ್ರಗಳಂತೆ ನೋಡಿದಾಗ ಮಾತ್ರ ಸಹಕಾರಿ ಬೆಳವಣಿಗೆ ಸಾಧ್ಯ.

# ಗುರು-ಗುರಿ ಇದ್ದರೆ ಯಶಸ್ಸು ಖಚಿತ : ಶಿಕ್ಷಕರ ದಿನಾಚರಣೆಯ ಇತಿಹಾಸ, ಮಹತ್ವ, ಆಚರಣೆ

– ಶ್ರೀ ಶಂಕರ ಎಸ್, ಜಿಲ್ಲಾ ಸಂಯೋಜಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು.

ಒಂದು ಪುಸ್ತಕ, ಒಂದು ಪೆನ್ನು, ಒಂದು ಮಗು ಮತ್ತು ಒಬ್ಬ ಶಿಕ್ಷಕ ಜಗತ್ತನ್ನು ಬದಲಾಯಿಸಬಹುದು."

– ಮಲಾಲಾ ಯೂಸುಫ್‌ಜಾಯ್

ಪ್ರತಿಯೊಬ್ಬರ ಜೀವನದಲ್ಲಿ ಶಿಕ್ಷಕರು ಅತ್ಯಂತ ಪ್ರಭಾವಶಾಲಿಯಾಗಿದ್ದಾರೆ. ಜೀವನ, ವೃತ್ತಿ, ಜನರು, ಸಮಾಜ ಮತ್ತು ಇತರ ಅನೇಕ ವಿಷಯಗಳ ಬಗ್ಗೆ ನಮ್ಮ ಗ್ರಹಿಕೆಯನ್ನು ರೂಪಿಸಲು ಅಥವಾ ಬದಲಾಯಿಸಲು ಅವು ನಮಗೆ ಸಹಾಯ ಮಾಡುತ್ತವೆ. ಅವರು ನಮಗೆ ವಿವಿಧ ವಿಷಯಗಳ ಪರಿಕಲ್ಪನೆಗಳನ್ನು ಕಲಿಸುವುದಲ್ಲದೆ, ಮುಂದೆ ಯಶಸ್ವಿ ಮತ್ತು ಗೌರವಾನ್ವಿತ ಜೀವನವನ್ನು ನಡೆಸಲು ನಮಗೆ ಮಾರ್ಗದರ್ಶನ ನೀಡುತ್ತಾರೆ. ಒಬ್ಬ ವ್ಯಕ್ತಿಯ ಜೀವನದಲ್ಲಿ ಶಿಕ್ಷಕರ ಮಹತ್ವದ ಕೊಡುಗೆಯನ್ನು ಗುರುತಿಸಲು, ಭಾರತದಲ್ಲಿ ಪ್ರತಿ ವರ್ಷ ಸೆಪ್ಟೆಂಬರ್ 5 ರಂದು ರಾಷ್ಟ್ರೀಯ ಶಿಕ್ಷಕರ ದಿನವನ್ನು ಆಚರಿಸಲಾಗುತ್ತದೆ. ಪ್ರತಿಯೊಬ್ಬರ ಜೀವನದಲ್ಲಿ ಶಿಕ್ಷಕರ ಪಾತ್ರವನ್ನು ಗೌರವಿಸುವುದು ಮಾತ್ರವಲ್ಲದೆ ಅವರ ವಿದ್ಯಾರ್ಥಿಗಳ ಜೀವನದಲ್ಲಿ ಅವರು ಉಂಟಾದ ಪರಿವರ್ತನೆಗಳನ್ನು ಆಚರಿಸುವುದು ಸಹ ದಿನವಾಗಿದೆ.



ಶಿಕ್ಷಕರಾಗಿರುವುದು ಉದಾತ್ತ ವೃತ್ತಿಯಾಗಿದ್ದು ಅದು ಇತರ ಯಾವುದೇ ವೃತ್ತಿಯಂತೆ ಸಮಾನ ಪ್ರಮಾಣದ ಪ್ರೀತಿ ಮತ್ತು ಗೌರವಕ್ಕೆ ಅರ್ಹವಾಗಿದೆ ಎಂಬುದರಲ್ಲಿ ಸಂದೇಹವಿಲ್ಲ. ಭಾರತದಲ್ಲಿ ಶಿಕ್ಷಕರ ದಿನ ಅನ್ನು **ಡಾ. ಸರ್ವಪಲ್ಲಿ ರಾಧಾಕೃಷ್ಣನ್** ಅವರ ಜನ್ಮದಿನದಂದು ಪ್ರತಿ ವರ್ಷ ಸೆಪ್ಟೆಂಬರ್ 5 ರಂದು ಆಚರಿಸಲಾಗುತ್ತದೆ. ಅವರು ಭಾರತದ ಮಾಜಿ ರಾಷ್ಟ್ರಪತಿ, ವಿದ್ವಾಂಸ, ತತ್ವಜ್ಞಾನಿ ಮತ್ತು ಭಾರತ ರತ್ನ ಪುರಸ್ಕೃತರಾಗಿದ್ದರು. ದೇಶದಾದ್ಯಂತ ವಿದ್ಯಾರ್ಥಿಗಳು ತಮ್ಮ ಶಿಕ್ಷಕರಿಗೆ ಗೌರವ ಮತ್ತು ಗೌರವವನ್ನು ಸಲ್ಲಿಸುತ್ತಾರೆ. ಕೆಲವು ಶಾಲೆಗಳಲ್ಲಿ, ಸೆಪ್ಟೆಂಬರ್ 5 ರಂದು ಶಿಕ್ಷಕರ ದಿನವನ್ನು ಆಚರಿಸಲು ವಿಶೇಷ ಕಾರ್ಯಕ್ರಮಗಳನ್ನು ಸಹ ಆಯೋಜಿಸಲಾಗಿದೆ. ಶಿಕ್ಷಕರ ದಿನ ನಮ್ಮ ದೇಶದ ಪ್ರಕಾಶಮಾನವಾದ ಮನಸ್ಸುಗಳಿಗೆ ಮಾರ್ಗದರ್ಶನ ನೀಡುವ ಮತ್ತು ಶಿಕ್ಷಣ ನೀಡುವ ಮೂಲಕ ರಾಷ್ಟ್ರ ನಿರ್ಮಾಣದಲ್ಲಿ ಶಿಕ್ಷಕರು ವಹಿಸುವ ಪಾತ್ರವನ್ನು ನೆನಪಿಸುತ್ತದೆ. ಭಾರತದಲ್ಲಿ ಮೊದಲ ಶಿಕ್ಷಕರ ದಿನವನ್ನು ಸೆಪ್ಟೆಂಬರ್ 5, 1962 ರಂದು ಆಚರಿಸಲಾಯಿತು. ಅದು ಅವರ 77ನೇ ಜನ್ಮದಿನವಾಗಿತ್ತು.

### ಶಿಕ್ಷಕರ ದಿನಾಚರಣೆಯ ಮಹತ್ವ :

ಶಿಕ್ಷಕರ ದಿನವು ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಸಮಾನವಾಗಿ ಎದುರುನೋಡುವ ಅಂತಹ ಒಂದು ಘಟನೆಯಾಗಿದೆ. ಈ ದಿನವು ವಿದ್ಯಾರ್ಥಿಗಳಿಗೆ ಮುಖ್ಯವಾಗಿದೆ ಏಕೆಂದರೆ ಅವರು ಸರಿಯಾದ ಶಿಕ್ಷಣವನ್ನು ಪಡೆಯುವುದನ್ನು ಖಚಿತಪಡಿಸಿಕೊಳ್ಳಲು ತಮ್ಮ ಶಿಕ್ಷಕರು ಮಾಡುವ ಪ್ರಯತ್ನಗಳನ್ನು ಅರ್ಥಮಾಡಿಕೊಳ್ಳಲು ಅವರಿಗೆ ಅವಕಾಶವನ್ನು ನೀಡುತ್ತದೆ. ಅಂತೆಯೇ, ಶಿಕ್ಷಕರು ಸಹ ಶಿಕ್ಷಕರ ದಿನಾಚರಣೆಯನ್ನು ಎದುರು ನೋಡುತ್ತಾರೆ ಏಕೆಂದರೆ ಅವರ ಪ್ರಯತ್ನಗಳನ್ನು ವಿದ್ಯಾರ್ಥಿಗಳು ಮತ್ತು ಇತರ ಸಂಸ್ಥೆಗಳು ಗುರುತಿಸಿ ಗೌರವಿಸುತ್ತವೆ.

ಸಾಮಾನ್ಯ ಗಾದೆಯಂತೆ, ದೇಶದ ಭವಿಷ್ಯವು ಮಕ್ಕಳ ಕೈಯಲ್ಲಿದೆ ಮತ್ತು ಶಿಕ್ಷಕರು, ಮಾರ್ಗದರ್ಶಕರಾಗಿ, ಭಾರತದ ಭವಿಷ್ಯವನ್ನು ರೂಪಿಸುವ ಭವಿಷ್ಯದ ನಾಯಕರಾಗಿ ವಿದ್ಯಾರ್ಥಿಗಳನ್ನು ರೂಪಿಸಬಹುದು. ವೃತ್ತಿ ಮತ್ತು ವ್ಯವಹಾರಗಳಲ್ಲಿ ಯಶಸ್ವಿಯಾಗಲು ಸಹಾಯ ಮಾಡುವಲ್ಲಿ ಅವರು ನಮ್ಮ ಜೀವನದಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಅವರು ಉತ್ತಮ ಮನುಷ್ಯರಾಗಿ, ಸಮಾಜದ ಉತ್ತಮ ಸದಸ್ಯರಾಗಿ ಮತ್ತು ದೇಶದ ಆದರ್ಶ ನಾಗರಿಕರಾಗಲು ನಮಗೆ ಸಹಾಯ ಮಾಡುತ್ತಾರೆ. ನಮ್ಮ ಜೀವನದಲ್ಲಿ ಶಿಕ್ಷಕರು ವಹಿಸುವ ಸವಾಲುಗಳು, ಕಷ್ಟಗಳು ಮತ್ತು ವಿಶೇಷ ಪಾತ್ರಗಳನ್ನು ಒಪ್ಪಿಕೊಳ್ಳಲು ಶಿಕ್ಷಕರ ದಿನವನ್ನು ಆಚರಿಸಲಾಗುತ್ತದೆ.

### ಶಿಕ್ಷಕರ ದಿನಾಚರಣೆಯ ಆಚರಣೆ :

ಶಿಕ್ಷಕರು ತಮ್ಮ ವಿದ್ಯಾರ್ಥಿಗಳಿಗೆ ಜ್ಞಾನದ ಶಕ್ತಿಯಿಂದ ಜ್ಞಾನೋದಯ ಮಾಡುವ ಮೂಲಕ ಸರಿಯಾದ ಮಾರ್ಗವನ್ನು ಸಾಧಿಸಲು ಸಹಾಯ ಮಾಡಬಹುದು. ಶಿಕ್ಷಕರ ದಿನಾಚರಣೆಯ ಮೂಲಕ ಶಿಕ್ಷಕರ ಕೊಡುಗೆ, ಪ್ರಯತ್ನಗಳು ಮತ್ತು ಸಮರ್ಪಣೆಯನ್ನು ಗೌರವಿಸಲಾಗುತ್ತದೆ. ಈ ದಿನದಂದು ಶಾಲೆಗಳಲ್ಲಿ ಯಾವುದೇ ರಜೆಯನ್ನು ನೀಡದೆ ಶಿಕ್ಷಕರ ಗೌರವಾರ್ಥವಾಗಿ ವಿಭಿನ್ನ ಕಾರ್ಯ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತದೆ.

ಶಿಕ್ಷಕರಿಗೆ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸುವ ಉದ್ದೇಶದಿಂದ ಹಾಡುಗಾರಿಕೆ ಮತ್ತು ನೃತ್ಯ ಸ್ಪರ್ಧೆಗಳು, ಮತ್ತು ನಾಟಕಗಳು, ಆಟಗಳು ಮತ್ತು ಇತರೆ ಚಟುವಟಿಕೆಗಳಂತಹ ಅನೇಕ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳು ಶಾಲೆಗಳಲ್ಲಿ ನಡೆಸುತ್ತಾರೆ. ಶಿಕ್ಷಕರ ದಿನಾಚರಣೆಯಂದು ವಿದ್ಯಾರ್ಥಿಗಳು ತಮ್ಮ ನೆಚ್ಚಿನ ಶಿಕ್ಷಕರಿಗೆ ಉಡುಗೊರೆಗಳನ್ನು ಸಹ ತರುತ್ತಾರೆ. ಆಚರಣೆಯ ಮುಖ್ಯ ಉದ್ದೇಶವೆಂದರೆ ಶಿಕ್ಷಕರಿಗೆ ಸ್ವಲ್ಪ ಕೃತಜ್ಞತೆಯನ್ನು ತೋರಿಸುವುದು, ಅದರೆ ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವಲ್ಲಿ ಅವರು ತೋರುವ ಅಪಾರ ಪ್ರಯತ್ನಗಳು ಮತ್ತು ಸಮರ್ಪಣೆಗಾಗಿ.

ಶಾಲಾ–ಕಾಲೇಜುಗಳಲ್ಲಿ ಆಚರಿಸುವ ಆಚರಣೆಗಳು ಮತ್ತು ಹಬ್ಬಗಳ ಜೊತೆಗೆ, ದೇಶವು ಶಿಕ್ಷಕರಿಗೆ ರಾಷ್ಟ್ರೀಯ ಪ್ರಶಸ್ತಿಯನ್ನು ನೀಡುವ ಮೂಲಕ ಈ ದಿನವನ್ನು ಆಚರಿಸುತ್ತದೆ. ಈ ಪ್ರಶಸ್ತಿಗಳನ್ನು ಪ್ರಾಥಮಿಕ ಶಾಲೆಗಳು ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಕೆಲಸ ಮಾಡುವ ಅಸಾಧಾರಣ ಶಿಕ್ಷಕರಿಗೆ ಅವರ ಅತ್ಯುತ್ತಮ ಕೆಲಸಕ್ಕಾಗಿ ಭಾರತದ ರಾಷ್ಟ್ರಪತಿಗಳಿಂದ ನೀಡಲಾಗುತ್ತದೆ. ಇದೇ ರೀತಿಯಾಗಿ, ವಿಶ್ವವಿದ್ಯಾನಿಲಯದ ಶಿಕ್ಷಕರ ಪ್ರಯತ್ನಗಳನ್ನು ಅವರಿಗೆ ಪ್ರೇರಿತ ಶಿಕ್ಷಕರ ಗುರುತಿಸುವಿಕೆಯನ್ನು ಪ್ರಸ್ತುತಪಡಿಸುವ ಮೂಲಕ ಅಂಗೀಕರಿಸಿ ಪ್ರಶಸ್ತಿಯು ಪದಕ, ಪ್ರಮಾಣಪತ್ರ ಮತ್ತು ನಿರ್ದಿಷ್ಟ ಮೊತ್ತದ ನಗದು ಬಹುಮಾನವನ್ನು ನೀಡಿ ಗೌರವಿಸಲಾಗುವುದು.

# AI- ಕ್ರಾಂತಿ: ಭಾರತದಲ್ಲಿ ಸಹಕಾರಿ ಬ್ಯಾಂಕಿಂಗ್‌ನ ಭವಿಷ್ಯವನ್ನು ರೂಪಿಸುವುದು

– ಶ್ರೀ ವಿಕ್ರಾಂತ ಪಾಟೀಲ, ಸಿವಿಲ್ ಇಂಜೀನಿಯರ್ ಹಾಗೂ ಕುಶಾಲ್, ಜಿಲ್ಲಾ ಸಂಯೋಜಕ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು

**ಪರಿಚಯ**

ಡಿಜಿಟಲ್ ಕ್ರಾಂತಿಯ ಮಧ್ಯೆ, ಸಹಕಾರಿ ಬ್ಯಾಂಕಿಂಗ್ ತನ್ನನ್ನು ತಾನು ನಿರ್ಣಾಯಕ ಹಂತದಲ್ಲಿ ಕಂಡುಕೊಳ್ಳುತ್ತದೆ, ಕೃತಕ ಬುದ್ಧಿಮತ್ತೆಯ (AI) ಶಕ್ತಿಯನ್ನು ಅಳವಡಿಸಿಕೊಳ್ಳಲು ಸಿದ್ಧವಾಗಿದೆ. ಸಹಕಾರಿ ಬ್ಯಾಂಕುಗಳು ಪ್ರಮುಖ ಪಾತ್ರ ವಹಿಸುವ ಭಾರತದ ಸಂದರ್ಭದಲ್ಲಿ, ಈ ಲೇಖನವು AI ಮತ್ತು ಸಹಕಾರಿ ಬ್ಯಾಂಕಿಂಗ್ ಒಮ್ಮುಖವಾಗುವ ಭವಿಷ್ಯದ ಉತ್ತೇಜಕ ನಿರೀಕ್ಷೆಯನ್ನು ಪರಿಶೋಧಿಸುತ್ತದೆ, ಗ್ರಾಹಕರ ಅನುಭವಗಳನ್ನು ಮರು ವ್ಯಾಖ್ಯಾನಿಸುವುದು, ಅಪಾಯ ನಿರ್ವಹಣೆ, ಕಾರ್ಯಾಚರಣೆಯ ದಕ್ಷತೆ ಮತ್ತು ಆರ್ಥಿಕ ಸೇರ್ಪಡೆ.

**1. ಗ್ರಾಹಕ ಅನುಭವ: AI ನೊಂದಿಗೆ ತೊಡಗಿಸಿಕೊಳ್ಳುವಿಕೆಯನ್ನು ಹೆಚ್ಚಿಸುವುದು**

24/7 ಲಭ್ಯವಿರುವ ವರ್ಚುವಲ್ ಸಹಾಯಕರೊಂದಿಗೆ ಸಂವಹನ ನಡೆಸುವುದನ್ನು ಕಲ್ಪಿಸಿಕೊಳ್ಳಿ, ನಿಮ್ಮ ಪ್ರಶ್ನೆಗಳನ್ನು ಬೆರಗುಗೊಳಿಸುವ 95% ನಿಖರತೆಯ ದರದೊಂದಿಗೆ ಪರಿಹರಿಸಿ. ಈ AI-ಚಾಲಿತ ನಿಶ್ಚಿತಾರ್ಥವು ಗ್ರಾಹಕರ ತೃಪ್ತಿಯಲ್ಲಿ ಗಣನೀಯ 40% ಹೆಚ್ಚಳಕ್ಕೆ ಕಾರಣವಾಗುತ್ತದೆ. ವೈಯಕ್ತೀಕರಿಸಿದ ಏಐ ಗ್ರಾಹಕರ ಸಂವಹನಗಳಿಗೆ ನಿಷ್ಠೆ ಮತ್ತು ವಿಶ್ವಾಸವನ್ನು ಉತ್ತೇಜಿಸುತ್ತದೆ, ಸಹಕಾರಿ ಬ್ಯಾಂಕಿಂಗ್ ಅನುಭವವನ್ನು ಹೆಚ್ಚಿಸುತ್ತದೆ.

**2. ಡೇಟಾ–ಚಾಲಿತ ನಿರ್ಧಾರ ತಯಾರಿಕೆ: AI ನ ನಿಖರವಾದ ಮುನ್ಸೂಚಕ ಶಕ್ತಿ**

ಡೇಟಾದ ನಿಜವಾದ ಸಾಮರ್ಥ್ಯವು ಅದರ ವಿಶ್ಲೇಷಣೆಯಲ್ಲಿದೆ. AI ಅಲ್ಗಾರಿದಮ್‌ಗಳು ಪ್ರಭಾವಶಾಲಿ 85% ನಿಖರತೆಯ ದರದೊಂದಿಗೆ ಗ್ರಾಹಕರ ಆದ್ಯತೆಗಳನ್ನು ಊಹಿಸುತ್ತವೆ. ಇದು ಸಹಕಾರಿ ಬ್ಯಾಂಕುಗಳನ್ನು ಕ್ರಿಯಾಶೀಲ ಒಳನೋಟಗಳೊಂದಿಗೆ ಸಜ್ಜುಗೊಳಿಸುತ್ತದೆ, ಇದರ ಪರಿಣಾಮವಾಗಿ ಅಡ್ಡ–ಮಾರಾಟದ ಪರಿಣಾಮಕಾರಿತ್ವದಲ್ಲಿ ಗಮನಾರ್ಹವಾದ 20% ಬೆಳವಣಿಗೆಯಾಗುತ್ತದೆ, ಕಾರ್ಯತಂತ್ರದ ನಿರ್ಧಾರಗಳನ್ನು ರೂಪಿಸುವಲ್ಲಿ AI ನ ಪ್ರಮುಖ ಪಾತ್ರವನ್ನು ಪ್ರದರ್ಶಿಸುತ್ತದೆ.

**3. ಅಪಾಯ ನಿರ್ವಹಣೆ ಮತ್ತು ವಂಚನೆ ತಡೆಗಟ್ಟುವಿಕೆ: AI ರ ರಕ್ಷಣಾತ್ಮಕ ಶೀಲ್ಡ್**

AI ಜಾಗರೂಕತೆಯಿಂದ ವಹಿವಾಟುಗಳನ್ನು ಮೇಲ್ವಿಚಾರಣೆ ಮಾಡುತ್ತವೆ, 98%ನ ಪ್ರಭಾವಶಾಲಿ ನಿಖರತೆಯ ದರದೊಂದಿಗೆ ವೈಪರೀತ್ಯಗಳನ್ನು ತ್ವರಿತವಾಗಿ ಪತ್ತೆ ಮಾಡುತ್ತವೆ. ಈ ಪೂರ್ವಭಾವಿ ಮೇಲ್ವಿಚಾರಣೆಯು ವಂಚನೆಯ ಚಟುವಟಿಕೆಗಳನ್ನು ಗಮನಾರ್ಹವಾಗಿ ಮೊಟಕುಗೊಳಿಸುತ್ತದೆ, ವಾರ್ಷಿಕವಾಗಿ 20 ಕೋಟಿ ವರೆಗೆ ಉಳಿಸುತ್ತದೆ, ಬ್ಯಾಂಕ್ ಮತ್ತು ಅದರ ಗ್ರಾಹಕರನ್ನು ರಕ್ಷಿಸುತ್ತದೆ.

**4. ಸುವ್ಯವಸ್ಥಿತ ಕಾರ್ಯಾಚರಣೆಗಳು**

AI-ಚಾಲಿತ ಯಾಂತ್ರೀಕೃತಗೊಂಡವು ದಿನನಿತ್ಯದ ಕಾರ್ಯಗಳ ಹೊರೆಯನ್ನು ಕಡಿಮೆ ಮಾಡುತ್ತದೆ. ಈ ರೂಪಾಂತರದ ಬದಲಾವಣೆಯು ಹಸ್ತಚಾಲಿತ ದೋಷಗಳನ್ನು ಗಮನಾರ್ಹವಾಗಿ 75% ರಷ್ಟು ಕಡಿಮೆ ಮಾಡುತ್ತದೆ, ವಿಶೇಷವಾಗಿ ಡೇಟಾ ಪ್ರವೇಶ ಮತ್ತು ಅನುಸರಣೆ ಪರಿಶೀಲನೆಗಳಂತಹ ಕಾರ್ಯಗಳಲ್ಲಿ. ಪರಿಣಾಮವಾಗಿ, ಕಾರ್ಯಾಚರಣೆಯ ವೆಚ್ಚಗಳು 30% ರಷ್ಟು ಕಡಿಮೆಯಾಗುತ್ತವೆ, ಮೌಲ್ಯವರ್ಧಿತ ಸೇವೆಗಳಿಗೆ ಸಂಪನ್ಮೂಲಗಳನ್ನು ಮುಕ್ತಗೊಳಿಸುತ್ತವೆ.

**5. ಅನುಗುಣವಾದ ಹಣಕಾಸು ಉತ್ಪನ್ನಗಳು ಮತ್ತು ಸೇವೆಗಳು: ಗ್ರ್ಯಾಂಡ್ ಸ್ಕೇಲ್‌ನಲ್ಲಿ ವೈಯಕ್ತೀಕರಣ**

AI ಮತ್ತು ದತ್ತಾಂಶ ವಿಶ್ಲೇಷಣೆಯ ಸಮ್ಮಿಳನವು ಸಹಕಾರಿ ಬ್ಯಾಂಕುಗಳಿಗೆ ತಕ್ಕಂತೆ ತಯಾರಿಸಿದ ಹಣಕಾಸು ಉತ್ಪನ್ನಗಳನ್ನು ಕ್ಯೂರೇಟ್ ಮಾಡಲು ಅಧಿಕಾರ ನೀಡುತ್ತದೆ. ಈ ವೈಯಕ್ತೀಕರಿಸಿದ ವಿಧಾನವು ಗ್ರಾಹಕರ ನಿಷ್ಠೆಯಲ್ಲಿ 15% ಹೆಚ್ಚಳಕ್ಕೆ ಕಾರಣವಾಗುತ್ತದೆ, 80% ಗ್ರಾಹಕರು ತಮ್ಮ ಅನನ್ಯ ಅವಶ್ಯಕತೆಗಳಿಗೆ ಅನುಗುಣವಾಗಿ ಕೊಡುಗೆಗಳೊಂದಿಗೆ ತೃಪ್ತಿಯನ್ನು ವ್ಯಕ್ತಪಡಿಸುತ್ತಾರೆ.

**6. ನಿಯಂತ್ರಕ ಅನುಸರಣೆ: ಸಮಗ್ರತೆಯ ರಕ್ಷಕ ಆಗಿ ಏಐ**

ನಿಯಮಗಳ ಜಟಿಲತೆಗಳನ್ನು ನ್ಯಾವಿಗೇಟ್ ಮಾಡುವುದು ಒಂದು ಸವಾಲಾಗಿದೆ. AI ಅಲ್ಗಾರಿದಮ್‌ಗಳು ಪ್ರಭಾವಶಾಲಿ 99% ಅನುಸರಣೆ ದರವನ್ನು ಖಚಿತಪಡಿಸುತ್ತದೆ, ಬದಲಾವಣೆಗಳಿಗೆ ತ್ವರಿತವಾಗಿ ಹೊಂದಿಕೊಳ್ಳುತ್ತದೆ ಮತ್ತು ಕಾನೂನು ಗಡಿಗಳಿಗೆ ಅಚಲವಾದ ಅನುಸರಣೆಯನ್ನು ಖಾತರಿಪಡಿಸುತ್ತದೆ.

**7. ಹಣಕಾಸಿನ ಸೇವೆಗಳಿಗೆ ಪ್ರವೇಶವನ್ನು ವಿಸ್ತರಿಸುವುದು: ತಲುಪಲಾಗದವರನ್ನು ತಲುಪುವುದು**


AI-ಚಾಲಿತ ಮೊಬೈಲ್ ಬ್ಯಾಂಕಿಂಗ್ ಅಪ್ಲಿಕೇಶನ್‌ಗಳು ಭಾರತದ ದೂರದ ಮೂಲೆಗಳಿಗೆ ಹಣಕಾಸು ಸೇವೆಗಳನ್ನು ವಿಸ್ತರಿಸುತ್ತವೆ. ಇದು ಹಿಂದುಳಿದ ಪ್ರದೇಶಗಳಲ್ಲಿ ಬ್ಯಾಂಕಿಂಗ್ ನುಗ್ಗುವಿಕೆಯಲ್ಲಿ 25% ಹೆಚ್ಚಳಕ್ಕೆ ಅನುವಾದಿಸುತ್ತದೆ, ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುತ್ತದೆ ಮತ್ತು ಆರ್ಥಿಕ ಸೇರ್ಪಡೆಯನ್ನು ವಿಸ್ತರಿಸುತ್ತದೆ.

**ಉಪಸಂಹಾರ**

ಸಹಕಾರಿ ಬ್ಯಾಂಕಿಂಗ್‌ನಲ್ಲಿ AI ಯ ಆಗಮನವು ದೂರದ ದೃಷ್ಟಿಯಲ್ಲ; ಇದು ಪರಿಮಾಣಾತ್ಮಕ ರೂಪಾಂತರವಾಗಿದೆ. ಗ್ರಾಹಕರ ತೃಪ್ತಿಯನ್ನು ವರ್ಧಿಸುವ ಮೂಲಕ ಕಾರ್ಯಾಚರಣೆಯ ದಕ್ಷತೆಯನ್ನು ಹೆಚ್ಚಿಸುವವರೆಗೆ, ಪರಿಣಾಮವು ಸ್ಪಷ್ಟವಾಗಿರುತ್ತದೆ. ಭಾರತದಲ್ಲಿನ ಸಹಕಾರಿ ಬ್ಯಾಂಕುಗಳು ಈ AI–ಪ್ರೇರಿತ ಪ್ರಯಾಣವನ್ನು ಪ್ರಾರಂಭಿಸಿದಾಗ, ನಾವೀನ್ಯತೆ, ಸೇರ್ಪಡೆ. AI–ಸಂಯೋಜಿತ ಸಹಕಾರಿ ಬ್ಯಾಂಕಿಂಗ್‌ನ ಯುಗವು ಆಗಮಿಸಿದೆ, ಸಂಪ್ರದಾಯ ಮತ್ತು ತಂತ್ರಜ್ಞಾನವು ಸಾಮರಸ್ಯದಿಂದ ಅಭಿವೃದ್ಧಿ ಹೊಂದುವ ಭವಿಷ್ಯವನ್ನು ಭರವಸೆ ನೀಡುತ್ತದೆ.

# ಸ್ವಾತಂತ್ರ ದೇಶದಲ್ಲಿ 13 ತಿಂಗಳ ನಂತರ ಸ್ವಾತಂತ್ರ ಪಡೆದ ಈಗಿನ ಕಲ್ಯಾಣ ಕರ್ನಾಟಕ (ಹೈದ್ರಬಾದ ಪ್ರಾಂತ)

– ಶ್ರೀ ಸೂರ್ಯಕಾಂತ ರ‍್ಯಾಕಲೆ, ಪ್ರಾಂತೀಯ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ., ಕಲಬುರಗಿ




15 ಅಗಸ್ಟ 1947 ರಂದು ಇಡಿ ಭಾರತ ದೇಶ ಸ್ವಾತಂತ್ರದ ವಿಜಯತ್ಸೊವದಲ್ಲಿ ಕಿರಿಯರು ಹಿರಿಯರು, ಬಡವ ಬಲಿದ, ಜಾತಿ ಭೇದ ಮರೆತು ಭಾರತೀಯರು ಪಾಲಗೊಂಡಿದ್ದರೆ ಭಾರತದ ಅವಿಭಾಜ್ಯ ಅಂಗವಾದ ಹೈದ್ರಬಾದ ನಿಜಾಮನ ಹೈದ್ರಬಾದ ಕರ್ನಾಟಕ ಇಗಿನ ಕಲ್ಯಾಣ ಕರ್ನಾಟಕದ ಭಾರತೀಯರಿಗೆ ಸ್ವಾತಂತ್ರ್ಯದ ವಿಜಯತ್ಸೋವದಲ್ಲಿ ಪಾಲಗೊಳ್ಳಲು ನಿರ್ಬಂಧವಿದ್ದರು ಕಲ್ಯಾಣ ಕನಾಟಕದ ಹಲವು ಕಡೆ ನಿಜಾಮನ ದೌರ್ಜನ್ಯದ ಮದ್ಯ ಹಲವು ಕಡೆ ತಿರಂಗ ಧ್ವಜ ಹಾರಿಸಿ ಜೈಲಿಗೆ ಹೊಗಬೇಕಾಯಿತ್ತು. ಭಾರತದ ಸ್ವಾತಂತ್ರ್ಯ ದೇಶದಲ್ಲಿ ತ್ರಿವಣ ಧ್ವಜ ಹಾರಿಸಿ ಜೈಲಿಗೆ ಹೊಗಿರುವುದು ನಮಗೆಲ್ಲ ಅಚ್ಚರಿಯಾದರು ಸಹ ಕಲ್ಯಾಣ ಕರ್ನಾಟಕದ ಭಾರತೀಯರಿಗೆ ಸ್ವಾಂತಂತ್ರ್ಯ ಬಂದಿದು ದೇಶದ ಸ್ವಾತಂತ್ರ್ಯ ಪಡೆದ ಒಂದು ವರ್ಷ ಒಂದು ತಿಂಗಳ ಎರಡು ದಿನಗಳ ನಂತರ ಬ್ರಿಟಿಷ–ರಿಂದ ಪಡೆದ ಸ್ವಾತಂತ್ರ್ಯದ ನಂತರ ಕಲ್ಯಾಣ ಭಾಗದ ಜನರು ನಿಜಾಮನವಿರುದ್ದ ಹೊರಾಡಿ ಪಡೆದ ಹೈದ್ರಬಾದ ವಿಮೋಚನೆಗೆ ಈ ವರ್ಷ ಅಮೃತಮೊಹತ್ಸವ ಸಂಭ್ರಮ.

ಭಾರತ ಸ್ವತಂತ್ರವಾದಾಗ ನಮ್ಮ ದೇಶದಲ್ಲಿ 552 ಸಂಸ್ಥಾನಗಳಿದ್ದವು. ಬ್ರಿಟಿಷರು ನಮಗೆ ಸ್ವಾತಂತ್ರ್ಯ ನೀಡುವುದರ ಜೋತೆಗೆ ದೇಶ ವಿಭಜನೆ ಮಾಡಿದಲ್ಲದೆ. ಈ ಸಂಸ್ಥಾನಗಳಿಗೆ ಸ್ವಾತಂತ್ರ್ಯವಾಗಿ ಉಳಿಯುವ ಅವಕಾಶ ನೀಡಿದರು. ಆದರೆ ಉಕ್ಕಿನ ಮನುಷ್ಯ ಸರದಾರ ವಲ್ಲಭಬಾಯಿ ಪಟೇಲರ ದೂರದೃಷ್ಠಿ, ಧೃಡಮನಸ್ಸು ಮತ್ತು ಸಂಸ್ಥಾನಿಕರಲ್ಲಿನ ರಾಷ್ಟ್ರಭಕ್ತಿಯ ಕಾರಣದಿಂದ (5 ಸಂಸ್ಥಾನಗಳನ್ನು ಹೊರತ್ತುಪಡಿಸಿ) ಸಂಸ್ಥಾನಗಳು ಭಾರತದೊಂದಿಗೆ ವಿಲೀನಗೊಂಡವು, ಕಾಶ್ಮೀರ, ಭೂಪಾಲ, ಜುನಾಗಡ, ತಿರುವಾಂಕೂರ ಮತ್ತು ಹೈದರಬಾದ ವಿಲೀನಕ್ಕೆ ಒಪ್ಪಲಿಲ್ಲ.

ಭೂಪಾಲ್, ಜುನಾಗಢ ಮತ್ತು ತಿರುವಾಂಕೂರು ಸಂಸ್ಥಾನಗಳ ಬಹುಸಂಖ್ಯಾತ ಹಿಂದುಗಳ ವಿರೋಧದಿಂದಾಗಿ ಅಲ್ಲಿನ ಸಂಸ್ಥಾನಿಕರು ಅನಿವಾರ್ಯವಾಗಿ ವೀಲಿನ ಮಾಡಬೇಕಾಯಿತ್ತು. ಜುನಾಗಡವನ್ನು ಪಾಕಿಸ್ತಾನಕ್ಕೆ ಸೇರಿಸುವ ನವಾಬನ ಹುನ್ನಾರ ವಿಫಲವಾಗಿ, ನವಾಬ ಪಾಕಿಸ್ತಾನಕ್ಕೆ ಪಲಾಯಣ ಮಾಡಿದ. ಕಾಶ್ಮೀರ ವಿಲಿನಕ್ಕಾಗಿ ರಾಜಹರಿಸಿಂಗರನ್ನು ಮನವೊಲಿಸಿ ವಿಲಿನಗೊಳಿಸಲಾಯಿತ್ತು.

ಆದರೆ ಹೈದ್ರಾಬಾದ್ ವಿಲೀನ್ ಪ್ರಕ್ರಿಯೆ ಮಾತ್ರ ಅಷ್ಟು ಸುಲಭವಾಗಿರಲಿಲ್ಲ. ಹೈದರಬಾದ್ ಸಂಸ್ಥಾನವು ಭಾರತದ ಅತಿದೊಡ್ಡ ಸಂಸ್ಥಾನವಾಗಿತ್ತು. ಅದರ ವಿಸ್ತೀರ್ಣ 82,313 ಚದರ ಮೈಲು ಆಗಿತ್ತು. ಈಗಿನ ತೆಲಂಗಾಣದ ಹೈದರಬಾದ, ವಾರಂಗಲ್, ಕರಿಂನಗರ, ಆದಿಲಾಬಾದ್, ನಿಜಾಮಾಬಾದ್ ಮತ್ತು ನಲ್ಗೊಂಡಾ ಜಿಲ್ಲೆಗಳು. ಕಲ್ಯಾಣ ಕರ್ನಾಟಕ (ಹೈದ್ರಬಾದ ಕರ್ನಾಟಕ) ದ ಬೀದರ, ಕಲಬುರಗಿ, ಯಾದಗಿರಿ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳು, ಮಹಾರಾಷ್ಟ್ರದ ಮರಾಠವಾಡಾದ ಜಿಲ್ಲೆಗಳಾದ ನಾಂದೇಡ, ಫರಭಣಿ, ಔರಂಗಬಾದ್, ಬೀಡ್ ಮತ್ತು ಉಸ್ಮಾನಾಬಾದ ಹೊಂದಿತ್ತು. 1942ರ ಜನಗಣತಿಯ ಪ್ರಕಾರ 1,63,38,534 ಜನಸಂಖ್ಯೆ ಹೊಂದಿ. ಇಲ್ಲಿ ಶೇ.86 ಪ್ರತಿಶತ ಹಿಂದುಗಳು, 11 ಪ್ರತಿಶತ ಮುಸಲ್ಮಾನರು, ಉಳಿದ ಮೂರು ಪ್ರತಿಶತ ಉಳಿದವರು ಇದ್ದರು. ಈ ಸಂಸ್ಥಾನದಲ್ಲಿ ಮೂರು ಭಾಷೆಗಳಾದ ಕನ್ನಡ, ತೆಲುಗು ಮತ್ತು ಮರಾಠಿ ಭಾಷಾ ಪ್ರದೇಶಗಳಿದ್ದವು. ಈ ಮೂರು ಭಾಷೆ ಮಾತನಾಡುವವರು ಬಹುಸಂಖ್ಯಾತ ಹೊಂದಿದ್ದರು ರಾಜ್ಯ ಭಾಷೆ ಉರ್ದು ಆಗಿದ್ದು ಅದಕ್ಕೆ ಪ್ರಾಧಾನ್ಯತೆಯನ್ನು ನೀಡಲಾಗಿತ್ತು.

ಹೈದರಾಬಾದಿನ ಕೊನೆಯ ನಿಜಾಮ ಮೀರ್ ಉಸ್ಮಾನ್ ಅಲಿಖಾನ ಬ್ರಿಟಿಷರ ಸಹಾಯದಿಂದ ಪಟ್ಟಕ್ಕೇರಿದ, ಈತ ಬ್ರಿಟಿಷರ ನಂಬಿಕಸ್ತ ಸೇವಕನಾಗಿದ್ದನ್ನು ಸಂಪತ್ತು ಮತ್ತು ಅಧಿಕಾರದ ವಿಪರೀತ ಮೋಹವಿತ್ತು. ಇವನನ್ನು ಜಿಲ್ಲುಲ್ಲಾಹ ಅಥವಾ ಜಿಲ್ಲೆ ಸುಭಾನಿ ಎಂದು ಜನರು ಸಂಭೋಧಿಸುತಿದ್ದರು. ನಿಜಾಮನಿಗೆ ಶುಭವನ್ನು ಕೋರುವ ಪ್ರಾರ್ಥನೆ ಗೀತೆ ಎಲ್ಲಾ ಶಾಲಾ ಕಾಲೇಜುಗಳಲ್ಲಿ ಕಡ್ಡಾಯವಾಗಿ ಹಾಡಬೇಕಿತ್ತು. ಹಾಡಿನ ತಾತ್ಪರ್ಯ ಹಿಗೀತ್ತು: "ನಿಜಾಮ್ ಹಾಗೂ ಅವರ ಮನೆತನದವರಿಗೆ ಅಲ್ಲಾಹ ಒಳ್ಳೆಯದು ಮಾಡಲಿ, ಹೈದ್ರಾಬಾದನಲ್ಲಿ ಅಸಫಜಾ ರಾಜರು

ಸೂರ್ಯ ಚಂದ್ರರಿರುವರೆಗೂ ಶಾಶ್ವತವಾಗಿರಲಿ, ಅಲ್ಲಾಹ ನಿಮಗೆ ಯಶ್ವರ್ಯ-ಸಂಪತ್ತು ಕರುಣಿಸಲಿ, ಪ್ರಜೆಗಳು ನಿಮ್ಮ ಹುಟ್ಟುಹಬ್ಬವನ್ನು ಆಚರಿಸುವಂತಾಗಲಿ" ಈ ರೀತಿ ಒಂದು ಇಸ್ಲಾಮಿ ರಾಜ್ಯವನ್ನಾಗಿಸಬೇಕೆಂಬ ಮಾಹಕನಸ್ಸು ಕಂಡಿದ್ದ, ಮುಸ್ಲಿಂ ಜಗತ್ತಿನ ಏಕಮಾತ್ರ ನಾಯಕನಾಗುವ ಆಕಾಂಕ್ಷೆ ಹೊಂದಿದ್ದ.

ನಿಜಾಮ ರಾಜ್ಯದಲ್ಲಿ ಮುಸಲ್ಮಾನರ ದಬ್ಬಾಳಿಕೆ ಇತ್ತು. ಸರಕಾರಿ ನೌಕರಿಗಳಲ್ಲಿ ಮುಸಲ್ಮಾನರ ಪ್ರಾಬಲ್ಯ ಇತ್ತು. ಉಸ್ಮಾನಿಯಾ ವಿಶ್ವವಿದ್ಯಾಲಯ ಸ್ಥಾಪನೆಯಾಯಿತ್ತು ಆದರೆ ಇದು ಪೂರ್ಣ ಇಸ್ಲಾಮಿನ ಪ್ರತೀಕವಾಗಿತ್ತು. ಒಟ್ಟಾರೆ ನಿಜಾಮನ ಆಡಳಿತ ಎಂದರೆ ಭ್ರಷ್ಟಾಚಾರ, ಸ್ವಜನಪಕ್ಷಪಾತ್ ಮತ್ತು ಅದಕ್ಷತೆಯಿಂದ ಕೂಡಿತ್ತು.

ದೇಶದಲ್ಲೆಡೆ ಸ್ವಾತಂತ್ರ್ಯದ ಕಿಚ್ಚು ಹೆಚ್ಚಾಗಿದ್ದರಿಂದ ಹಾಗೂ ಹಿಂದುಗಳ ಒತ್ತಾಯದಿಂದ ನಿಜಾಮನು 1946 ರಲ್ಲಿ ಆಡಳಿತದಲ್ಲಿ ಸುಧಾರಣೆಗಾಗಿ, ಜನಪ್ರತಿನಿಧಿಗಳ ಶಾಸಕಾಂಗದ ರಚನೆ ಮಾಡಿದ. ಆದರೆ ಇದರಲ್ಲಿ ಹಿಂದುಗಳು ಮತ್ತು ಮುಸಲ್ಮಾನರಿಗೂ ಸಮನಾದ ಪ್ರಾತಿನಿಧ್ಯವಿತ್ತಾದರು ಹೆಸರಿಗೆ ಮಾತ್ರ ಎಲ್ಲವು ನಿಜಾಮನ ಆಡಳಿತದ ಸ್ತಂಭಗಳಾದ ಮಜಲಿಸೆ ಇತ್ತೆಹಾದುಲ್ ಮುಸ್ಲಮೀನ್ ಸಂಸ್ಥೆ, ಇಸ್ಲಾಮಿ ರಾಜ್ಯ, ಕಾಸಿಮ್ ರಜ್ವಿ ಮತ್ತು ರಜಾಕಾರರ ಪಾರುಪತ್ಯ.

ನಿಜಾಮ ಸಂಸ್ಥಾನದಲ್ಲಿ 1926 ರಲ್ಲಿ ಅಸ್ತಿತ್ವಕ್ಕೆ ಬಂದ ಮಜಲೀಸ್ ಇತ್ಯಾ ಹಾದುಲ್ ಮುಸ್ಲಿಂ ಎಂಬ ಸಂಸ್ಥೆ ಮೊಮ್ಮದ್ ನವಾಜ್ ಖಾನ್ ಸ್ಥಾಪಿಸಿದ ನಿಜಾಮನ ಪರವಾಗಿ ಮುಸ್ಲಿಂ ಸಂಘಟನೆ ಮೂಲಕ ರಾಜ್ಯದಲ್ಲಿ ಹಿಂದೂಗಳನ್ನು ಅಲ್ಪಸಂಖ್ಯಾತರಾಗಿ ಮಾಡುವುದೇ ಈ ಸಂಸ್ಥೆಯ ಉದ್ದೇಶ ಆಗಿತ್ತು ಹೈದರಾಬಾದ್ ಸಂಸ್ಥಾನವು ಸ್ವತಂತ್ರ ಇಸ್ಲಾಮಿ ದೇಶ ಎಂದು ಘೋಷಿಸುವಂತೆ ಒತ್ತಾಯ ಮಾಡುತ್ತಿತ್ತು, ಬಹದ್ದೂರ್ ಜಂಗಲಿ ಸಂಸ್ಥೆಯ ನೇತೃತ್ವ ವಹಿಸಿಕೊಂಡು ಬಲತ್ಕಾರದಿಂದ ಯೋಜನೆಗಳನ್ನು ಜಾರಿಗೆ ತರಲು ಎಲ್ಲಾ ಮುಸಲ್ಮಾನರು ಒಂದಾಗಬೇಕೆಂದು ಕರೆ ನೀಡಿದನು ಇಂಡಿಯನ್ ಮುಸ್ಲಿಂ ಲೀಗ್ ಜೊತೆ ಸದಾ ಸಂಪರ್ಕದಲ್ಲಿದ್ದ ಇವನ ಮನಸ್ಸಿನಲ್ಲಿ ಭಾರತವನ್ನು ಮುಸ್ಲಿಂ ರಾಷ್ಟ್ರ ಮಾಡಬೇಕೆಂದು ಪ್ರಬಲವಾಗಿ ಪ್ರತಿ ವಾದಿಸುತ್ತಿದ್ದನು ಇದೆ ಎಂಐಎಂ ಸಂಸ್ಥೆ ಮುಂದೆ ರಜಾಕರ ನೇತೃತ್ವವನ್ನು ವಹಿಸಿಕೊಂಡಿದ್ದ ಮತಾಂದ ರಜಾಕಾರ್ ಖಾಸಿಂರಜ್ವಿ ಇಡೀ ಭಾರತ ಮುಸ್ಲಿಂ ಆದಿಪತ್ಯಕ್ಕೆ ಒಳಪಡಬೇಕು ಅದಕ್ಕಾಗಿಯೇ ದೇವರು ನಮ್ಮನ್ನು ನೇಮಿಸಿದ್ದಾನೆ ಎಂದು ಕಲ್ಪಿಸಿಕೊಂಡಿದ್ದ ಕೆಂಪು ಕೋಟೆಯ ಮೇಲೆ ಅಸಫಿಯಾ ಧ್ವಜ ಹಾರಬೇಕೆಂದು ಮತ್ತು ಬಂಗಾಳೋಪಾಸಾಗರದ ನೀರು ನಿಜಮಾನ ಪಾದ ತೊಳೆಯಬೇಕೆಂದು ತನ್ನ ಪಡೆಗಳಿಗೆ ಬೋಧಿಸಿ ಹುರಿದುಂಬಿಸುತ್ತ ಗುಲಾಮರನಾಗಿ ಮಾಡುವುದು ಮುಸಲ್ಮಾನರ ದೈವಿ ಹಕ್ಕು. ಹಿಂದು ಅನಾಗರಿಕ ಆದುದರಿಂದ ಆತ ಕಲ್ಲುಗಳನ್ನು ಮತ್ತು ಮಂಗಗಳನ್ನು ಪೂಜಿಸುತ್ತಾನೆ, ಮುಸಲ್ಮಾನ ಇಡೀ ಜಗತ್ತು ಸಮರ್ಥವಾಗಿ ಎದುರಿಸಬಲ್ಲ ಇದು ಅವನ ವಿಚಾರಧಾರೆಯಾಗಿತ್ತು ಈ ರಜಾಕರ ಕ್ರೌರ್ಯಕ್ಕೆ ನಿಜಮಾನ ಕುಮ್ಮಕ್ಕುವಿತ್ತು. ಸ್ವಾತಂತ್ರ ಹೋರಾಟಗಾರರ ಹೋರಾಟಕ್ಕೆ ಮಣಿದು ಬ್ರಿಟಿಷರು ಭಾರತ ಬಿಟ್ಟು ತೊಲಗಿದರು 1947 ಆಗಸ್ಟ್ 15 ರಂದು ಭಾರತ ಸ್ವತಂತ್ರವಾಯಿತು. ಆದರೆ ಹೈದರಾಬಾದನ ನಿಜಾಮ ಭಾರತದೊಂದಿಗೆ ವಿಲಿನಗೊಳ್ಳದೆ ಹೈದ್ರಬಾದ ಸ್ವತಂತ್ರ ದೇಶ ಎಂದು ಘೋಷಿಸಿಕೊಂಡ. ದೇಶದಲ್ಲೆಡೆ ಭಾರತಿಯರು ತ್ರೀವಣ ಧ್ವಜ, ವಂದೆ ಮಾತರಂ ಹಾಡಿ ವಿಜಯೋತ್ಸವದಲ್ಲಿ ಭಾಗಿಯಾಗಿದ್ದರೆ, ನಿಜಾಮ ಹೈದ್ರಬಾದ ಸಂಸ್ಥಾನದಲ್ಲಿ ತ್ರಿವಣ ಧ್ವಜ ಮತ್ತು ರಾಷ್ಟ್ರ ಗಾನ ವಂದೇ ಮಾತರಂ ಹೇಳುವುದನ್ನು ನಿಷೇಧಿಸಿದ, ಹಿಂದುಗಳನ್ನು ಹೆದರಿಸಿ ಅವರನ್ನು ಪ್ರಾಂತವನ್ನು ಬಿಟ್ಟು ಹೋಗುವಂತೆ ಮಾಡುವ ಪ್ರಯತ್ನ ರಜಕಾರ್ಯದಿಂದ ನಡೆಯಿತು ಇದಕ್ಕೆಲ್ಲಾ ನಿಜಮಾನ ಕೃಪಾಶೀರ್ವಾದವು ಇದ್ದುದ್ದರಿಂದ ಅಮಾನುಷ ಹತ್ಯೆಕಾಂಡೆಗಳು ಸರಣಿ ಅತ್ಯಾಚಾರಗಳು ನಡೆದವು. ಹೈದರಾಬಾದ್ ವಿಮೋಚನೆಗೆಗಾಗಿ ಸ್ವಾಮಿ ರಮಾನಂದ ತೀರ್ಥ ಅವರ ನೇತೃತ್ವದಲ್ಲಿ ಆರ್ಯ ಸಮಾಜ ಹಿಂದೂ ಮಹಾಸಭಾ ಮತ್ತು ರೈತ ದಳದ ದವರು ಹೈದರಾಬಾದ್ ವಿಮೋಚನೆಗಾಗಿ ಧುಮಿಕಿದರು, ಯುವಕರನ್ನು ಹುರಿದಿಂಬಿಸುವಗೊಸ್ಕರ ಶರಣಗೌಡ ಇನಾಮದಾರ್ ನೇತೃತ್ವದಲ್ಲಿ ಸಿಂಧಿಗಿಯಲ್ಲಿ ಕ್ಯಾಂಪು ಪ್ರಾರಂಭಿಸಿ ನೂರಾರು ಶಶಸ್ತ್ರ ಯುವ ಸೈನಿಕರನ್ನು ಸಿದ್ಧಪಡಿಸಿ ರಜಾಕರ ವಿರುದ್ಧ ಹೋರಾಡಲು ಸಿದ್ಧಗೊಂಡರು. ಇದೇ ರೀತಿಯಾಗಿ ಹೈದ್ರಬಾದ ಗಡಿಭಾಗಗಳಾದ ತಾಳಿಕೋಟೆ, ಮೈಂದರಿಗಿ, ವಾಗ್ದಾರಿ, ದುದ್‌ನಿ, ಗೌಡಗಾಂವ, ಕೆಸರ್ ಜಾವಳಗಾ, ಕಕ್ಕಳಮೇಲಿ, ಹಳ್ಳಿಕೂರ, ಮುಂಡರಗಿ ತೊಂಡಚೇರ, ಲಿಂಗದಳ್ಳಿ, ಮತ್ತು ಸೋಲಾಪುರದ ಪಾಂಜಪೋರಾಳ ಸೇರಿದಂತೆ ಹಲವು ಶಿಬಿರಗಳಿಂದ ರಜಾಕಾರರ ವಿರುದ್ಧ ಹೋರಾಡಲು ಸಾವಿರಾರು ಯುವಕರನ್ನು ಸಿದ್ಧಗೊಂಡು ವ್ಯವಸ್ಥಿತವಾಗಿ ನಿಜಾಮಿ ಮತ್ತು ರಜಾಕರ ವಿರುದ್ಧ ಹೋರಾಡಿದರು. ಒಬ್ಬರೇ ಇಬ್ಬರೇ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯ ವಿದ್ಯಾದರ ಗುರೂಜಿ, ವಿಶ್ವನಾಥ ರೆಡ್ಡಿ ಮುದ್ನಾಳ, ಜಗನ್ನಾಥ್‌ರಾವ್ ಚಂಡರಕಿ, ಚನ್ನಬಸಪ್ಪ ಕುಳಗೇರಿ, ಸುರಪುರದ ರಾಜ ವೆಂಕಟಪ್ಪ ನಾಯಕ್, ಮಹಾಗಾಂವದ ಚಂದ್ರಶೇಖರ್ ಪಾಟೀಲ್, ಕೋಳೂರು ಮಲ್ಲಪ್ಪ. ಬೀದರ ಜಿಲ್ಲೆಯ ರಾಮಚಂದ್ರ ವೀರಪ್ಪ, ಭೀಮಣ್ಣ ಖಂಡ್ರೆ, ಆರ್ ವಿ ಬಿಡಪ್ಪ, ಚಿಟಗುಪ್ಪದ ಹಕಿಕತರಾಯ, ಹಳ್ಳಖೆಡದ ವೀರ ಸೋಹದರರಾದ ಭಾಯಿ ಭನ್ಸಿಲಾಲ, ಬಾಯಿ ಶಾಮಲಾಲ್, ಗೋರ್ಟದ ಮಹದೇವಪ್ಪ ಡುಮ್ಮಣಿ, ಬ್ರಿಜ್‌ಪಾಲ ಸಿಂಗ್, ಮಾಣಿಕ್‌ರಾವ್ ಪುಲೆ, ರಾಯಚೂರು ಕೊಪ್ಪಳ ಜಿಲ್ಲೆಯ ವೀರನಗೌಡ ಹುಲಗುಂಜಿ, ರಾಮಕೃಷ್ಣ ಭಟ್, ಕಾಳಪ್ಪ ಎರಳ್ಳಿ, ವಿರೂಪಾಕ್ಷ, ವೆಂಕಟರಾವ್, ಸಿದ್ದಲಿಂಗಪ್ಪ ಹಾಗೂ ಮಹಿಳೆಯರಾದ ಅಕ್ಕಮಹಾದೇವಿ ರಟ್ಟಗಲ್ಲ,

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 42
Licensed to post without Prepayment License No. PMG BG/WPP-384/2023-2025.

ಸೋಗಮ್ಮ ಹಟ್ಟಿ ಗುರುಬಸವ್ವ ಸೇರಿದಂತೆ ಸಾವಿರಾರು ದೇಶಪ್ರೇಮಿಗಳು ನಿರಂತರ ಹೋರಾಟವನ್ನು ಹಾಗೂ ರಜಾಕಾರರ ದೌರ್ಜನ್ಯವನ್ನು ತಡೆಗಟ್ಟಿದರು ಅಲ್ಲದೆ ಬೀದರ್ ಜಿಲ್ಲೆಯ ಗೋರ್ಟ ಹತ್ಯಾಕಾಂಡ, ಕಲಬುರ್ಗಿ ಜಿಲ್ಲೆಯ ಮಳ್ಳಿ ಘಟನೆ, ಹೊನ್ನಾಳಿಯ ಬಾಬುರಾವ್ ಪಟೇಲ್ ಪಟೇಲರ ಮನೆ ಹಾಗೂ ಗ್ರಾಮ ಆಹುತಿ, ಮುಚಳಂಬದ ನರಮೇಧ ಘಟನೆಗಳು ರಜಾಕಾರರ ವಿರುದ್ಧ ಹೋರಾಡಿದ ಸಾಕ್ಷಿಗಳಾಗಿ ಇಂದು ಸಹ ಜಿವಂತ ಸಾಕ್ಷಿಯಾಗಿ ಕಣ್ಣುಮುಂದೆ ಇವೆ,

ರಜಾಕರ ಮತ್ತು ನಿಜಾಂ ಸರ್ಕಾರದ ಪೊಲೀಸ್ ದೌರ್ಜನದ ವಿರುದ್ಧ ಅಸಖ್ಯಾತ ಹಿಂದುಗಳು ದಂಗೆ ಎದ್ದದ್ದು ಹಾಗೂ ಭಾರತ ಸರಕಾರದ ರಾಜಿಗೆ ಒಪ್ಪದ ಕಾರಣ, ಭಾರತ ಸರ್ಕಾರದ ಉಪಪ್ರಧಾನಿ ಹಾಗೂ ಗೃಹ ಸಚಿವರಾದ ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಭಾಯಿ ಪಟೇಲರ ಧಿಟ್ಟ ನಿರ್ಧಾರದಿಂದ ಆಪರೇಷನ್ ಪೋಲೋ ಹೆಸರಿನಲ್ಲಿ 1948ರ ಸೆಪ್ಟೆಂಬರ್ 13 ರಂದು ಪೊಲೀಸ್ ಕಾರ್ಯಾಚರಣೆ ಪ್ರಾರಂಭಿಸಲು ನಿರ್ಧರಿಸಿತು. ಆಗಲು ಸಹ ಪ್ರಧಾನಿ ಪಂಡಿತ್ ನೆಹರು ಕಾರ್ಯಚರಣೆ ಆಗಬಾರದೆಂದು ಹಾಗೂ ನಿಜಾಮನ ಮನವೊಲಿಸಿ ಎಂದು ಸಲಹೆ ನೀಡಿದರು. ಆದರೆ ಗ್ರಹ ಸಚಿವ ಸರ್ದಾರ್ ವಲ್ಲಬಾಯ್ ಪಟೇಲ್ ರವರು ಆಪರೇಷನ್ ಪೋಲೋ 13ನೇ ಸೆಪ್ಟೆಂಬರ್ 1948ರ ಬೆಳಗಿನ ಜಾವ ಕಾರ್ಯಚರಣೆ ಪ್ರಾರಂಭಿಸಿದರು ಹೈದರಾಬಾದ್ ಪ್ರಾಂತದ ನಾಲ್ಕು ದಿಕ್ಕುಗಳಲ್ಲಿ ಭಾರತದ ಸೈನ್ಯ ಸನ್ನದ್ಧವಾಯಿತು ಪೂರ್ವಕ್ಕೆ ವಿಜಯವಾಡ ಉತ್ತರ ಮತ್ತು ಪಶ್ಚಿಮಕ್ಕೆ ಸೋಲಾಪುರ ಮತ್ತು ದಕ್ಷಿಣಕ್ಕೆ ಹೊಸಪೇಟೆಯಿಂದ ಆಪರೇಷನ್ ಪ್ರಾರಂಭವಾಯಿತು. ಸೊಲ್ಲಾಪುರ್, ಅಹಮ್ಮದನಗರ ನಗರ್ ಮಧ್ಯಪ್ರಾಂತ ಮದ್ರಾಸ್ ಮತ್ತು ಮೈಸೂರ್ ಕಡೆಗಳಿಂದ ಜನರಲ್ ರಾಜೇಂದ್ರ ಸಿಂಹ ಜಡೇಜಾ, ಮೇಜರ್ ಜನರಲ್ ಅಜಿತ್ ರುದ್ರ ಇದರ ನೇತೃತ್ವವನ್ನು ವಹಿಸಿದರು. ಈ ಅನಿರೀಕ್ಷಿತ ದಾಳಿಯಿಂದ ನಿಜಾಮನ ಸೈನ್ಯ ಕಂಗೆಟ್ಟು ಹೋಯಿತು ಮೊದಲು ಉದಗಿರಿ ವಶವಾಯಿತು. ಅದೇ ಸಮಯದಲ್ಲಿ ಗೋರ್ಖ ರೈಫಲ್ಸ್ ಮತ್ತು ಎಂಟನೇ ಅಶ್ವಥ್ ಸೈನ್ಯದ ಕ್ವಾಟ್ರನ್ ಉಸ್ಮಾನಬಾದ್ ಮೇಲೆ ದಾಳಿ ಮಾಡಿತು. ಮೂರನೇ ದಿನ ಜಲನವನ್ನು ವಶಪಡಿಸಿಕೊಳ್ಳಲು ಉಳಿದ ಪಡೆಗಳು ಲಾತರಿಗೆ ಮತ್ತು ನಂತರ ಮೋಮಿನ್‌ಬಾದಿಗೆ ಸ್ಥಳಾಂತರಗೊಂಡರು ಅಲ್ಲಿ ಅವರು ಗೊಲಕುಂಡದ ವಿರುದ್ಧ ಹೋರಾಟ ಮಾಡಿದರು. ನಾಲ್ಕನೇ ದಿನ ಲೆಫ್ಟಿನೆಂಟ್ ಕರ್ನಲ್ ರಾಮ್‌ಸಿಂಗ್ ನೇತೃತ್ವದ ಕಾರ್ಯ ಪಡೆಯು ಮುಂಜಾನೆ ಜಹಿರಬಾದ ಕಡೆಗೆ ಚಲಿಸಿತು, ಸೈನ್ಯ ಸೊಲ್ಲಾಪುರ ಹೈದರಾಬಾದ್ ಹೆದ್ದಾರಿಯ ಬೀದರ ಜಂಕ್ಷನ್ ತಲುಪಿದಾಗ ರಜಾಕಾರರಿಂದ ಹಾಗೂ ನಿಜಾಮ ಪೋಲಿಸರಿಂದ ಗುಂಡಿನ ದಾಳಿಯನ್ನು ಎದುರಿಸಲಾಯಿತ್ತು. ಮುಂದೆ ಯುದ್ಧಕ್ಕೆ ವಿರಳ ಪ್ರತಿರೋಧದ ಎದುರಿಸಲಾಯಿತ್ತು. ನಾಲ್ಕನೇ ದಿನ ಸನ್ನಿಹಿತವಾತ ಸೋಲನ್ನು ಎದುರಿಸಿದ ನಿಜಮನು ತಮ್ಮ ಪ್ರಧಾನ ಮಂತ್ರಿ ಮೀರಿ ಲೈಕ್‌ಅಲಿಯನ್ನು ಕರೆಸಿ ಶರಣಾಗತಿಯನ್ನು ಸೂಚಿಸಿದನು. ಇಡಿ ನಿಜಾಂ ಸಚಿವ ಸಂಪುಟ ರಾಜಿನಾಮೆಯನ್ನು ನೀಡಿತು. ಐದನೇ ದಿನ 17 ಸೆಪ್ಟೆಂಬರ್ 1948 ಮುಂಜಾನೆ ಭಾರತೀಯ ಸೈನ್ಯದಿಂದ ಹೈದರಾಬಾದ್ ಸೈನ್ಯ ಮತ್ತು ರಜಾಕಾರರು ಎಲ್ಲಾ ರಂಗಗಳಲ್ಲಿ ಮತ್ತು ಅತ್ಯಂತ ಭಾರಿ ಸಾವು ನೋವುಗಳೊಂದಿಗೆ ಸೋಲು ಉಂಟಾಗಿರುವುದು ನಿಜಾಮನಿಗೆ ಸ್ಪಷ್ಟವಾಯಿತು ಸಂಜೆ 5:00 ಗಂಟೆಗೆ ನಿಜಾಮನು ಕದನ ವಿರಾಮವನ್ನು ಘೋಷಿಸಿದನು. ಶಶಸ್ತ್ರ ಕಾರ್ಯಚರಣೆಗೊಳಿಸಿ ಕೊನೆಗೊಳಿಸಿದನು. ನಿಜಾಮ ಮೀರ ಅಲಿ ಮೊದಲ ಬಾರಿಗೆ ರೇಡಿಯೋ ಮೂಲಕ ಶರಣಾಗತಿಪಡಿಸಿದ್ದ.

ಕೇವಲ 100 ಗಂಟೆಗಳಲ್ಲಿ ಅಪರೇಷನ್ ಪೋಲೊ ಯಾವುದೇ ಹೆಚ್ಚಿನ ಅನಾಹುತ ಸಂಭವಿಸದ ರೀತಿ, ಶಿಸ್ತು ಮತ್ತು ಸಂಯಮದಿಂದ ವತಿಸಿ ಕ್ರಿಯಾಶೀಲತೆ ಮೆರೆದ ಭಾರತದ ಸೈನಿಕರು, ರಜಾಕಾರರ ದೌರ್ಜನ್ಯ ತಡೆಗಟ್ಟಿ ಭಾರತದ ಸರ್ಯನ್ಯಗೆ ಸಹಾಯ ಮಾಡಿರುವ ನಮ್ಮ ಹೈದ್ರಬಾದ ವಿಮೋಚನೆಗಾಗಿ ಹೊರಾಡಿದ ಹೊರಾಟಗಾರರಿಂದ ಸ್ವಾತಂತ್ರ ದೇಶದಲ್ಲಿಯೆ ಸ್ವಾತಂತ್ರ ಪಡೆದಿದು ಒಂದು ವರ್ಷ ಒಂದು ತಿಂಗಳ ಎರಡು ದಿನದ ನಂತರ ಹೈದ್ರಬಾದನಲ್ಲಿ ಅಸಫಿಯಾ ಧ್ವಜ ಇಳಿಸಿ ಭಾರತದ ತ್ರಿವರ್ಣ ಧ್ವಜ ಹಾರಿಸಿದ ವಿಜ್ರಂಭಣೆಯ ಹೈದ್ರಬಾದ ವಿಮೋಚನೆಯ ಅಮೃತಮೊಹತ್ಸವದ ಆಚರಣೆಯಲ್ಲಿ ಇದ್ದೇವೆ.

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ದೂ: 080–23449933/34
ಇ–ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ: 080–23525546.
ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299
ಬೆಳಗಾವಿ ಪ್ರಾಂತೀಯ ಕಛೇರಿ : 1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.
ಕಲಬುರಗಿ ಪಾಂತೀಯ ಕಛೇರಿ : ನಿವೇಶನ ಸಂಖ್ಯೆ 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003